**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 14–03–2025**

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಆರ ಎಸ ಕೆ ವಕೀಲರಿಂದಃ–**

ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತವು ಕಾರ ಚಾಲಕನಿಂದ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮದುವೆ ಆಗಿರುತ್ತದೆ. ಮೃತ ನನಗೆ ಅಣ್ಣನಾಗಬೇಕು. ನನ್ನ ಮದುವೆ ಆಗಿ 15 ವರ್ಷಗಳು ಆಗಿರುತ್ತದೆ. ನನ್ನನ್ನು ಹೊನ್ನಾವರಕ್ಕೆ ಮದುವೆ ಮಾಡಿ ಕೊಡಲಾಗಿದೆ. ನನಗೆ ಒಬ್ಬಳೆ ಮಗಳು ಇರುತ್ತಾಳೆ. ನನ್ನ ಮಗಳಿಗೆ ಈಗ 20 ವರ್ಷ ವಯಸ್ಸ ಆಗಿರುತ್ತದೆ. ಮದುವೆ ಆಗಿ ಒಂದು ವರ್ಷದ ನಂತರ ನನ್ನ ಗಂಡ ನನ್ನನ್ನು ಬಿಟ್ಟು ಹೋಗಿರುತ್ತಾರೆ. ನನ್ನ ಗಂಡ ಎಲ್ಲಿ ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಗಂಡ ಬಿಟ್ಟು ಹೋಗಿದ್ದಾನೆ ಎಂದು ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವುದಿಲ್ಲ. ನಾನು ಮದುವೆ ಮಾಡಿಕೊಂಡು ಹೋದಾಗ ನನ್ನ ಗಂಡನ ಮನೆಯಲ್ಲಿ ನನ್ನ ಅತ್ತೆ ಮತ್ತು ಮಾವ ಇದ್ದರು. ನನಗೆ ಅವರೊಂದಿಗೆ ಪಡಿತರ ಚೀಟಿ ಹೊನ್ನಾವರದಲ್ಲಿ ಇತ್ತು. ನಾನು ಮೃತ ನನ್ನ ಅಣ್ಣನ ಮನೆಯಲ್ಲಿ ಸುಮಾರು 15 ವರ್ಷಗಳಿಂದ ವಾಸ ಮಾಡುತ್ತಿದ್ದೆನು. ನಾನು ಮೃತನ ಮನೆಯಲ್ಲಿ ವಾಸ ಮಾಡುತ್ತಿದ್ದೆನು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಮೃತನ ನನ್ನ ಅಣ್ಣನ ಹೆಸರಿನಲ್ಲಿ ಟೆಂಪೊ ಇತ್ತು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದೆರ ಸರಿ. ಆತನಿಗೆ ತಿಂಗಳಿಗೆ ರೂ 20,000/– ಆದಾರಯ ಇತ್ತು ಎಂದು ತೋರಿಸಲು ಯಾವುದೇ ದಾಖಲಿಗಳು ಇರುವುದಿಲ್ಲ ಎಂದರೆ ಸರಿ. ನಾನು ಮೃತನ ಆದಾಯದ ಮೇಲೆ ನಾನು ಅವಲಂಬಿತರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರ ಚಾಲಕನಿಗೆ ಸೂಕ್ತ ಚಾಲನಾ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮೃತನ ಆದಾಯಕ್ಕೆ ಅವಲಂಬಿತರ ಆಗಿರುವುದಿಲ್ಲ ಆ ಕಾರಣ ನನಗೆ ಪರಿಹಾರ ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ.

ಮೃತನ ಮದುವೆ ಆಗಿತ್ತು ಆತನಿಗೆ ಹೆಂಡತಿ ಮಕ್ಕಳು ಇರುತ್ತಾರೆ , ಅವರನ್ನು ಪಕ್ಷಗಾರನಾಗಿ ಮಾಡದೆ ಪ್ರಕರಣ ದಾಖಲಿಸಿರುವುದರಿಂದ ನನಗೆ ಪರಿಹಾರ ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

sd/–

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 07-03-2025

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಅಪಘಾತವು ಎದುರಬದರು ವಾಹನಗಳಿಂದ ಆಗಿರುತ್ತದೆ. ನಾನು ಪ್ರತಿ ಗಂಟೆಗೆ 30 ಕಿ.ಮೀ. ವೇಗದಲ್ಲಿ ವಾಹನ ಚಲಾಯಿಸುತ್ತಿದ್ದೆನು. ಅಪಘಾತವಾನ್ನು ಕಣ್ಣಾರೆ ಕಂಡವರು ಯಾರೂ ಇಲ್ಲ ಎಂದರೆ ಸರಿ. ಪಿರ್ಯಾದಿಯನ್ನು ನನ್ನ ಹೆಂಡತಿ ರಮಾ ದಾಖಲಿಸಿರುತ್ತಾರೆ. ನನಗೆ ಡಿ.ಎಲ್. ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪಿರ್ಯಾದಿಯನ್ನು ಸುರೇಶ ನಾಯ್ಕ ಎನ್ನವವರು ವಿರುದ್ಧ ದಾಖಲಿಸಲಾಗಿದೆ. ಸದರಿ ಸುರೇಶ ನಾಯ್ಕ ಎನ್ನುವವರು ಆಪಾದಿತ ವಾಹನವನ್ನು ಚಲಾಯಿಸುತ್ತಿದ್ದರು. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಮಧ್ಯ ರಸ್ತೆಯಲ್ಲಿ ಆಗಿದೆ ಎಂದರೆ ಸಾಕ್ಷಿ ನಾನು ನನ್ನ ರಸ್ತೆಯ ಬದಿಯಲ್ಲಿ ಹೋಗುತ್ತಿದ್ದೆ. ಆದರೆ ಆಪಾದಿತ ವಾಹನದ ಚಾಲಕ ನನಗೆ ಢಿಕ್ಕಿಪಡಿಸಿದ ನಂತರ ರಸ್ತೆಗೆ ಹೋಗಿ ಬಿದ್ದೆ ಎಂದು ನುಡಿಯುತ್ತಾರೆ. ರಸ್ತೆಯು ಅಂದಾಜು 12 ಅಡಿ ಅಗಲವಿರುತ್ತದೆ. ಸದರಿ ರಸ್ತೆಯಲ್ಲಿ ಎರಡು ವಾಹನಗಳು ದಾಟಲು ಸಾಧ್ಯವಾಗುತ್ತಿರಲಿಲ್ಲ. ಸದರಿ ದಿನ ನಾನು ಮನೆಯಿಂದ ಅಂಗಡಿಗೆ ಹೋಗುತ್ತಿದ್ದೆನು. ಅಂದರೆ, ನನ್ನ ಮನೆ ಮಾರ್ಕಂಡೇಶ್ವರ ವಾಡಿಯಿಂದ ಮಾರ್ಕೆಟ್ ಗೆ ಹಾಲು ತರಲು ಹೋಗುತ್ತಿದ್ದೆನು. ಮಾರ್ಕೆಟ್ ಕಡೆಗೆ ಹೋಗುವ ರಸ್ತೆಯ ಸ್ವಲ್ಪ ದೂರದಲ್ಲಿ ತಿರುವು ಪಡೆದುಕೊಂಡು ಹೋದರೆ, ಆ ರಸ್ತೆ ಮುರ್ಡೇಶ್ವರಕ್ಕೆ ಹೋಗುತ್ತದೆ. ಆಪಾದಿತ ವಾಹನದ ಚಾಲಕ ಮುರ್ಡೇಶ್ವರದಿಂದ ನಮ್ಮ ಮನೆಯ ಕಡೆಗೆ ಬರುತ್ತಿದ್ದನು. ನಾನು ಸದರಿ ದಿನ ರಸ್ತೆಯ ತಪ್ಪು ಬದಿಯಿಂದ ಹೋಗುತ್ತಿದ್ದರಿಂದ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. 1 ನೇ ಎದುರುದಾರನ ಆಪಾದಿತ ಚಾಲಕನಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚಾಲಕನಿಗೆ ಚಾಲನಾ ಪರವಾನಿಗೆ ಇಲ್ಲದೇ ಇರುವುದರಿಂದ 1ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಹೇಳಿದ ಆರೋಪಿ, 2ನೇ ಎದುರುದಾರನ ತಮ್ಮ ಎಂದರೆ ಸರಿ. 2ನೇ

ಎದುರುದಾರ, ನಾನು ಮತ್ತು ಆರೋಪಿ ಸೇರಿಕೊಂಡು ಪರಿಹಾರ ಪಡೆಯಲು ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೊದಲು ನನ್ನನ್ನು ಆರ್.ಎನ್.ಎಸ್. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಂದ ನನ್ನನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸಂಪೂರ್ಣ ಚಿಕಿತ್ಸೆಯನ್ನು ನಾನು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ನನ್ನ ಅರ್ಜಿಯಲ್ಲಿ ಕೆ.ಎಂ.ಸಿ. ಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಾಗಿ ಹೇಳಿ ಬರೆಸಿರುವುದಿಲ್ಲ. ನಾನು ಮೇಲೆ ಹೇಳಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮತ್ತು ಚಿಕಿತ್ಸೆಗೆ ರೂ.2,00,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.40,000/- ಆದಾಯ ಗಳಿಸುತ್ತಿದ್ದೇನೆ ಎಂದು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ನಾನು ದೇವಸ್ಥಾನದಲ್ಲಿ ಪೌರೋಹಿತ್ಯ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಪೌರೋಹಿತ್ಯ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಎಡಬದಿಯ ಕಿವಿ ಕೇಳಿಸುವುದಿಲ್ಲ. ನನಗೆ ಕಿವಿ ಸರಿಯಾಗಿ ಕೇಳಿಸುತ್ತಿದೆ, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಎಡಬದಿಯ ಭುಜದಲ್ಲಿ ಪ್ಲೇಟ್ ಹಾಕಿರುತ್ತಾರೆ. ಅದನ್ನು ಹೊರತೆಗೆಯುವ ಬಗ್ಗೆ ವೈದ್ಯರು ಹೇಳಿರುವುದಿಲ್ಲ. ನಾನು ನನ್ನ ಎಡಬದಿಯ ಭುಜಕ್ಕೆ ಪ್ಲೇಟ್ ಹಾಕಿರುವುದನ್ನು ನನ್ನ ಅರ್ಜಿಯಲ್ಲಿ ಹೇಳಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು, ವೈದ್ಯರು ಎಡಭುಜದ ಎಲುಬು ಸ್ವಲ್ಪ ಜಾಯಿಂಟ್ ತಪ್ಪಿದಕ್ಕಾಗಿ ಪ್ಲೇಟ್ ಹಾಕಲಾಗಿದೆ, ಅದರಿಂದ ಯಾವುದೇ ತೊಂದರೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಪಘಾತದಲ್ಲಿ ಗಾಯಗೊಂದಡ ಎಲ್ಲಾ ಗಾಯಗಳು ಈಗ ಸಂಪೂರ್ಣ ಗುಣವಾಗಿರುತ್ತದೆ. ನಾನು ಮೊದಲಿನಂತೆಯೇ ಸಾಮಾನ್ಯ ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ

ಆಗಿದ್ದರಿಂದ 1ನೇ ಎದುರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 3 ನೇ ಎದುರುದಾರರ ಪರ ಎಸ್.ಎಂ.ಬಿ. ವಕೀಲರಿಂದಃ-**

ಸದರಿ ದಿನ ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ವಾಹನ ನನ್ನದೇ ಮಾಲ್ಕಿಯದ್ದಾಗಿತ್ತು. ನನ್ನ ಮಾಲ್ಕಿಯ ವಾಹನಕ್ಕೆ 3ನೇ ಎದುರುದಾರನೊಂದಿಗೆ ವಿಮಾ ಪಾಲಿಸಿ ಇತ್ತು ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ, ಅದನ್ನು ಈಗಾಗಲೇ ನಿಪಿ-108 ಎಂದು ಗುರುತಿಸಲಾಗಿದೆ ಎಂದರೆ ಸರಿ. ನನಗೆ ಡಿ.ಎಲ್. ಇರುತ್ತದೆ. ಅದನ್ನು ಹಾಜರುಪಡಿಸಿರುತ್ತೇನೆ. ಅದನ್ನು ಈಗಾಗಲೇ ನಿಪಿ-107 ಎಂದು ಗುರುತಿಸಲಾಗಿದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ನನ್ನ ವಾಹನವನ್ನು ನಿಧಾನಗತಿಯಲ್ಲಿ ಕಾಳಜಿಪೂರ್ವಕವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದೆನು. ಎದುರುಬದಿಯಿಂದ ಚಲಾಯಿಸಿಕೊಂಡು ಬರುತ್ತಿದ್ದ ವಾಹನದ ಚಾಲಕ ತನ್ನ ವಾಹನವನ್ನು ಅತೀ ವೇಗವಾಗಿ ಅಂದರೆ ಸುಮಾರು ಗಂಟೆಗೆ 70 ಕಿ.ಮೀ. ಗಿಂತ ಹೆಚ್ಚಿನ ವೇಗದಲ್ಲಿ ಬರುತ್ತಿದ್ದ. ಅಪಘಾತದ ಸಂಬಂಧ ಪೊಲೀಸರು ನನ್ನ ಮೇಲೆ ಪ್ರಕರಣ ದಾಖಲಿಸಿರುವುದಿಲ್ಲ. ಆದರೆ ಎದುರನಿಂದ ಬರುತ್ತಿದ್ದ ವಾಹನದ ಚಾಲಕನ ಮೇಲೆ ಪ್ರಕರಣದ ದಾಖಲಿಸಿರುತ್ತಾರೆ. ನಾನು ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಆಸ್ಪತ್ರೆಗಾಗಿ, ತಿರುಗಾಟಕ್ಕಾಗಿ, ಊಟ ತಿಂಡಿಗಾಗಿ ಖರ್ಚು ಮಾಡಿದ್ದೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಅಂಗ್ಯೂನ್ಯತೆ ಆಗಿಲ್ಲವಾದೂರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿ ತಿಂಗಳು ರೂ.40,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಎಡಬದಿಯ ಕಿವಿ ಕೇಳಿಸುವುದಿಲ್ಲ. ನನಗೆ ಕಿವಿ ಸರಿಯಾಗಿ ಕೇಳಿಸುತ್ತಿದೆ, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಜ್ಞಾಪಕ ಶಕ್ತಿ ಕಡಿಮೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಎದುರುದಾರ ಅವಶ್ಯಕ ಪಕ್ಷಗಾರನಲ್ಲದೇ ಇದ್ದರೂ ಸಹ ಅವರನ್ನು ಪಕ್ಷಗಾರನಾಗಿ



ಮಾಡಿದ್ದರಿಂದ ಅವರ ಖರ್ಚು ವೆಚ್ಚಗಳನ್ನು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಪರಿಹಾರ ಏನಾದರೂ ಕೊಡಬೇಕಾದರೆ, 1 ಮತ್ತು 2ನೇ ಎದುರುದಾರರು ಮಾತ್ರ ಕೊಡಬೇಕಾಗುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ</u> 2ನೇ ಎದುರುದಾರರ ಪರ ಶ್ರೀ ಯು ಎನ್ ಎನ್ ವಕೀಲರಿಂದಃ-**

ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 01-03-2025

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎನ್ ಈ ಹೆಚ್ ವಕೀಲರಿಂದಃ-**

ಅಪಘಾತದ ದಿನ ನಾನು ದ್ವಿಚಕ್ರ ವಾಹನದಲ್ಲಿ ಶಂಶುದ್ದೀನ್ ಸರ್ಕಲ್ ನಿಂದ ಜಾಲಿಯಲ್ಲಿರುವ ನನ್ನ ಮನೆಗೆ ಹೋಗುತ್ತಿದ್ದೆನು. ನಾನು ಚಲಾಯಿಸುತ್ತಿದ್ದ ವಾಹನ ಲಕ್ಷ್ಮಣ ನಾಯ್ಕ ಎನ್ನುವವರದ್ದಾಗಿತ್ತು. ನನಗೆ ವಾಹನ ಚಾಲನಾ ಪ್ರಮಾಣ ಪತ್ರ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತದ ಸ್ಥಳವು ದಕ್ಷಿಣೋತ್ತರವಾಗಿರುತ್ತದೆ ಎಂದರೆ ಸರಿ. ಅಪಘಾತ ಸ್ಥಳವು ರಾ.ಹೆ. ಎಂದರೆ ಸರಿ. ಅಪಘಾತವು ರಸ್ತೆಯ ಪೂರ್ವ ಅಂಚಿನಿಂದ ಪಶ್ಚಿಮಕ್ಕೆ ಎರಡು ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತವಾದಾಗ ನನಗೆ ಸ್ವಲ್ಪ ಪ್ರಜ್ಞೆ ಇತ್ತು. ನಂತರ ಪ್ರಜ್ಞೆ ತಪ್ಪಿದ್ದು, ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಬಂದಿರುತ್ತದೆ. ಅಪಘಾತವಾದ ವಿಚಾರವನ್ನು ವೈದ್ಯರಿಗೆ ನಾನು ತಿಳಿಸಿರುವುದಿಲ್ಲ. ಏಕೆಂದರೆ, ನನ್ನ ಬಲ ಬದಿಯ ಬಾಯಿಯ ಹತ್ತಿರ ಗಾಯವಾಗಿತ್ತು. ನನಗೆ ಮಾತನಾಡಲು ಆಗುತ್ತಿರಲಿಲ್ಲ. ನನ್ನನ್ನು ನನ್ನ ಗೆಳೆಯ ಆಸಿಫ್ ಎನ್ನುವವರು ಆಸ್ಪತ್ರೆಗೆ ಸೇರಿಸಿರುತ್ತಾರೆ. ನನ್ನ ಗೆಳೆಯ ಆಸಿಫ್ ಎನ್ನುವವರು ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಭಟ್ಕಳದಲ್ಲಿ ಅಪಘಾತದಲ್ಲಿ ಗಾಯವಾಗಿದೆ ಎಂದು ತಿಳಿಸಿರುತ್ತಾರೆ. ಅದನ್ನು ಆಸ್ಪತ್ರೆಯವರು ಬರೆದುಕೊಂಡಿರುತ್ತಾರೆ. ಅದೇ ದಿನ ನನ್ನನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನನಗೆ ಅಪಘಾತದಲ್ಲಿ ಗಾಯವಾದ ವಿಷಯ ಹೇಳಿರುತ್ತೇನೆ. ಅದನ್ನು ವೈದ್ಯರು ಬರೆದುಕೊಂಡಿರುತ್ತಾರೆ. ನಾನು ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿದ್ದಾಗ ನನ್ನ ತಂದೆ ತಾಯಿ ಮತ್ತು ನನ್ನ ಹೆಂಡತಿ ಬಂದಿದ್ದರು. ನನ್ನ ಸ್ನೇಹಿತ ಆಸಿಫ್ ನನ್ನ ತಂದೆ ತಾಯಿ ಮತ್ತು ಹೆಂಡತಿಗೆ ಅಪಘಾತದಲ್ಲಿ ಗಾಯಗೊಂಡಿರುವುದಾಗಿ ಹೇಳಿರುತ್ತಾರೆ. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯು ಸರಕಾರಿ ಆಸ್ಪತ್ರೆ ಎಂದರೆ ಸರಿ.

ಅಪಘಾತವಾದ 4-5 ದಿನಗಳ ನಂತರ ನನ್ನ ಹೆಂಡತಿ ದೂರು ಸಲ್ಲಿಸಿರುತ್ತಾರೆ. ದೂರು ಸಲ್ಲಿಸಲು ನನ್ನ ಹೆಂಡತಿ ಹೋಗುವಾಗ ಈಗ ನ್ಯಾಯಾಲಯದಲ್ಲಿ ಹೇಳಿದ ಸ್ಥಳದಲ್ಲಿಯೇ ಅಪಘಾತವಾಗಿದೆ ಎಂದು ಹೇಳಿದ್ದೆನು. ಕೆ.ಎಂ.ಸಿ. ಆಸ್ಪತ್ರೆಯಲ್ಲಿ ನಾನು

ಸುಮಾರು 14 ದಿನಗಳ ವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆಗ ನನ್ನೊಂದಿಗೆ ನನ್ನ ಗೆಳೆಯ ಆಸಿಫ್ ಇದ್ದರು. ಕೆ.ಎಂ.ಸಿ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುತ್ತಿದ್ದಾಗ ದಿ.08-06-2023 ರಂದು ಶಸ್ತ್ರಚಿಕಿತ್ಸೆ ಮಾಡಿ ಗಾಯವಾದ ಭಾಗಕ್ಕೆ ಪ್ಲೇಟ್ ಹಾಕಿ ಹೊಲಿಗೆ ಹಾಕಿರುತ್ತಾರೆ. ನನ್ನ ಮುಖಕ್ಕೆ ಮತ್ತು ನನ್ನ ತಲೆಗೆ ಸ್ವಲ್ಪ ಗಾಯದ ಹೊರತು ನನ್ನ ದೇಹದ ಬೇರೆ ಭಾಗಕ್ಕೆ ಗಾಯವಾಗಿಲ್ಲ ಎಂದರೆ ಸರಿ. ನನಗೆ ಆದ ಗಾಯಗಳು ಸಾದಾ ಸ್ವರೂಪದ್ದಾಗಿದೆ ಎಂದರೆ ಸರಿಯಲ್ಲ. ಆದರೂ ಸಹ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನ್ಯೂನ್ಯತೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ದಿನಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ, ಚಿಕಿತ್ಸೆಗೆ ಹಣ ಖರ್ಚು ಮಾಡಿಲ್ಲ, ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನ್ನೊಂದಿಗೆ ನನ್ನ ಸ್ನೇಹಿತ ಇದ್ದ, ಆತನಿಗೆ ಮಾಡಿದ ಖರ್ಚಿನ ವಿವರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಒಳಸಾಧನವನ್ನು ಹೊರತೆಗೆಯಲು ರೂ.50,000/- ಖರ್ಚು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆಪಾದಿತ ವಾಹನ ಚಾಲಕನಿಗೆ ಡಿ.ಎಲ್ ಇರಲಿಲ್ಲವಾದ್ದರಿಂದ, ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ, ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಸ್ತ್ರಿ ಕೆಲಸ ಮಾಡುತ್ತಿದ್ದೇನೆ. ನಾನು ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ



ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಹೇಳಿದಷ್ಟು ಆದಾಯ ಇರಲಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 01-03-2025

**<u>ಮುಂದುವರಿದ ಮುಖ್ಯ ವಿಚಾರಣೆಃ</u> ಅರ್ಜಿದಾರರ ಪರ ಶ್ರೀ ಆರ್.ಎಂ.ಎನ್. ವಕೀಲರ ಪರವಾಗಿ ಶ್ರೀ ಎಸ್.ಆರ್.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ನಿವೇದನಾ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಶವ ಪಂಚನಾಮೆ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 5 ಎಂದು ಗುರುತಿಸಲಾಯಿತು. ಐ.ಎಂ.ವಿ. ವರದಿಯ ಪ್ರತಿ, ಪಿ.ಎಂ. ವರದಿ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು ಗುರುತಿಸಲಾಯಿತು. ಒಂದು ದೃಢೀಕರಿಸಿದ ನಕ್ಷೆ ಮತ್ತು ಫೋಟೊ, ವಾಹನ ಪಂಚನಾಮೆ ಪ್ರತಿ ಮತ್ತು ಫೋಟೊ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 12 ಎಂದು ಗುರುತಿಸಲಾಯಿತು. ನೋಟರಿಯವರಿಂದ ಎರಡು ಆಧಾರ ಪ್ರತಿ, ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-13 ರಿಂದ 15 ಎಂದು ಗುರುತಿಸಲಾಯಿತು. ದೃಢೀಕರಿಸಿದ ಖಾಸಗಿ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು‌ಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 28-02-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಪಿ.ಎಂ. ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮಾವಾಗಿ ನಿಪಿ-1 ರಿಂದ 3 ಎಂದು ಗುರುತಿಸಲಾಯಿತು. ಒಂದು ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಎರಡು ನೋಟರೈಸ್ಡ್ ಮಾಡಿದ ಜೆರಾಕ್ಸ್ ಆಧಾರ ಪ್ರತಿಗಳನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು. ಅದೇ ರೀತಿ, ಮೃತನ ವಂಶ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

1ನೇ ಮತ್ತು 2ನೇ ಎದ್ರುದಾರ ಎಕ್ಸ್‌ಪಾರ್ಟಿಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

- 2 -

**ಪಾಟೀ ಸವಾಲುಃ 3ನೇ ಎದುರುದಾರರ ಪರ ವಕೀಲರಿಂದಃ-**

(ಈ ಹಂತದಲ್ಲಿ 3ನೇ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ, ಪ್ರಕರಣವನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 28-02-2025

ಮುಂದುವರಿದ ಪಾಟೀ ಸವಾಲುಃ **ಮಧ್ಯಂತರ ಅರ್ಜಿ ನಂ.3 ರ ಆದೇಶದಂತೆ, 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಅಪಘಾತವಾದ ದಿನ ನಾನು ರಸ್ತೆ ದಾಟುತ್ತಿದ್ದೆನು. ಸ್ಕೂಟಿ ವಾಹನವು ಭಟ್ಕಳದ ಬಸ್ ನಿಲ್ದಾಣದ ಕಡೆಯಿಂದ ಹೊನ್ನಾವರದ ಕಡೆಗೆ ಹೋಗುತ್ತಿತ್ತು. ಅಪಘಾತವನ್ನು ಜಾಲಿಯ ಕೃಷ್ಣಾ ನಾಯ್ಕ ಎನ್ನುವವರು ನೋಡಿರುತ್ತಾರೆ. ದೂರನ್ನು ನನ್ನ ಭಾವ ಗಜಾನನ ಗೋವಿಂದ ಮೊಗೇರ ರವರು ನೀಡಿರುತ್ತಾರೆ. ಅಪಘಾತವಾದ ನಂತರ ನನ್ನನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಒಂದು ತಾಸಿನ ವರೆಗೆ ಇದ್ದು, ನಂತರ ಕುಂದಾಪುರದ ವಿವೇಕ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ರಸ್ತೆ ದಾಟುತ್ತಿದ್ದಾಗ, ರಸ್ತೆಯಲ್ಲಿ ಬರುವ ಹೋಗುವ ವಾಹನಗಳನ್ನು ನೋಡದೇ ಅಚಾನಕ್ಕಾಗಿ ರಸ್ತೆ ದಾಟುತ್ತಿದ್ದಾಗ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ.

ಅಪಘಾತವಾದ ದಿನ ಆಪಾದಿತ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಪಾದಿತ ವಾಹನದ ಚಾಲಕ ದಿ.21-02-2019 ರಂದು ಎಲ್.ಎಲ್.ಆರ್. ಡಿ.ಎಲ್ ಪಡೆದುಕೊಂಡಿದ್ದ ಎಂದರೆ ಸರಿಯಲ್ಲ. ಸದರಿ ಡಿ.ಎಲ್.ನ ಅವಧಿ ದಿ.20-08-2019 ರಂದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಅಪಘಾತವಾದ ದಿನ ಆಪಾದಿತ ಚಾಲಕನಿಗೆ ಕಾನೂನು ಬದ್ಧವಾದ ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಪಾದಿತ ವಾಹನದ ಚಾಲಕ ಭಟ್ಕಳದ ನ್ಯಾಯಾಲಯದಲ್ಲಿ ಸಿ.ಸಿ. ನಂ.284/2019 ರ ಪ್ರಕರಣದಲ್ಲಿ ತನಗೆ ಡಿ.ಎಲ್. ಇರುವುದಿಲ್ಲ ಎಂದು ತಪ್ಪು ಒಪ್ಪಿಕೊಂಡು ನ್ಯಾಯಾಲಯದಲ್ಲಿ ದಂಡ ಕಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ದಿನ ಆಪಾದಿತ ವಾಹನದ ಚಾಲಕನಿಗೆ ಡಿ.ಎಲ್. ಇಲ್ಲದೇ ಇರುವುದರಿಂದ 2ನೇ ಎದುರುದಾರನು ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನದ ಮಾಲೀಕ ವಿಮಾ ಶರತ್ತನು ಉಲ್ಲಂಘನೆ ಮಾಡಿರುವುದರಿಂದ, 2ನೇ ಎದುರುದಾರನು ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ, ಆಸ್ಪತ್ರೆಗೆ ರೂ.2,00,000/-, ಊಟಕ್ಕೆ ಪ್ರತಿನಿತ್ಯ ರೂ.500/-, ವಾಹನ ಬಾಡಿಗೆ

ರೂ.15,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ಗಾಯವಾಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿ ತಿಂಗಳು ರೂ.25,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರನಿಂದ ವಿಮಾ ಪರಿಹಾರ ಪಡೆಯುುವ ಸಲುವಾಗಿ ನಾನು ಮತ್ತು 1ನೇ ಎದುರುದಾರರು ಶಾಮೀಲಾಗಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 22-02-2025

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್.ಎಸ್.ಬಿ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ, ಒಂದು ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-99 ಎಂದು ಗುರುತಿಸಲಾಯಿತು. ಅದೇ ರೀತಿ, ನಾಲ್ಕು ವೈದ್ಯಕೀಯ ವೆಚ್ಚ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-100 ರಿಂದ 103 ಎಂದು ಗುರುತಿಸಲಾಯಿತು. ಸಿ.ಸಿ.ನಂ.331/2023 ರ ನ್ಯಾಯಾಲಯದ ದಿನಚರಿ ಆದೇಶ ಪ್ರತಿ, ಚಾರ್ಜ್ ಶೀಟ್ ಪ್ರತಿ, ಅಟೆಸ್ಟೆಡ್ ಮಾಡಿದ ಆರ್.ಸಿ., ಡಿ.ಎಲ್. ಮತ್ತು ವಿಮಾ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನಿಪಿ-104 ರಿಂದ 108 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಮತ್ತು 2ನೇ ಎದುರುದಾರರ ಪರ ವಕೀಲರಿಂದಃ-**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 22-02-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್.ಎಂ.ಎನ್ ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರರ ಪರ ಸಾಕ್ಷಿ ನುಡಿಯುತ್ತಿದ್ದೇನೆ. ಅರ್ಜಿದಾರರಿಗೆ ನಾನು ನೀಡಿದ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್ ವಕೀಲರ ಪರವಾಗಿ ಶ್ರೀ ಆರ್.ಐ.ಎನ್. ವಕೀಲರಿಂದಃ-**

ನಮ್ಮ ಆಸ್ಪತ್ರೆಯಲ್ಲಿ ಅರ್ಜಿದಾರರು ಚಿಕಿತ್ಸೆ ಪಡೆಯುವಾಗ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ. ಸೌಲಭ್ಯ ಇರಲಿಲ್ಲ. ಆದರೆ ಎಕ್ಸರೇ ಸೌಲಭ್ಯ ಇರುತ್ತದೆ. ಅಂಗನ್ಯೂನ್ಯತೆಯನ್ನು ನಿಖರವಾಗಿ ಹೇಳಲು ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ. ಮಾಡಬೇಕಾಗುತ್ತದೆ ಎಂದರೆ ಸರಿ. ನಿಪಿ-21 ರಲ್ಲಿ ಅರ್ಜಿದಾರರಿಗೆ ನಮೂದಿಸಿದ ಅಂಗನ್ಯೂನ್ಯತೆ ಮತ್ತು ಎಕ್ಸರೇಯನ್ನು ನಾನು ವೈಯಕ್ತಿಕವಾಗಿ ವೈದ್ಯಕೀಯ ಪರೀಕ್ಷೆ ಮಾಡಿ ನೀಡಿರುತ್ತೇನೆ. ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿದ ನಂತರ ಅರ್ಜಿದಾರನ ಆರೋಗ್ಯ ಸ್ಥಿರವಾಗಿತ್ತು. ಅರ್ಜಿದಾರರಿಗೆ ರೂ.35,000/- ಖರ್ಚು ಬರುತ್ತದೆ ಎಂದು ನಾನು ಹೇಳಿರುತ್ತೇನೆ. ಆದರೆ ಅವರು ಸಾಮಾನ್ಯ ವಾರ್ಡಿನಲ್ಲಿ ಚಿಕಿತ್ಸೆ ಪಡೆದರೆ ಖರ್ಚು ವೆಚ್ಚ ಕಡಿಮೆ ಬರುತ್ತದೆ. ನಿಪಿ-21 ರಲ್ಲಿ ನಮೂದಿಸಿದ ಅಂಗನ್ಯೂನ್ಯತೆ ಇಡೀ ದೇಹಕ್ಕೆ 1/3ನೇ ಅಂಶ ಆಗುತ್ತದೆ. ನಮ್ಮ ಆಸ್ಪತ್ರೆಯಲ್ಲಿ ಸರಿಯಾದ ಅಂಗನ್ಯೂನ್ಯತೆ ಕಂಡು ಹಿಡಿಯುವ ಯಂತ್ರ ಮತ್ತು ವ್ಯವಸ್ಥೆಗಳು ಇರುವುದಿಲ್ಲ. ಆದ್ದರಿಂದ ಅರ್ಜಿದಾರರಿಗೆ ನಾನು ಹೇಳಿದಷ್ಟು ಅಂಗನ್ಯೂನ್ಯತೆ ಇರುವುದಿಲ್ಲ

- 4 - ಎಂ.ವಿ.ಸಿಃ 1/2022

ಪಿ.ಡಬ್ಲ್ಯುಃ 2

ಎಂದರೆ ಸರಿಯಲ್ಲ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಕಾರಣ, ಅವರಿಗೆ ಹೆಚ್ಚಿನ ಪರಿಹಾರ ಕೊಡಿಸುವ ಸಲುವಾಗಿ ಹೆಚ್ಚು ಅಂಗನ್ಯೂನ್ಯತೆ ನಮೂದಿಸಿ, ನಿಪಿ–21 ರಂತೆ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–21 ನ್ನು ಸುಳ್ಳಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಯು.ಎನ್.ಎನ್. ವಕೀಲರಿಂದಃ–**

ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 18-02-2025

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ನಾಲ್ಕು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 10 ರಿಂದ 13 ಎಂದು ಗುರುತಿಸಲಾಯಿತು. ಮೂರು ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು. ಅದೇ ರೀತಿ, ವೆನ್ಲಾಕ್ ಆಸ್ಪತ್ರೆ, ಮಂಗಳೂರಲ್ಲಿ ಹೊರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-15 ಎಂದು ಗುರುತಿಸಲಾಯಿತು. ಅದೇ ರೀತಿ, ಕೆ.ಎಂ.ಸಿ., ಆಸ್ಪತ್ರೆಯಲ್ಲಿ ಹೊರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-16 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದಃ-**

(ಈ ಹಂತದಲ್ಲಿ ಎದ್ರುರುದಾರರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಶ್ರೀ ಆರ್.ಐ.ಎನ್. ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 15-02-2025**

**ಮುಂದುವರಿದ ಮುಖ್ಯ ವಿಚಾರಣೆಃ ಮಧ್ಯಂತರ ಅರ್ಜಿ ನಂ.1 ರ ಆದೇಶದನ್ವಯ**

**ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ, ದೃಢೀಕರಿಸಿದ ಡಿಸ್ಚಾರ್ಜ್ ಸಮ್ಮರಿ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಪ್ರತಿಯ ಜೆರಾಕ್ಸ್ ಪ್ರತಿಯನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ, ಸದರಿ ಈ ಪ್ರತಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಇನ್ನೊಂದು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-38 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಮುಂದುವರಿದ ಪಾಟೀ ಸವಾಲುಃ 4ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ನಿಪಿ-16(ಎ) ಮೂಲ ಪ್ರತಿಯನ್ನು ವಿಮಾ ಕಂಪನಿಗೆ ಹಾಜರುಪಡಿಸಿ, ಪರಿಹಾರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಿನದವರೆಗೂ ಸಹ ನನಗೆ ಸರಕಾರದಿಂದ ಅಥವಾ ವಿಮಾ ಕಂಪನಿಯಿಂದ ಪರಿಹಾರ ಬಂದಿರುವುದಿಲ್ಲ. ನಿಪಿ-16(ಎ) ಯ ಮೂಲ ಪ್ರತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-16(ಎ) ಮೂಲ ಪ್ರತಿಯನ್ನು ವಿಮಾ ಕಂಪನಿಗೆ ಕೊಟ್ಟು ನಾನು ಈಗಾಗಲೇ ಪರಿಹಾರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-38 ನ್ನು ಆದರ್ಶ ಆಸ್ಪತ್ರೆಯವರು ನನ್ನನ್ನು ಸರಿಯಾಗಿ ಪರೀಕ್ಷೆಗೊಳಪಡಿಸದೇ ಶೇ.90% ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-16 ಮತ್ತು 16(ಎ) ದಾಖಲೆಗಳನ್ನು ಸುಳ್ಳಾಗಿ ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ, ನಾನು ಈಗಾಗಲೇ ಪರಿಹಾರ ಹಣ ಪಡೆದುಕೊಂಡಿರುವುದರಿಂದ ಎದುರುದಾರರು ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

2ನೇ ಎದುರುದಾರರ ಪರ ವಕೀಲರು ಶ್ರೀ ಎಸ್ ಎಂ ಎನ್, ಶ್ರೀ ಎಂ.ಎಲ್ ಎನ್ ಹೆಚ್ . ವಕೀಲರ ಪರವಾಗಿ ಹಾಜರಿದ್ದು, 4ನೇ ಎದುರುದಾರರ ಪರವಾಗಿ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 15-02-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆಃ</u> ಅರ್ಜಿದಾರರ ಪರ ಶ್ರೀ ಆರ್.ಎಂ.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರಳಾಗಿದ್ದೇನೆ. ಸದರಿ ಸಾಕ್ಷಿಯನ್ನು ನನ್ನ ಮತ್ತು ಇತರ ಅರ್ಜಿದರರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 14–02–2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಕೆ.ಎನ್. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ಮತ್ತು 2 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ಒಂದು ಇನ್ ಪೇಶೆಂಟ್ ಬಿಲ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–5 ಎಂದು ಗುರುತಿಸಲಾಯಿತು. ಒಟ್ಟು 88 ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ರಿಂದ 93 ಎಂದು ಗುರುತಿಸಲಾಯಿತು. ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ 94 ಎಂದು ಗುರುತಿಸಲಾಯಿತು. ನಾಲ್ಕು ಲ್ಯಾಬ್ ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–95 ಎಂದು ಗುರುತಿಸಲಾಯಿತು. ಮೂರು ವಾಹನ ಬಾಡಿಗೆ ರಶೀದಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅವುಗಳನ್ನು ಕ್ರಮವಾಗಿ ನಿಪಿ–96 ರಿಂದ 98 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

– 5 – ಎಂ.ವಿ.ಸಿಃ 66/2024

**ಪಿ.ಡಬ್ಲ್ಯು: 1**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 14-02-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 2ನೇ ಎದುರುದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಸಂಸ್ಥೆಯವರು ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ ಹಾಜರುಪಡಿಸಿದ್ದು, ಅದನ್ನು ನಿ.ಆರ್-2 ಎಂದು, ಒಂದು ವಿಮಾ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್-3 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು 2ನೇ ಎದ್ರುದಾರರ ವಿರುದ್ಧ ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದ ಮೃತ ಗಾಯಾಳು ಅಪಘಾತವಾದ ದಿನ ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸಾಕ್ಷಿ ಮೊದಲು ಆರ್.ಎನ್.ಎಸ್. ಆಸ್ಪತ್ರೆಗೆ ದಾಖಲಾಗಿ ನಂತರ, ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ನುಡಿಯುತ್ತಾರೆ. ಉಡುಪಿ ಆದರ್ಶ ಆಸ್ಪತ್ರೆಯವರು ಅದೇ ದಿನ ಮುರ್ಡೇಶ್ವರ ಠಾಣೆಗೆ ತಿಳಿಸಿರುತ್ತಾರೆ ಎಂದರೆ ಸರಿ. ಎಂ.ಎಲ್.ಸಿ. ಪತ್ರದಲ್ಲಿ ಮತ್ತು ಆಸ್ಪತ್ರೆಯ ದಾಖಲೆಯಲ್ಲಿ ಮೃತನು ಅಪಘಾತದಲ್ಲಿ ಗಾಯಗೊಂಡು ಮೃತನಾಗಿದ್ದನು ಎಂದು ಬರೆದಿರುತ್ತಾರೆ ಎಂದರೆ ಸರಿ. ಆ ವಿಚಾರವಾಗಿ ಮುರ್ಡೇಶ್ವರ ಪೊಲೀಸರು ಸರಿಯಾಗಿ ತನಿಖೆ ಮಾಡಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು, ತನಿಖೆ ಸರಿಯಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಸರಿಯಾಗಿ ತನಿಖೆ ಮಾಡಿಲ್ಲ

ಎಂದು ಮೇಲಾಧಿಕಾರಿಗಳಿಗೆ ಪತ್ರ ಬರೆದಿರುತ್ತೇವೆ. ಆದರೆ, ಅದರ ವಿಚಾರವಾಗಿ ನಮಗೆ ಯಾವುದೇ ಹಿಂಬರಹ ಬಂದಿರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ವಿಮಾ ಕಂಪನಿಯಿಂದ ಖಾಸಗಿ ತನಿಖೆಯನ್ನು ಮಾಡಿರುತ್ತೇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಪಘಾತದ ಸಮಯದಲ್ಲಿ 1ನೇ ಎದುರುದಾರನಿಗೆ ಡಿ.ಎಲ್. ಇತ್ತು ಎಂದರೆ ಸರಿ. ಆಪಾದಿತ ವಾಹನವು third party ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಮೃತ ಗಾಯಾಳು third party ಆಗಿರುತ್ತಾರೆ ಎಂದರೆ ಸರಿ. ಅಪಘಾತದ ವಿಚಾರವಾಗಿ ಪ್ರತ್ಯಕ್ಷ ಸಾಕ್ಷಿದಾರನ ವಿಚಾರಣೆ ನಾವು ಮಾಡಿಲ್ಲ ಎಂದರೆ ಸರಿ. 1ನೇ ಎದುರುದಾರನಿಗೆ ಅಪಘಾತದ ಸಮಯದಲ್ಲಿ ಸೂಕ್ತ ಡಿ.ಎಲ್. ಇತ್ತು ಮತ್ತು ಆಪಾದಿತ ವಾಹನಕ್ಕೆ ಸೂಕ್ತ ವಿಮಾ ಇರುವುದರಿಂದ ನಮ್ಮ ಸಂಸ್ಥೆಯವರು ಅರ್ಜಿದಾರರಿಗೆ ಸರಿಯಾದ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 14-02-2025.**

**ಪಾಟೀಸವಾಲುಃ- 1ನೇ ಎದುರುದಾರರ ಪರ ಶ್ರೀ ಎಂ.ಜಿ. ವಕೀಲರಿಂದಃ-**

ಆಪಾದಿತ ವಾಹನ ನಂ.ಕೆ.ಎ.28/ಎಂ-4844 ನೇದಕ್ಕೆ ಅಪಘಾತದ ಸಮಯದಲ್ಲಿ ವಿವಾ ಪಾಲಿಸಿಯು ಚಾಲ್ತಿಯಲ್ಲಿತ್ತು ಎಂದರೆ ಸರಿ. ಪೊಲೀಸರು 1ನೇ ಎದುರುದಾರನ ವಿರುದ್ಧ ಸಲ್ಲಿಸಿದ ದೋಷಾರೋಪಣಾ ಪತ್ರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಅಪಘಾತದ ದಿನ ಮತ್ತು ಸಮಯದಂದು ಆಪಾದಿತ ವಾಹನವನ್ನು ಈರಣ್ಣ ಸಿ. ಪಂಚಣ್ಣನವರ್, ಶಿರಸಂಗಿ ಬೆಳಗಾವಿ ಜಿಲ್ಲೆ ರವರು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. 1ನೇ ಎದುರುದಾರನಿಂದ ಯಾವುದೇ ತಪ್ಪಾಗಿರುವುದಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು ನೀಡಿದ ಸುಳ್ಳು ದೂರಿನನ್ವಯ ಪೊಲೀಸರು 1ನೇ ಎದುರುದಾರನ ಮೇಲೆ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ವಿಮೆ ಚಾಲಿತಯಲ್ಲಿರುವುದರಿಂದ ಅರ್ಜಿದಾರರಿಗೆ ನಾವೇ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ದಾಖಲೆಗಳನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಅರ್ಜಿದಾರ ಪರ ಶ್ರೀ ಕೆ.ಪಿ.ಎಸ್. ವಕೀಲರ ಪರವಾಗಿ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

2ನೇ ಅರ್ಜಿದಾರನಿಂದ ಕ್ಲೈಮ್ ಅರ್ಜಿಯನ್ನು ಪಡೆದುಕೊಂಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆಪಾದಿತ ವಾಹನಕ್ಕೆ third party ವಿಮೆ ಇರುತ್ತದೆ. ಈ ಪ್ರಕರಣದ ಅರ್ಜಿದಾರ third party ಅರ್ಜಿದಾರನಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರಿದು, policy is subject to terms and conditions ಎಂದು ನುಡಿಯುತ್ತಾರೆ. ಅಪಘಾತದ ವಿಚಾರವಾಗಿ ನಮ್ಮ ಸಂಸ್ಥೆಯಿಂದ ಖಾಸಗಿ ತನಿಖೆಯನ್ನು ಮಾಡಿರುತ್ತೇವೆ. ನಮ್ಮ ಖಾಸಗಿ ತನಿಖೆಯ ದಾಖಲೆಯನ್ನು



**ಆರ್.ಡಬ್ಲ್ಯು: 1**

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1ನೇ ಎದುರುದಾರನಿಗೆ ಸೂಕ್ತವಾದ ಡಿ.ಎಲ್. ಇರುವುದರಿಂದ ಅರ್ಜಿದಾರನಿಗೆ ನಾವೇ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**<u>ಪಾಟೀಸವಾಲುಃ</u>– ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

**ಸಾಕ್ಷಿಗೆ ಕನ್ನಡ ಭಾಷೆ ತಿಳಿಯದ ಮತ್ತು ಮಾತನಾಡಲು ಬರದ ಕಾರಣ, ಸಾಕ್ಷಿಗೆ ಇಂಗ್ಲೀಷ್ ನಲ್ಲಿ ಕೇಳಿದ ಪ್ರಶ್ನೆಗೆ ಕನ್ನಡಕ್ಕೆ ಭಾಷಾಂತರಿಸಿಕೊಳ್ಳಲಾಗಿದೆ.**

ನಮ್ಮ ಕಚೇರಿಯನ್ನು ಬೇರೆ ಕಡೆಗೆ ಸ್ಥಳಾಂತರಿಸುವಾಗ ದಾಖಲೆಗಳು ಕಳೆದುಹೋಗಿರುತ್ತದೆ ಎಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಿಲ್ಲ. ಈಗ ತೋರಿಸುತ್ತಿರುವ ನಿ.ಆರ್–1 ದಾಖಲೆಯನ್ನು ನಮ್ಮ ಬ್ಯಾಂಕಿನವರಿಂದ ಪಡೆದು ಹಾಜರುಪಡಿಸಿರುತ್ತೇನೆ. ಸದರಿ ನಿ.ಆರ್–1 ನ್ನು ದಿ.07–01–2025 ರಂದು ಪಡೆದುಕೊಂಡಿರುತ್ತೇನೆ. ಚೆಕ್ ಅಮಾನ್ಯಗೊಂಡ ನಂತರ ಚೆಕ್ಕನ್ನು ಬ್ಯಾಂಕಿನವರು ನಮ್ಮ ಸಂಸ್ಥೆಗೆ ಹಿಂದಿರುಗಿಸಿರುತ್ತಾರೆ. ಮೂಲ ಚೆಕ್ಕನ್ನು ನಮ್ಮ ಸಂಸ್ಥೆಗೆ ಹಿಂದಿರುಗಿಸಿದಾಗ ಬ್ಯಾಂಕಿನವರ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಬ್ಯಾಂಕಿನವರು ದಾಖಲೆಗಳನ್ನು ಸ್ಕ್ಯಾನ್ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಆರ್–1 ನ್ನು ಪಡೆಯುವಾಗ ಬ್ಯಾಂಕಿನವರಿಗೆ ಅರ್ಜಿ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆದರೆ ಅದು ನನ್ನ ಬಳಿ ಇರುತ್ತದೆ.

ವಿಮಾ ಪಾಲಿಸಿಯನ್ನು ದಿ.24–02–2018 ರಂದು ರದ್ದುಪಡಿಸಲಾಗಿದೆ. ನಿ.ಆರ್–6(ಎ) ದಾಖಲೆಯಲ್ಲಿ ಹೇಳಿದಂತೆ, ಆರ್.ಟಿ.ಓ. ಮಂಗಳೂರು ಮತ್ತು ಎಸ್.ಪಿ., ಮಂಗಳೂರು ರವರಿಗೆ ವಿಮಾ ರದ್ದಾದ ಬಗ್ಗೆ ನೀಡಿದ ಮಾಹಿತಿಯ ಪತ್ರದ ಅಂಚೆ ಸ್ವೀಕೃತ ಪತ್ರ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರಿದು, ಅದನ್ನು ಸಾದಾ ಅಂಚೆಯ ಮೂಲಕ ಕಳುಹಿಸಿಕೊಡಲಾಗಿದೆ ಎಂದು ತಿಳಿಸುತ್ತಾರೆ. ಸಾಕ್ಷಿ ಮುಂದುವರಿದು, 1ನೇ ಎದುರುದಾರರಿಗೆ ಆರ್.ಪಿ.ಎ.ಡಿ. ಮುಖಾಂತರ ತಿಳಿಸಲಾಗಿದೆ ಎಂದು ನುಡಿಯುತ್ತಾರೆ. 1ನೇ ಎದುರುದಾರರಿಗೆ ಆರ್.ಪಿ.ಎ.ಡಿ. ಮಾಡಿದ ಬಗ್ಗೆ ಅಂಚೆ ಸ್ವೀಕೃತ ಪತ್ರ ಹಾಜರುಪಡಿಸಿರುವುದಿಲ್ಲ, ಏಕೆಂದರೆ ಈ ದಿನದ ವರೆಗೆ ನಾವು ಅಂಚೆ ಇಲಾಖೆಯಿಂದ ಹಿಂದಿರುಗಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 1ನೇ ಎದುರುದಾರನಿಗೆ ನಾವು ನೀಡಿದ ನೋಟಿಸ್ ಮುಟ್ಟಿರುವ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇರುತ್ತದೆ. ಏಕೆಂದರೆ ನಾವು 1ನೇ ಎದುರುದಾರನಿಗೆ ಫೋನು ಮುಖಾಂತರ ವಿಷಯ ತಿಳಿಸಿರುತ್ತೇವೆ. ಸದರಿ 1ನೇ ಎದುರುದಾರನಿಗೆ ನೋಟಿಸ್ ಮುಟ್ಟಿತು ಎಂದು ಹೇಳಿದ ದಿನದಂದು ನಾನು ನಮ್ಮ ಶಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. 1ನೇ ಎದುರುದಾರನಿಗೆ ಫೋನು ಮಾಡಿ ವಿಷಯ ತಿಳಿಸಿದ್ದೇವೆ ಎಂದು ತೋರಿಸಲು ನಮ್ಮ ಸಂಸ್ಥೆಯಲ್ಲಿ ಯಾವುದೇ ದಾಖಲೆ ನಿರ್ವಹಿಸುವುದಿಲ್ಲ. ನಾವು ನೀಡಿದ್ದೇವೆ ಎಂದು ಹೇಳಿದ ನೋಟಿಸ್ ಗೆ 1ನೇ ಎದುರುದಾರನಿಗೆ ಯಾವುದೇ ಉತ್ತರ ಪಡೆದುಕೊಂಡಿರುವುದಿಲ್ಲ.

ನಾವು ಆರ್.ಟಿ.ಓ. ಮಂಗಳೂರು ಮತ್ತು ಎಸ್.ಪಿ. ಮಂಗಳೂರು ರವರಿಗೆ ಮಾಹಿತಿ ತಿಳಿಸಿದ ಬಗ್ಗೆ ಮತ್ತು ಅವರಿಂದ ನಮಗೆ ಯಾವುದೇ ಉತ್ತರ ಬಂದಿರುವುದಿಲ್ಲ. ಈ ಅರ್ಜಿ ದಾಖಲಾದ ನಂತರ ನಾವು 1ನೇ ಅರ್ಜಿದಾರನಿಗೆ ನೋಟಿಸ್ ನೀಡಿರುತ್ತೇವೆ. ಸದರಿ ನೋಟಿಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ ಅದು ನನ್ನ ಬಳಿ ಇರುತ್ತದೆ.

ನಮ್ಮ ಕಚೇರಿಯನ್ನು ಸ್ಥಳಾಂತರಿಸುವಾಗ ಕೆಲವೊಂದು ದಾಖಲೆಗಳು ಮಿಸ್‌ಪ್ಲೇಸ್ ಆಗಿದೆ ಎಂದು ನಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ, ಆದರೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಆರ್.ಟಿ.ಓ. ಮಂಗಳೂರು ಮತ್ತು ಎಸ್.ಪಿ. ಮಂಗಳೂರು ರವರಿಗೆ ಬರೆದ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಪಘಾತವಾದ ವಿಚಾರವು ಡಿಸೆಂಬರ್ 2022 ರಲ್ಲಿ ನಮ್ಮ ಗಮನಕ್ಕೆ ಬಂದಿರುತ್ತದೆ. ಪಾಲಿಸಿ ನಂ.4222923120171373 ದಿಃ12-02-2019 ಅಪಘಾತದ ಸಮಯದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅದು ಎಕ್ಸ್‌ಪೈರ್ಡ್ ಪಾಲಿಸಿಯಾಗಿದೆ ಮತ್ತು ಅದು ಹಿಂದಿನ ವರ್ಷದ ಪಾಲಿಸಿ ಇರುತ್ತದೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ವಿಮಾ ಪಾಲಿಸಿ ಆರ್.ಟಿ.ಓ. ಮಂಗಳೂರು ರವರು ರದ್ದುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ವಿಮೆ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯನ್ನು ಸ್ಥಳಾಂತರಿಸುವಾಗ ಯಾವುದೇ ದಾಖಲೆಯು ಮಿಸ್‌ಪ್ಲೇಸ್ ಆಗಿರುವುದಿಲ್ಲ. ಅರ್ಜಿದಾರರಿಗೆ ವಿಮೆ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಎಲ್ಲಾ ದಾಖಲೆಗಳು ಸರಿಯಾಗಿದ್ದು, ನಾವು ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥರಾಗಿದ್ದೇವೆ ಎಂದರೆ ಸರಿಯಲ್ಲ.

ಸದರಿ ಪ್ರಕರಣವು ಎಂ.ವಿ.ಸಿ. 466/2022 ರೊಂದಿಗೆ ಕ್ಲಬ್ ಆಗಿರುತ್ತದೆ. ಆದ್ದರಿಂದ ಸದರಿ ಪ್ರಕರಣದ ಅರ್ಜಿದಾರರ ಪರ ವಕೀಲರು ಸದರಿ ಪ್ರಕರಣಕ್ಕೂ ಸಹ ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಆರ್.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 24–01–2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ವೈ.ವಿ.ಎಸ್. ವಕೀಲರಿಂದ,**

ನಾನು 2ನೇ ಎದುರುದಾರರ ಸಂಸ್ಥೆಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ಸ್ಕ್ಯಾನ್ ಮಾಡಿ ತೆಗೆದ ಚೆಕ್ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅರ್ಜಿದಾರರ ಪರ ವಕೀಲರು ಸದರಿ ದಾಖಲೆಯನ್ನು ಗುರುತಿಸಲು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅದನ್ನು ನಿ.ಆರ್.–1 ಎಂದು ಗುರುತಿಸಲಾಯಿತು. ಅದೇ ರೀತಿ ನಾಲ್ಕು ಪುಟಗಳನ್ನೊಳಗೊಂಡ ನಮ್ಮ ಸಂಸ್ಥೆಯ ಬ್ಯಾಂಕಿನ ಖಾತೆಯ ಖಾತಾ ವಿವರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.–2 ಎಂದು ಗುರುತಿಸಲಾಯಿತು. ಸದರಿ ಪ್ರಕಣದ ಬ್ಯಾಂಕಿನಲ್ಲಿ ವ್ಯವಹಾರವಾದ ಭಾಗ ಅಂದರೆ ದಿ.15–02–2018 ರಂದು ವಿಮಾ ಪಾಲಿಸಿ ಹಣವನ್ನು ಕಟ್ಟಿದ್ದ ಬಗ್ಗೆ ಮತ್ತು ಖಾತೆಯಲ್ಲಿ ಹಣವಿಲ್ಲವೆಂದು ನೀಡಿದ ವಿವರದ ಭಾಗವನ್ನು ನಿ.ಆರ್–2(ಎ) ಎಂದು ಗುರುತಿಸಲಾಯಿತು. 1ನೇ ಎದುರುದಾರನಿಗೆ ಪಾಲಿಸಿ ರದ್ದುಪಡಿಸುವ ಕುರಿತು ನೀಡಿದ ನೋಟಿಸಿನ ಪ್ರತಿಯನ್ನು, ಪಾಲಿಸಿ ಪ್ರತಿ ಮತ್ತು ವಿಮಾವನ್ನು ರದ್ದುಪಡಿಸಿದ ಕುರಿತ ಪ್ರತಿಯನ್ನು ಹಾಜರುಪಡಿಸಿದ್ದೇನೆ, ಅವುಗಳನ್ನು ನಿ.ಆರ್–3 ರಿಂದ 5 ಎಂದು ಗುರುತಿಸಲಾಯಿತು. ಅದೇ ರೀತಿ, ನಮ್ಮ ಸಂಸ್ಥೆಯಲ್ಲಿ ನಿರ್ವಹಿಸಿದ ಫೆಬ್ರವರಿ 2018 ರಿಂದ 2024 ರ ವರೆಗೆ ಔಟ್‌ವರ್ಡ್ ಪುಸ್ತಕವನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ಗುರುತಿಸಲು ಅರ್ಜಿದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿ.ಆರ್–6 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದ ಭಾಗವಾಗ ಸದರಿ ಪುಸ್ತಕದ ದಿ.10–03–2018 ರಂದು 1ನೇ ಎದುರುದಾರನಿಗೆ ಅಂಚೆ ಮೂಲಕ

ನೋಟಿಸ್ ನೀಡಿದ ಬಗ್ಗೆ ನಮೂದು ಇದ್ದು ಮತ್ತು ಅದು ಆರ್.ಪಿ.ಎ.ಡಿ. ಕಳುಹಿಸಿದ್ದು, ಅದು ಅಂಚೆ ರಶೀದಿ ಇರುತ್ತದೆ. ಸದರಿ ಭಾಗವನ್ನು ನಿ.ಆರ್-6(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯುಃ 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 18-01-2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಒಂದು ಶವ ತನಿಖಾ ವರದಿ, ಫೋಟೊ ಪ್ರತಿ, ಪಿ.ಎಂ. ವರದಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-28 ರಿಂದ 30 ಎಂದು ಗುರುತಿಸಲಾಯಿತು. ಅದೇ ರೀತಿ, ನನ್ನ ಮತ್ತು ಇತರ ಅರ್ಜಿದಾರರ ಮತ್ತು ಮೃತರ ಅಟೆಸ್ಟೆಡ್ ಮಾಡಿದ ಜೆರಾಕ್ಸ್ ಆಧಾರ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ, ಅವುಗಳನ್ನು ಕ್ರಮವಾಗಿ ನಿಪಿ-31 ರಿಂದ 37 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಉಳಿದ ದಾಖಲೆಗಳನ್ನು ಎಂ.ವಿ.ಸಿ.ನಂ.132/2024 ರ ಪ್ರಕರಣದ ದಾಖಲೆಗಳನ್ನು ಪರಿಗಣಿಸಲು ವಿನಂತಿಸಿರುತ್ತಾರೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್ ಹೆಚ್ .ವಕೀಲರಿಂದ.**

ಈ ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆದ್ದರಿಂದ ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿದೆಎಂದು ಸುಳ್ಳು ಹೇಳುತ್ತಿದ್ದೇನೆಎಂದರೆ ಸರಿಯಲ್ಲ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. 2ನೇ ಅರ್ಜಿದಾರರು 2ನೇ ತರಗತಿಯವರೆಗೆ ಓದಿರುತ್ತಾರೆ. ಮೃತಳು ಮತ್ತು ಉಳಿದ ಅರ್ಜಿದಾರರು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. 3 ರಿಂದ 5ನೇ ಅರ್ಜಿದಾರರು ಯಾವುದೇ ನೌಕರಿ ಕೆಲಸ ಮಾಡುವುದಿಲ್ಲ. ನನ್ನ ಮಕ್ಕಳಲ್ಲಿ 3ನೇ ಅರ್ಜಿದಾರರು ಹಿರಿಯವರಾಗಿರುತ್ತಾರೆ. ಮೃತಳು

ಡಿಗ್ರಿ ಮುಗಿಸಿದ್ದಳು. ಮೃತಳ ಶಾಲಾ ದಾಖಲೆಗಳು ನನ್ನ ಬಳಿ ಇರುತ್ತವೆ. ಅವರ ನಿಖರವಾದ ಜನ್ಮ ದಿನಾಂಕವನ್ನು ತೋರಿಸಲು ಅವುಗಳನ್ನು ಹಾಜರುಪಡಿಸಲಾಗಿರುವುದಿಲ್ಲ ಎಂದರೆ ಸರಿ. ನಿಪಿ–33 ರಲ್ಲಿ ತೋರಿಸಿದ ಮೃತಳ ಜನ್ಮ ದಿನಾಂಕ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ಮೃತಳು ಅಪಘಾತದಲ್ಲಿ ಮೃತ ಹೊಂದಿದಾಗ 20 ವರ್ಷ ವಯಸ್ಸಾಗಿತ್ತು. ಮೃತಳು ಟೈಲರಿಂಗ್ ಕೆಲಸ ಮಾಡುತ್ತಿದ್ದಳು. ಮೃತಳು ಮರಣಹೊಂದಿದಾಗ ಅವರಿಗೆ 30 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ.

ಮೃತಳು ಬೇರೆ ಕಡೆಗೆ ಸುಮಾರು 2 ವರ್ಷಗಳಿಂದ ಟೈಲರಿಂಗ್ ಕೆಲಸಕ್ಕೆ ಹೋಗುತ್ತಿದ್ದರು. ಟೈಲರಿಂಗ್ ಕೆಲಸಕ್ಕೆ ಮೃಳಳಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ಗೊತ್ತಿಲ್ಲ. ಮೃತಳಿಗೆ ಟೈಲರಿಂಗ್ ಬರುತ್ತಿದ್ದ ಬಗ್ಗೆ ಆದಾಯ ಬರುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೃತಳು ಬೆಳಿಗ್ಗೆ 8.00 ಗಂಟೆಗೆ ಹೋಗಿ ಮಧ್ಯಾಹ್ನ 3.00 ಗಂಟೆಗೆ ಬರುತ್ತಿದ್ದಳು. ಮೃತಳು ಯಾವುದೇ ಟೈಲರಿಂಗ್ ಕೆಲಸಕ್ಕೆ ಹೋಗುತ್ತಿರಲಿಲ್ಲ, ನಾವು ಹೇಳಿದಷ್ಟು ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಅರ್ಧ ಎಕರೆ ಜಮೀನು ಇದೆ, ಅದರಲ್ಲಿ ಸ್ವಲ್ಪ ತೋಟ ಮತ್ತು ಸ್ವಲ್ಪ ಗದ್ದೆ ಇರುತ್ತದೆ. ಗದ್ದೆ ಕೆಲಸಕ್ಕೆ ಮೃತಳೂ ಸಹ ಸಹಕರಿಸುತ್ತಿದ್ದಳು. ನನ್ನ ಜಮೀನಿನಲ್ಲಿ ಎರಡು ಬೇಳೆ ಬೆಳೆಯುತ್ತೇನೆ. ಮೃತಳು ಬೇಸಾಯ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಅಂತ್ಯಸಂಸ್ಕಾರಕ್ಕೆ ಮತ್ತು ಬಾಡಿಗೆ ವಾಹನಕ್ಕೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಮೃತಳು ತನಗೆ ಬಂದ ಆದಾಯವನ್ನು ತನ್ನ ಬ್ಯಾಂಕಿನಲ್ಲಿ ಠೇವಣಿ ಖರ್ಚು ಮಾಡುತ್ತಿರಲಿಲ್ಲ, ಅದನ್ನು ನಮ್ಮ ಸಂಸಾರಕ್ಕೆ ಖರ್ಚು ಮಾಡುತ್ತಿದ್ದಳು. 3 ರಿಂದ 5ನೇ ಅರ್ಜಿದಾರರು ಮೃತಳು ಆದಾಯದ ಮೇಲೆ ಅವಲಂಬಿತರಾಗಿಲ್ಲ ಎಂದರೆ ಸರಿಯಲ್ಲ. ಈ ದಿನದವರೆಗೆ 3 ರಿಂದ 5 ನೇಯವರ ಮದುವೆಯಾಗಿರುವುದಿಲ್ಲ. ನಾವು ಎಲ್ಲರೂ ಮೃತಳ ಆದಾಯದ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಬರೆಸಿದ್ದೇವೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಮೃತಳ ವಯಸ್ಸನ್ನು ಕಡಿಮೆ ಮಾಡಿ, ಆದಾಯ ಹೆಚ್ಚು ತೋರಿಸಿ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 4 ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ಮೃತಳು ಪ್ರಯಾಣಿಸುತ್ತಿದ್ದ ವಾಹನದ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿ. ಬೈಕ್ ಚಾಲಕನ ತಪ್ಪಿನಿಂದ ಅಪಘಾತ ಆಗದೇ ಇರುವುದರಿಂದ, ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದ್ದರಿಂದ 4ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 4ನೇ ಎದುರುದಾರರ ಪರ ವಕೀಲರು 2ನೇ ಎದುರುದಾರರು ಮಾಡಿದ ಭಾಗಶಃ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 18-01-2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಎರಡು ಮರು ಹೇಳಿಕೆ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಎರಡು ಫೋಟೋ ಪ್ರತಿ, ಒಂದು ನಕ್ಷೆ, ವಾಹನ ಪಂಚನಾಮೆ ಪ್ರತಿ, ಎರಡು ಫೋಟೊ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-11 ಎಂದು ಗುರುತಿಸಲಾಯಿತು. ಅದೇ ರೀತಿ ಒಂದು ಐ.ಎಂ.ವಿ. ವರದಿ, ಗಾಯದ ಪ್ರಮಾಣ ಪತ್ರ ಚಾರ್ಜ್‌ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-12 ರಿಂದ ಪಿ-14 ಎಂದು ಗುರುತಿಸಲಾಯಿತು. ಹೊರರೋಗಿಯ ಕಾರ್ಡಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಜೆರಾಕ್ಸ್ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-16 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-17 ಎಂದು ಗುರುತಿಸಲಾಯಿತು. ಅಂಗನ್ಯೂನತೆಗೆ ಪಡೆಯಲು ಸೂಚಿಸಿದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-18 ಎಂದು ಗುರುತಿಸಲಾಯಿತು. ನಾಲ್ಕು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-19 ರಿಂದ ಪಿ-22 ಎಂದು ಗುರುತಿಸಲಾಯಿತು. ಒಂದು ಸ್ಕ್ಯಾನಿಂಗ್ ವರದಿ, ನಾಲ್ಕು ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-23 ಎಂದು ಗುರುತಿಸಲಾಯಿತು. ಮೂರು ಫೊಟೋ ಮತ್ತು ಸಿ.ಡಿ.ಯನ್ನು ಹಾಜರುಪಡಿಸಿದ್ದು, ಮೂರು ಫೊಟೋಗಳನ್ನು ಒಟ್ಟಾಗಿ ನಿಪಿ-24 ಎಂದು ಹಾಗೂ ಸಿ.ಡಿ.ಯನ್ನು ನಿಪಿ-25 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ, ಜೆರಾಕ್ಸ್ ಆಧಾರ ಮತ್ತು ಪಡಿತರ ಚೇಟಿಯನ್ನು ಹಾಜರುಪಡಿಸಿದ್ದು, ಸಾಕ್ಷಿ

ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು. ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.(ಹೆಚ್) ವಕೀಲರಿಂದಃ-**

ಸದರಿ ಅಪಘಾತದ ದಿನ ವಾಹನವನ್ನು ನನ್ನ ಅಕ್ಕನ ಮಗ ಗಣೇಶ ಮಂಗಳಾ ಗೊಂಡ ಚಲಾಯಿಸುತ್ತಿದ್ದನು. ಸದರಿ ದಿನ ನಾವು ನಮ್ಮ ವಾಹನದಲ್ಲಿ ಒಟ್ಟು ಮೂರು ಜನರು ಪ್ರಯಾಣಿಸುತ್ತಿದ್ದೆವು. ಸದರಿ ನಮ್ಮ ವಾಹನದ ಚಾಲಕನ ಹಿಂದೆ ನನ್ನ ಅಕ್ಕನ ಮಗಳಾದ ಲಿಖಿತಾ ಕುಳಿತಿದ್ದಳು. ನಾನು ಅವಳ ಹಿಂದೆ ಕುಳಿತಿದ್ದೆನು. ನಾವು ಪ್ರಯಾಣಿಸುತ್ತಿದ್ದ ದ್ವಿಚಕ್ರ ವಾಹನದಲ್ಲಿ ಇಬ್ಬರು ಮಾತ್ರ ಪ್ರಯಾಣಿಸಬೇಕು ಎಂದು ಸರಿ. ನಾವು ಒಂದೇ ವಾಹನದಲ್ಲಿ ಮೂವರು ಪ್ರಯಾಣಿಸುತ್ತಿದ್ದರಿಂದ ವಾಹನದಲ್ಲಿ ಕುಳಿತುಕೊಳ್ಳಲು ವಾಹನದಲ್ಲಿ ಜಾಗ ಸಾಕಾಗುತ್ತಿರಲಿಲ್ಲ ಎಂದರೆ ಸಾಕ್ಷಿ, ನಾವು ಮೂವರು ತೆಳ್ಳಗೆ ದೇಹದವರು ಇದ್ದೆವು. ಅದಕ್ಕೆ ವಾಹನದಲ್ಲಿ ನಮಗೆ ಕುಳಿತುಕೊಳ್ಳಲು ಜಾಗ ಇತ್ತು ಎಂದು ನುಡಿಯುತ್ತಾರೆ. ನಾವು ಪ್ರಯಾಣಿಸುತ್ತಿದ್ದ ವಾಹನದ ಚಾಲಕನು ಇತ್ತೀಚಿಗೆ ವಾಹನ ಚಲಾಯಿಸುವುದನ್ನು ಕಲಿತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಅವನ್ನು ಸುಮಾರು 3-4 ವರ್ಷಗಳಿಂದ ವಾಹನ ಚಲಾಯಿತಿದ್ದ ಎಂದು ನುಡಿಯುತ್ತಾರೆ. ನಾವು ಒಂದೇ ವಾಹನದಲ್ಲಿ ಮೂವರು ಪ್ರಯಾಣಿಸಿದ್ದರಿಂದ ಚಾಲಕನಿಗೆ ವಾಹನ ನಡೆಸಲು ನಿಯಂತ್ರಣ ತಪ್ಪುತ್ತಿತ್ತು ಎಂದರೆ ಸರಿಯಲ್ಲ. ನಾವು ಪ್ರಯಾಣಿಸುತ್ತಿರುವ ಮಾತನಾಡುತ್ತಾ ಕುಳಿತಿದ್ದೆವು ಎಂದರೆ ಸರಿಯಲ್ಲ. ನಾವು ಶಿರಾಲಿಯ ರಸ್ತೆಯಿಂದ ತಿರುವು ಪಡೆದು ಮುಖ್ಯ ರಸ್ತೆಗೆ ಹೋಗಬೇಕಾಗಿತ್ತು ಎಂದರೆ ಸರಿಯಲ್ಲ. ಆಪಾದಿತ ವಾಹನವು ನಮ್ಮ ವಾಹನದ ಹಿಂದಿನಿಂದ ಬಂದಿರುತ್ತದೆ. ಅಪಘಾತವಾದ ಸಮಯದಲ್ಲಿ ಹಿಂದುಗಡೆಯಿಂದ ಬಂದ ವಾಹನವನ್ನು ನಾನು ನೋಡಿಲ್ಲ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ವಾಹನದಲ್ಲಿ ಮುಂದುಗಡೆ ಕನ್ನಡಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಕೆಳಗೆ ಬಿದ್ದ ನಂತರ ಅಪಘಾತವಾದದ್ದು ಗೊತ್ತಾಗಿರುತ್ತದೆ ಎಂದರೆ ಸರಿ.

ಅಪಘಾತವಾದಾಗ ನನಗೆ ಜ್ಞಾನ ತಪ್ಪಿತ್ತು. ಆಸ್ಪತ್ರೆಯಲ್ಲಿದ್ದಾಗ ಜ್ಞಾನ ಬಂದಿರುತ್ತದೆ ಎಂದರೆ ಸರಿ. ನನಗೆ ಮರುದಿನ ಆಸ್ಪತ್ರೆಯಲ್ಲಿದ್ದಾಗ ಜ್ಞಾನ ಬಂದಿರುತ್ತದೆ. ಆಪಾದಿತ ವಾಹನವು ಹಿಂದಿನಿಂದ ಹೇಗೆ, ಯಾವ ರೀತಿ ಬಂದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾವು ಒಂದೇ ವಾಹನದಲ್ಲಿ ಮೂವರು ಪ್ರಯಣಿಸುತ್ತಿದ್ದು, ನಮ್ಮ ವಾಹನದ ಚಾಲಕ ವಾಹನದ ಮೇಲೆ ನಿಯಂತ್ರಣ ಕಳೆದುಕೊಂಡು, ಯಾವುದೇ ಸೂಚನೆ ನೀಡದೇ, ಒಮ್ಮೆಲೇ ಬ್ರೇಕ್ ಹಾಕಿದ್ದಕ್ಕೆ ಆತನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ಆಪಾದಿತ ವಾಹನದ ಚಾಲಕನಿಂದ ಆಗಿದೆ ಎಂದು ನಾನು ಬೇರೆಯವರಿಂದ ತಿಳಿದುಕೊಂಡಿದ್ದೇನೆ ಎಂದರೆ ಸರಿ.

ನಾನು 4ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಶಾಲಾ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ–26, 27 ನನ್ನ ಜನ್ಮ ದಿನಾಂಕವನ್ನು ಅಧಿಕೃತವಾಗಿ ತೋರಿಸುವ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–26 ಮತ್ತು 27 ರಲ್ಲಿ ತೋರಿಸಿದ ನನ್ನ ಜನ್ಮ ದಿನಾಂಕ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ, ಅದಕ್ಕಾಗಿ ನಾನು ಶಾಲಾ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತವಾಗುವ ಪೂರ್ವದಲ್ಲಿ ನನ್ನದೇ ಸ್ವಂತ ಇರುವ ಟೈಲರಿಂಗ್ ಮೆಷಿನ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೆನು. ಹೊಲಿಗೆ ಯಂತ್ರವನ್ನು ನನಗೆ ಪಂಚಾಯತ್ ನವರು ಕೊಟ್ಟಿರುತ್ತಾರೆ. ಪಂಚಾಯತ್ ನಿಂದ ಹೊಲಿಗೆ ಯಂತ್ರ ನೀಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಗ್ರಾಹಕರು ಬಟ್ಟೆ ಹೊಲಿಯಲು ಬಟ್ಟೆ ನೀಡಿದರೆ, ನಾವು ಒಂದು ಪುಸ್ತಕದಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. ಗ್ರಾಹಕರು ಹೊಲಿದ ಬಟ್ಟೆಯನ್ನು ತೆಗೆದುಕೊಂಡು, ಹಣ ನೀಡಿದ ಬಗ್ಗೆ ಹೋದಾಗ ನಾನು ಯಾವುದೇ ರಶೀದಿ ನೀಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನಿರ್ವಹಣೆ ಮಾಡಿದ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಟೈಲರಿಂಗ್ ಕೆಲಸ ಮಾಡುತ್ತಿರಲಿಲ್ಲ, ನನ್ನ ಆದಾಯ ಹೆಚ್ಚು ತೋರಿಸುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟೈಲಂರಿಂಗ್ ಜೊತೆಗೆ ಗದ್ದೆ ಕೆಲಸ ಮಾಡಲು ಹೋಗುತ್ತಿದ್ದೆನು. ನಾನು ನಮ್ಮ ಸ್ವಂತ ಗದ್ದೆ ಕೆಲಸ ಮತ್ತು ಬೇರೆ ಕಡೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆನು. ನನಗೆ ಜಮೀನು ಇದೆ ಎಂದು ತೋರಿಸಲು ಯಾವುದೇ ದಾಖಲೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಆದಾಯ ಗಳಿಸುತ್ತಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಔಷದೋಪಚಾರಕ್ಕಾಗಿ ನಿಪಿ-19 ರಿಂದ 22 ರ ರಶೀದಿಯಂತೆ ಹಣ ಖರ್ಚು ಮಾಡಿದ್ದು, ಅವುಗಳನ್ನು ಹೊರತುಪಡಿಸಿ, ಬೇರೆ ಯಾವುದೇ ಖರ್ಚು ಮಾಡಿಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಔಷದೋಪಚಾರಕ್ಕಾಗಿ ರೂ.1,50,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ನಾನು ಮೊದಲು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಂತರ ಕುಂದಾಪುರದ ಆದರ್ಶ ಆಸ್ಪತ್ರೆ, ನಂತರ ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಪಘಾತವಾದ ದಿನವೇ ನನ್ನ ಬಲಗೈಯನ್ನು ಶಸ್ತ್ರಚಿಕಿತ್ಸೆ ಮಾಡಿ, ಕತ್ತರಿಸಿ ತೆಗೆದಿರುತ್ತಾರೆ. ಅಪಘಾತದಲ್ಲಿ ಸಣ್ಣ ಗಾಯವಾಗಿದ್ದು, ನಾನು ವೈದ್ಯರು ಹೇಳಿದ ಸಲಹೆಗಳನ್ನು ಸರಿಯಾಗಿ ಪಾಲಿಸಿದೇ ಮತ್ತು ಸರಿಯಾಗಿ ಚಿಕಿತ್ಸೆ ಪಡೆಯದೇ ಇದ್ದರಿಂದ ಕೈಗೆ ನಂಜಾಗಿ ನಂತರದ ದಿನಗಳಲ್ಲಿ ನನ್ನ ಕೈಯನ್ನು ಕತ್ತರಿಸಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ನನ್ನ ಕೈಯನ್ನು ಕತ್ತರಿಸಿರುವುದಿಲ್ಲ ಎಂದರೆ ಸರಿಯಲ್ಲ. ವೈಧ್ಯರು ಕೃತಕ ಕೈಯನ್ನು ಹಾಕಲು ನನಗೆ ಸೂಚನೆ ನೀಡಿರುವುದಿಲ್ಲ. ನನಗೆ ಕೃತಕ ಜೋಡಣೆ ಮಾಡಿದರೆ ಈ ಹಿಂದೆ ಮಾಡುತ್ತಿದ್ದ ಎಲ್ಲಾ ಕೆಲಸಗಳನ್ನು ಮಾಡಲು ಆಗುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು, ಈಗ ಕತ್ತರಿಸಿ ಉಳಿದ ಕೈಯ ಭಾಗವು ನನಗೆ ಭಾರ ಅನಿಸುತ್ತಿದೆ ಅದರೊಂದಿಗೆ ಹೆಚ್ಚು ಸಮಯದವರೆಗೆ ನನಗೆ ನಿಲ್ಲಲು ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ. ನನಗೆ ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ ಇರುವುದಿಲ್ಲ, ವೈಧ್ಯರಿಗೆ ಆಮಿಷ ನೀಡಿ, ಹೆಚ್ಚಿನ ಅಂಗನ್ಯೂನ್ಯತೆ ಬರುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕತ್ತರಿಸಿ ಉಳಿದ ಕೈ ಮುಕ್ಕಾಲು ಅಡಿ ಇರುತ್ತದೆ. ಅಪಘಾತದಲ್ಲಿ ನನಗೆ ಹೆಚ್ಚು ಖರ್ಚು ವೆಚ್ಚವಾಗಿಲ್ಲ, ನನಗೆ ಆಸ್ಪತ್ರೆಯಲ್ಲಿ ಸಹಾಯ ಮಾಡಲು ಯಾರೂ ಇರಲಿಲ್ಲ ಮತ್ತು ಊಟೋಪಚಾರಕ್ಕಾಗಿ ನಾನು ಹೇಳಿದಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ, ನಾನು ಆಸ್ಪತ್ರೆಗೆ ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.



ಈಗ ನಾನು ಸಂಪೂರ್ಣ ಗುಣವಾಗಿರುತ್ತೇನೆ. ನನಗೆ ಈಗ ಯಾವುದೇ ಔಷಧಿ ಚಿಕಿತ್ಸೆ ಅಗತ್ಯವಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು, 15 ದಿನಗಳಿಗೊಂಮ್ಮೆ ಆಸ್ಪತ್ರೆಗೆ ಭೇಟಿ ನೀಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಮುಂದಿನ

ಚಿಕಿತ್ಸೆಗಾಗಿ ಸುಮಾರು ರೂ.1,00,000/- ಖರ್ಚು ಬರುತ್ತದೆ ಎಂದು ವೈದ್ಯರ ಬಳಿಯಿಂದ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನಮ್ಮ ವಾಹನದ ಚಾಲಕನ ತಪ್ಪಿನಿಂದ ಆಗಿದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 4 ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ವಾಹದ ಚಾಲಕನಿಗೆ ಯಾವುದೇ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದ್ದರಿಂದ 4ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. 4ನೇ ಎದುರುದಾರನನ್ನು ಅವಶ್ಯಕ ಪಕ್ಷಗಾರ ಇಲ್ಲದೇ ಇದ್ದರೂ ಸಹ ಪಕ್ಷಗಾರನನ್ನಾಗಿ ಮಾಡಿದ್ದಕ್ಕೆ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಅಪಘಾತವು ನಾವು ನಿಧಾನವಾಗಿ ನಮ್ಮ ಪಥದಲ್ಲಿ ಹೋಗುತ್ತಿದ್ದಾಗ ಆಗಿದೆ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಗಾಯವಾಗಿಲ್ಲ ಎಂದರೆ ಸರಿಯಲ್ಲ. ನಾನು 20 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ರೂ.1,50,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಳ್ಳಲು ಇಬ್ಬರನ್ನು ನೇಮಿಸಿಕೊಂಡಿದ್ದು, ಅವರಿಗೆ ರೂ.70,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆ ವಾಹನಕ್ಕಾಗಿ ರೂ.1,00,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 4ನೇ ಎದುರುದಾರರ ಪರ ವಕೀಲರು 2ನೇ ಎದುರುದಾರರು ಮಾಡಿದ ಭಾಗಶಃ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 17-01-2025.**

**<u>ಪಾಟೀ ಸವಾಲುಃ</u> 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ:-**

ಅಪಘಾತವಾದ ದಿನ ಭಟ್ಕಳದಿಂದ ಶಿರಾಲಿಗೆ ಹೋಗುವ ರಸ್ತೆಯ ಎಡಬದಿಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆನು. ಆಪಾದಿತ ವಾಹನ ನನ್ನ ಹಿಂಬದಿಯಿಂದ ಬಂದು ಢಿಕ್ಕಿಪಡಿಸಿರುತ್ತದೆ. ನಾನು ಮುಂದೆ ನಡೆದುಕೊಂಡು ಹೋಗುತ್ತಿದ್ದೆನು, ಹಿಂದೆ ಬರುತ್ತಿರುವ ವಾಹನ ನನಗೆ ಕಾಣಿಸಿರಲಿಲ್ಲ. ನನಗೆ ಢಿಕ್ಕಿಪಡಿಸಿದ ನಂತರವೇ ನನಗೆ ಗೊತ್ತಾಗಿರುತ್ತದೆ. ಅಪಘಾತವಾದ ತಕ್ಷಣ ನನಗೆ ಜ್ಞಾನ ತಪ್ಪಿದ್ದು, ಆಸ್ಪತ್ರೆಯಲ್ಲಿ ಜ್ಞಾನ ಬಂದಿರುತ್ತದೆ. ದೂರನ್ನು ನನ್ನ ಮಗ ಸಲ್ಲಿಸಿರುತ್ತಾನೆ. ಆಪಾದಿತ ವಾಹನ ನನಗೆ ಹಿಂಬದಿಯಿಂದ ಬಂದು ಢಿಕ್ಕಿಪಡಿಸಿರುತ್ತದೆ, ಆದ್ದರಿಂದ ಅದರ ಚಾಲಕನನ್ನು ನಾನು ನೋಡಿರುವುದಿಲ್ಲ. ಅಪಘಾತವು ನಾನು ರಸ್ತೆ ದಾಟುತ್ತಿದ್ದಾಗ ಆಗಿದೆ ಎಂದರೆ ಸರಿಯಲ್ಲ. ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಸುಮಾರು ಅರ್ಧ ಗಂಟೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆದರೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಆಸ್ಪತ್ರೆಗೆ ಪೊಲೀಸರು ಬಂದ ಬಗ್ಗೆ ನನಗೆ ನೆನಪಿಲ್ಲ. ಅಪಘಾತವು ನಾನು ವಾಹನವನ್ನು ಬರುವುದನ್ನು ನೋಡದೇ ಅಚಾನಕ್ಕಾಗಿ ರಸ್ತೆ ದಾಟುತ್ತಿದ್ದಾಗ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕ ನಿಧಾನವಾಗಿ ಬರುತ್ತಿದ್ದ, ಆತನ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತದಿಂದ ನನಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಂತೆ ಖರ್ಚು ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಕೃಷಿ ಕೂಲಿ ಕೆಲಸ ಮಾಡಿಕೊಂಡು, ತಿಂಗಳಿಗೆ ರೂ.22,000/- ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಸೊಂಟಕ್ಕೆ ಮತ್ತು ಕಾಲಿಗೆ ನೋವು ಬರುತ್ತದೆ, ಆ ಕಾರಣಕ್ಕಾಗಿ ನನಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ನ್ನು ವೈದ್ಯರ ಮೇಲೆ ಪ್ರಭಾವ ಬೀರಿ ಸುಳ್ಳಾಗಿ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 17-01-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 3 ನೇ ಎದ್ರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಸಂಸ್ಥೆಯವರು ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ ಹಾಜರುಪಡಿಸಿದ್ದು, ಅದನ್ನು ನಿ.ಆರ್-4 ಎಂದು ಗುರುತಿಸಲಾಯಿತು. ಒಂದು ವಿಮಾ ಪತ್ರದ ಪ್ರತಿ, ಒಂದು ಚಾರ್ಜ್‌ಶೀಟ್ ಪ್ರತಿ, 1ನೇ ಎದುರುದಾರನಿಗೆ ನೀಡಿದ ನೋಟಿಸಿನ ಪ್ರತಿ ಮತ್ತು ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಆರ್-5 ರಿಂದ 8 ಎಂದು ಗುರುತಿಸಲಾಯಿತು. ಒಂದು ಆನ್‌ಲೈನ್ ನಲ್ಲಿ ತೆಗೆದ ಡಿ.ಎಲ್ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು 1ನೇ ಎದುರುದಾರರ ಪರ ವಕೀಲರು ತಕರಾರು ಮಾಡಿದ್ದು, ಸದರಿ ಪ್ರಕರಣದಲ್ಲಿ 1ನೇ ಎದುರುದಾರರು ಈಗಾಗಲೇ 1ನೇ ಎದುರುದಾರರ ಡಿ.ಎಲ್. ಪ್ರತಿಯನ್ನು ನಿ.ಆರ್-1 ಎಂದು ಗುರುತಿಸಿಕೊಂಡಿದ್ದು, ಸದರಿ ನಿ.ಆರ್-1 ನ್ನು ಮತ್ತು ಆನ್‌ಲೈನ್ ನ ಪ್ರತಿಯನ್ನು ಹೊಂದಿಸಿ ನೋಡಿ, ಅದು ನಿ.ಆರ್-1 ಕ್ಕೆ ಹೊಂದಾಣಿಕೆಯಾಗಿದ್ದರಿಂದ ಅದನ್ನು ನಿ.ಆರ್-9 ಎಂದು ಗುರುತಿಸಲಾಯಿತು.

ಆದ್ದರಿಂದ 3ನೇ ಎದ್ರುದಾರರ ವಿರುದ್ಧ ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ- ಅರ್ಜಿದಾರರ ಪರ ವಕೀಲರಿಂದಃ-**

ಈ ಹಂತದಲ್ಲಿ 1ನೇ ಎದುರುದಾರರ ಪರ ಶ್ರೀ ಎಂ. ಜಿ. ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ. ಸದರಿ ಸಾಕ್ಷಿ ಹುಬ್ಬಳ್ಳಿಯ ವಿಮಾ ಕಂಪನಿಯ ಸಾಕ್ಷಿದಾರರಾಗಿದ್ದರಿಂದ 1ನೇ ಎದುರುದಾರರು ಸಾಕ್ಷಿಯ ವೆಚ್ಚ ಭರಿಸುವ ಶರತ್ತಿನೊಂದಿಗೆ, ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 15-01-2025**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಇಂಗ್ಲೀಷ್ ನಲ್ಲಿ ಬರೆಯಲಾಗಿದೆ, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವಾದ ದಿನ ನಾನು ನಮ್ಮ ಗದ್ದೆಯಿಂದ ನಮ್ಮ ಮನೆಗೆ ನಡೆದುಕೊಂಡು ಹೋಗುತ್ತಿದ್ದೆನು. ಅಪಘಾತವಾದ ರಸ್ತೆಯು ಉತ್ತರ-ದಕ್ಷಿಣವಾಗಿದೆ ಎಂದರೆ ಸರಿ. ನಾನು ಮನೆಗೆ ಹೋಗಬೇಕಾದರೆ, ಎರಡೂ ರಸ್ತೆಯನ್ನು ದಾಟಿ ಹೋಗಬೇಕಾಗುತ್ತದೆ ಎಂದರೆ ಸರಿ. ಅಪಘಾತವು ನಾನು ರಸ್ತೆ ದಾಟುತ್ತಿದ್ದಾಗ ಆಗಿರುತ್ತದೆ. ಅಪಘಾತವು ಡಾಮರು ರಸ್ತೆಯ ಮೇಲೆ ಆಗಿರುತ್ತದೆ. ಪೂರ್ವ ಬದಿಯ ಡಾಮರು ರಸ್ತೆಯ ಅಂಚಿನಿಂದ ಪಶ್ಚಿಮ ಬದಿಯ 6 ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತವಾದಾಗ ನನಗೆ ಪ್ರಜ್ಞೆ ಇರಲಿಲ್ಲ. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನನಗೆ ಸ್ವಲ್ಪ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಆಗಿದೆ ಎಂದು ನಾನು ವೈದ್ಯರಿಗೆ ಹೇಳಿರುತ್ತೇನೆ. ಅದನ್ನು ಅವರು ಬರೆದುಕೊಂಡಿರುತ್ತಾರೆ. ಮೊದಲು ನನ್ನನ್ನು ಶಿರಾಲಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಮಾರನೇ ದಿನ ನನ್ನನ್ನು ಭಟ್ಕಳದ ಲೈಫ್ ಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು 3 ದಿನಗಳ ವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಎಡಭುಜ ಮತ್ತು ಕಾಲಿಗೆ ಪೆಟ್ಟಾಗಿತ್ತು. ನಾನು ಅಲ್ಲಿ ಸುಮಾರು 3 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಅದೇ ರೀತಿ ಸದರಿ ಆಸ್ಪತ್ರೆಯಲ್ಲಿಯೂ ಸಹ ಗಾಯ ಹೇಗೆ ಆಗಿದೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ಅಲ್ಲಿ ಅವರು ಸಹ ಅದನ್ನು ಬರೆದುಕೊಂಡಿರುತ್ತಾರೆ. ಲೈಫ್ ಕೇರ್ ಆಸ್ಪತ್ರೆಗೆ ದಾಖಲಾದ ದಿನ ಪೊಲೀಸರು ಬಂದು ನನ್ನನ್ನು ವಿಚಾರಿಸಿರುತ್ತಾರೆ. ಅದೇ ದಿನ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ.

ನನಗೆ ಬಿ.ಪಿ.ಎಲ್. ಪಡಿತರ ಚೀಟಿ ಇರುತ್ತದೆ. ಆಸ್ಪತ್ರೆಗೆ ರೂ.2,00,000/-, ಇತರ ಖರ್ಚುಗಳಿಗೆ ರೂ.4,00,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ಸಾದಾ ಸ್ವರೂಪದ್ದಾಗಿದ್ದವು ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ನಾನು ಸುರೇಶ ಎನ್ನುವವರ ಮಿಲ್ಲಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆನು. ಪ್ರಮಾಣ ಪತ್ರದಲ್ಲಿ ನಾನು ಸುರೇಶ ಎನ್ನುವವರ ಮಿಲ್ಲಿನಲ್ಲಿ

ಕೆಲಸ ಮಾಡುತ್ತಿದ್ದುದಾಗಿ ಹೇಳಿರುತ್ತೇನೆ. ನಾನು ಸದರಿ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ, ಮತ್ತು ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನಾನು ಅಚಾನಕ್ಕಾಗಿ ರಸ್ತೆ ದಾಟುತ್ತಿದ್ದಾಗ ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಮತ್ತು ನನಗೆ ಯಾವುದೇ ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದಿನಂತೆ ಕೆಲಸ ಮಾಡಲು ಸಮರ್ಥನಿರುತ್ತೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆದ್ದರಿಂದ 3 ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನಾನು 2ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಈಗ 75 ವರ್ಷ ವಯಸ್ಸಾಗಿರುತ್ತದೆ. ಶಾಲಾ ದಾಖಲೆಯಲ್ಲಿ ನನ್ನ ಜನುಮ ದಿನಾಂಕ ನಮೂದಾಗಿರುತ್ತದೆ ಎಂದರೆ ಸರಿ. ಆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತವಾಗುವ ಸಮಯದಲ್ಲಿ 80 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಶಾಲಾ ದಾಖಲೆಯನ್ನು ಹಾಜರುಪಡಿಸಿದರೆ, ನನ್ನ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

(1 ಮತ್ತು 2ನೇ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 10–01–2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಐ.ಎಂ.ವಿ. ವರದಿಯ ಪ್ರತಿ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಗಾಯದ ಪ್ರಮಾಣ ಪತ್ರ, ಅಂತಿಮ ದೋಷಾರೋಪಣಾ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ರಿಂದ 7 ಎಂದು ಗುರುತಿಸಲಾಯಿತು. ಅದೇ ರೀತಿ, ಒಂದು ಡಿಸ್ಚಾರ್ಜ್ ಬಿಲ್ ಮತ್ತು 19 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–8 ರಿಂದ 26 ಎಂದು ಗುರುತಿಸಲಾಯಿತು. ಅದೇ ರೀತಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–27 ಎಂದು ಗುರುತಿಸಲಾಯಿತು. ಒಂದು ವಾಹನ ಬಾಡಿಗೆ ರಶೀದಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು, ಅದನ್ನು ನಿಪಿ–28 ಎಂದು ಗುರುತಿಸಲಾಯಿತು. 8 ಔಷಧಿ ಚೀಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–29 ಎಂದು ಗುರುತಿಸಲಾಂತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

– 5 –                    ಎಂ.ವಿ.ಸಿಃ 185/2023

**ಪಿ.ಡಬ್ಲ್ಯುಃ 1**

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಆರ್.ಎಸ್.ಕೆ. ವಕೀಲರಿಂದಃ–**

ನಾನು ರಸ್ತೆಯ ಬದಿಯಲ್ಲಿ ನಿಂತಿರುವಾಗ ಒಂದು ದ್ವಿಚಕ್ರ ವಾಹನ ಬಂದು ನನಗೆ ಢಿಕ್ಕಿಪಡಿಸಿರುತ್ತದೆ. ಆದರೆ ಸದರಿ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಆಗ ನನ್ನೊಂದಿಗೆ ನನ್ನ ಗೆಳೆಯ ಮಗನ್ ಲಾಲ್ ಸೈನಿ ಇದ್ದರು. ಸದರಿ ದಿನ ನನ್ನ ಗೆಳೆಯ ಮತ್ತು ನಾನು ಪೊಲೀಸ್ ಠಾಣೆಗೆ ವಿಷಯ ತಿಳಿಸಿರುವುದಿಲ್ಲ. ನನ್ನನ್ನು ನನ್ನ ಗೆಳೆಯ ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದನು. ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಆಗಿದೆ ಎಂದು ನಾನು ವೈದ್ಯರಿಗೆ ತಿಳಿಸಿರುತ್ತೇನೆ. ಅಲ್ಲಿಂದ ನನ್ನನ್ನು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಭಟ್ಕಳದ ಆಸ್ಪತ್ರೆಗೆ ಪೊಲೀಸರು ಬಂದಿರಲಿಲ್ಲ. ಪಿರ್ಯಾದಿಯನ್ನು ನಾನೇ ನೀಡಿರುತ್ತೇನೆ. ಪಿರ್ಯಾದಿಯನ್ನು ಅಪಘಾತವಾದ 6 ತಿಂಗಳ ನಂತರ ನೀಡಿರುತ್ತೇನೆ. ಆಗಲೂ ಸಹ ನನಗೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ಗೊತ್ತಿರಲಿಲ್ಲ. ದ್ವಿಚಕ್ರ ವಾಹನದ ಸವಾರನಿಗೆ ಯಾವುದೇ ಗಾಯವಾಗಿರಲಿಲ್ಲ, ನನಗೆ ಮಾತ್ರ ಗಾಯವಾಗಿರುತ್ತದೆ. ಮೋಟಾರು ಸೈಕಲ್ ನಂ.ಕೆಎ–47/ಡಬ್ಲ್ಯೂ–9292 ವಾಹನದಿಂದ ನನಗೆ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ವೆಚ್ಚ ರೂ.80,000/–, ಊಟ, ತಿಂಡಿಗೆ ರೂ.20,000/–, ವಾಹನ ಬಾಡಿಗೆಗೆ ರೂ.50,000/–, ಈಗಲೂ ತಿಂಗಳಿಗೆ ರೂ.5,000/– ಖರ್ಚು ಮಾಡುತ್ತಿದ್ದೇನೆ ಎಂದು ಮತ್ತು ಮುಂದುವರಿದು ರೂ.50,000/– ಖರ್ಚು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಸ್ತ್ರಿ ಕೆಲಸ ಮಾಡಿ, ತಿಂಗಳಿಗೆ ರೂ.35,000/– ಸಂಪಾದನೆ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ ವಾಹನದಿಂದ ಅಪಘಾತವಾಗಿಲ್ಲವಾಗಿದ್ದರಿಂದ ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 10-01-2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಮರು ಹೇಳಿಕೆ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಫೋಟೊ, ಐ.ಎಂ.ವಿ. ವರದಿ, ಗಾಯದ ಪ್ರಮಾಣ ಪತ್ರ ಮತ್ತು ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 10-01-2025**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ:** 07-01-2025

**ಪಾಟೀಸವಾಲು:- ಅರ್ಜಿದಾರರ ಪರ ಶ್ರೀ ಕೆ.ಪಿ.ಎಸ್. ವಕೀಲರ ಪರವಾಗಿ ಶ್ರೀ ಜಿ.ಎಂ.ಎಂ. ವಕೀಲರಿಂದ:-**

ನನ್ನ ಹೆಸರು ನಾಗೇಶ ಮತ್ತು ನನ್ನ ತಂದೆಯ ಹೆಸರು ಗಣೇಶ ಹೆಬ್ಬಾರ್ ಎಂದು ಇರುತ್ತದೆ ಎಂದರೆ ಸರಿ. ನಾನು ಭಟ್ಕಳ ತಾಲೂಕಿನ ಮಾರುಕೇರಿ, ಕೋಟಖಂಡ ಗ್ರಾಮದವನು ಎಂದರೆ ಸರಿ. ಘಟನೆಯು ನನ್ನ ಮನೆಯ ಎದುರು ಆಗಿರುತ್ತದೆ ಎಂದರೆ ಸಾಕ್ಷಿ, ನಮ್ಮ ಮನೆಯ 100 ಮೀ. ದೂರದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತದ ವಿಚಾರವಾಗಿ ಭಟ್ಕಳದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ. ಪೊಲೀಸರು ತನಿಖೆ ಮಾಡಿ, ನನ್ನ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದೋಷಾರೋಪಣಾ ಪತ್ರ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆಪಾದಿತ ಜನರೇಟರನ್ನು ನಾನು ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ಯಾರು ಬಿಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಭಟ್ಕಳ ಪೊಲೀಸರ ವಿರುದ್ಧ ಅವರ ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿರುವುದಿಲ್ಲ. ದೋಷಾರೋಪಣಾ ಪತ್ರವನ್ನು ನಾನು ಯಾವುದೇ ನ್ಯಾಯಾಲಯದ ಮುಂದೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು ಚಾಲಕ ವೃತ್ತಿ ಮಾಡುತ್ತೇನೆ. ಮೃತ ರಾಘು ಸಣ್ಣು ಗೊಂಡರವರು ನಮ್ಮ ಊರಿನವರು ಮತ್ತು ನನಗೆ ಪರಿಚಯಸ್ಥರು ಎಂದರೆ ಸರಿ. ಅರ್ಜಿದಾರರು ಮೃತರ ವಾಹನದ ಬಗ್ಗೆ ದಾಖಲೆಗಳನ್ನು ಮತ್ತು ಆತನ ಡಿ.ಎಲ್. ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಮೃತನ ಅಣ್ಣ ತಮ್ಮ ಮತ್ತು ತಂದೆ ತಾಯಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಿನ ನಾನು ಜನರೇಟರನ್ನು ಡಾಮರು ರಸ್ತೆಗೆ ತಾಗಿಕೊಂಡು, ಯಾವುದೇ ಮುನ್ನೆಚರಿಕೆ ಕ್ರಮ ತೆಗೆದುಕೊಳ್ಳದೇ ಮತ್ತು ಯಾವುದೇ ಇಂಡಿಕೇಟರ್ ಹಾಕದೇ ಇದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ನಂ.9448110302 ಆಗಿದೆ ಎಂದರೆ ಸರಿ. ನಿಪಿ-7 ರಲ್ಲಿ ನನ್ನ ಮೊಬೈಲು ನಂಬರು ತೋರಿಸಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರಿಂದ, ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದರೆ

ಸರಿಯಲ್ಲ. ಪಿರ್ಯಾದಿ ದಾಖಲಿಸಿದ ಬಗ್ಗೆ ಮತ್ತು ಮೃತರ ಕುಟುಂಬದವರು ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 21–12–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಗಾಯದ ಪ್ರಮಾಣ ಪತ್ರ, ಐ.ಎಂ.ವಿ. ವರದಿಯ ಪ್ರತಿ ಮತ್ತು ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಅದೇ ರೀತಿ ಒಂದು ಡಿಸ್ಚಾರ್ಜ್ ಸಮ್ಮರಿಯ ಜೆರಾಕ್ಸನ್ನು ಹಾಜರುಪಡಿಸಿದ್ದು ನಿಪಿ–8 ಎಂದು ಗುರುತಿಸಲಾಯಿತು ಮತ್ತು ಒಂದು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–9 ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದ.**

ಸದರಿ ದಿನ ನಾನು ಯಲ್ಲಾಡಿಕವೂರಿನಿಂದ ಭಟ್ಕಳಕ್ಕೆ ಬರುತ್ತಿದ್ದೆನು. ನಾನು ಪ್ರಯಾಣಿಸುತ್ತಿದ್ದ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ, ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು, ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನನ್ನನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಸದರಿ ಆಸ್ಪತ್ರೆಯಲ್ಲಿ ನಾನು ಅಪಘಾತದಲ್ಲಿ ಗಾಯಗೊಂಡಿರುವುದಾಗಿ ಹೇಳಿರುತ್ತೇನೆ. ನನ್ನ ತಲೆಗೆ ತರಚಿದ ಗಾಯವಾಗಿತ್ತು. ನಂತರ ನನ್ನನ್ನು ಕುಂದಾಪುರದ ಸರ್ಜನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನಾನು 2 ದಿನ ಒಳರೋಗಿಯಾಗಿ ಚಿಕಿತ್ಸೆ

ಪಡೆದುಕೊಂಡಿರುತ್ತೇನೆ. ನನ್ನ ತಲೆಯ ಗಾಯಕ್ಕೆ ವೈದ್ಯರು ಹೊಲಿಗೆ ಹಾಕಿ ಬ್ಯಾಂಡೇಜ್ ಮಾಡಿದ್ದರು. ಗಾಯದಿಂದ ನನ್ನ ದೈನಂದಿನ ಕಾರ್ಯಕ್ಕೆ ಯಾವುದೇ ಅಡ್ಡಿಯಾಗಿಲ್ಲ ಎಂದರೆ ಸರಿಯಲ್ಲ. ವೈದ್ಯರು ಹೇಳಿದಂತೆ ನಾನು ಔಷದೋಪಚಾರ ಪಡೆದಿರುತ್ತೇನೆ. ನನಗೆ ಗಾಯದಿಂದ ಯಾವುದೇ ನಷ್ಟ ಉಂಟಾಗಿರುವುದಿಲ್ಲ, ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೃಷಿ ಕೆಲಸ ಮಾಡಿ, ತಿಂಗಳಿಗೆ ರೂ.20,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ಸಮಯದವರೆಗೆ ವಿಶ್ರಾಂತಿ ಪಡೆದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಹೋಗಲು ವಾಹನ ಬಾಡಿಗೆಗೆ ರೂ.4,000/- ಮತ್ತು ಆಸ್ಪತ್ರೆಯಲ್ಲಿ ಊಟ ತಿಂಡಿ ಮತ್ತು ಸಹಾಯಕರ ಸಲುವಾಗಿ ರೂ.3,000/- ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಈಗಲೂ ಮತ್ತು ಮುಂದಿನ ಭವಿಷ್ಯಕ್ಕೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆಯೇ ಕೆಲಸ ಮಾಡುತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯು ಕಾಲಮಿತಿ ಮೀರಿದ ಅರ್ಜಿಯಾಗಿದ್ದರಿಂದ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

1ನೇ ಎದ್ರುದಾರ ಎಕ್ಸ್‌ಪಾರ್ಟಿಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಆರ್.ಡಬ್ಲ್ಯು 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 21-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಎದುರುದಾರನಿರುತ್ತೇನೆ. ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ, ಅರ್ಜಿದಾರರು ಪರಿಹಾರ ಕೋರಿ ನನ್ನ ವಿರುದ್ಧ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿಕೊಡಬೇಕಾಗಿ ವಿನಂತಿ.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಕೆ.ಪಿ.ಎಸ್. ವಕೀಲರ ವಕೀಲರಿಂದಃ-**

ಅರ್ಜಿದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಶ್ರೀ ಜಿ ಎಂ ಎಂ ವಕೀಲರು ಹಾಜರಾಗಿ, ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 21-12-2024

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಜೆ.ಎನ್. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾರ್ಜ್ ಶೀಟ್ ಪ್ರತಿ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ ಮತ್ತು ನಕ್ಷೆ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-38 ರಿಂದ ನಿಪಿ-40 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 3 ಮತ್ತು 4 ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.(ಹೆಚ್) ವಕೀಲರಿಂದ.**

ಸದರಿ ಅಪಘಾತವಾದ ದಿನ ನಾನು ಪ್ರಯಾಣಿಸುತ್ತಿದ್ದ ವಾಹನದ ಚಾಲಕನ ಹಿಂಬದಿಯ ಆಸನದಲ್ಲಿ ಕುಳಿತಿದ್ದೆನು. ನಾನು ಸದರಿ ಸಮಯದಲ್ಲಿ ಯಾರೊಂದಿಗೂ ಮಾತನಾಡುತ್ತಾ ಅಥವಾ ಪೇಪರ್ ಓದುತ್ತಾ ಕುಳಿತಿರಲಿಲ್ಲ. ಹಿಂದುಗಡೆ ಬರುತ್ತಿದ್ದ ಆಪಾದಿತ ವಾಹನವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತವಾದ ತಕ್ಷಣ ನನಗೆ ಜ್ಞಾನ ತಪ್ಪಿರಲಿಲ್ಲ. ಅಪಘಾತವು ಹೇಗೆ, ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ, ನನ್ನ ತಿಳುವಳಿಗೆ ಪ್ರಕಾರ ಬಸ್ಸಿನ ಚಾಲಕನ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ. ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ, ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನನ್ನು ಮೊದಲು ಶಿರಾಲಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿ ನನಗೆ ಗಾಯಕ್ಕೆ ಹೊಲಿಗೆ ಹಾಕಿ ನಂತರ ಅಲ್ಲಿಂದ ಭಟ್ಕಳದ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಡಿಸಿದ್ದರು. ಅಲ್ಲಿಂದ ಹೊನ್ನಾವರದ ಸೈಂಟ್ ಇಗ್ನೇಶಿಯಸ್ ಆಸ್ಪತ್ರೆಗೆ ಹೋಗಿ, ಅಲ್ಲಿ 2 ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ತದನಂತರದಲ್ಲಿ ಒಳರೋಗಿಯಾಗಿ ನಾನು ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು

ಔಷದೋಪಚಾರಕ್ಕಾಗಿ ರೂ.30,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ರೂ.4,000/- ಖರ್ಚು ಮಾಡಿದ್ದೇನೆ ಎಂದು, ವಾಹನ ಬಾಡಿಗೆಗೆ ರೂ.10,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ ರೂ.20,000/- ಖರ್ಚು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾವಾದಾಗ ನಾನು ಒಂದು ತಿಂಗಳಿನ ವರೆಗೆ ಈ.ಎಲ್ ರಜೆ ಹಾಕಿರುತ್ತೇನೆ. ನಾನು ಒಂದು ಈ.ಎಲ್. ರಜೆ ಹಾಕುವ ಅವಶ್ಯಕತೆ ಇರಲಿಲ್ಲ, ಒಂದು ವಾರ ಪಡೆದಿದ್ದರೆ ಸಾಕಾಗುತ್ತಿತ್ತು ಎಂದರೆ ಸರಿಯಲ್ಲ. ಅಪಘಾತದಿಂದ ರೂ.61,638/- ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ.

ನಾನು ಆರೋಗ್ಯ ವಿಮಾ ಮಾಡಿದ್ದೇನೆ ಎಂದರೆ ಸರಿಯಲ್ಲ. ಸರಕಾರದಿಂದ ನಾನು ಅಪಘಾತದ ಖರ್ಚು ವೆಚ್ಚಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಇನ್ಕ್ರಿಮೆಂಟ್ ಹೆಚ್ಚಾದರೆ ನನಗೆ ಮೊದಲಿನಿಗಿಂತ ಹೆಚ್ಚಿನ ಸಂಬಳ ಬರುತ್ತದೆ ಎಂದರೆ ಸರಿ. ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳಾಗಿವೆ, ನಾನು ಮೊದಲಿನಂತೆಯೇ ಈಗ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

1ನೇ ಎದುರುದಾರರ ಪರ ವಕೀಲರು 3ನೇ ಮತ್ತು 4ನೇ ಎದುರದಾರರ ಪರವಾಗಿ ಮಾಡಿದ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 21-12-2024**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ ಮತ್ತು ಗಾಯದ ಪ್ರಮಾಣ ಪತ್ರ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಅದೇ ರೀತಿ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-9 ಎಂದು ಗುರುತಿಸಲಾಯಿತು. ಅಂಗನೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-10 ಎಂದು ಗುರುತಿಸಲಾಯಿತು. 7 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 11 ರಿಂದ 17 ಎಂದು ಗುರುತಿಸಲಾಯಿತು. ಒಟ್ಟು 5 ಔಷಧಿ ಚೀಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-18 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದ.**

ಸದರಿ ಅಪಘಾತವಾದ ದಿನ ಆಟೋದಲ್ಲಿ ನಾವು 5 ಜನರು ಮತ್ತು ಆಟೋ ಚಾಲಕ ಸೇರಿ ಒಟ್ಟು 6 ಜನರು ಪ್ರಯಣಿಸುತ್ತಿದ್ದೆವು. ಅದರಲ್ಲಿ ನನಗೆ ಮತ್ತು ಮಂಜುನಾಥ ಎನ್ನುವವರಿಗೆ ಪೆಟ್ಟಾಗಿತ್ತು. ಆಟೋ ರಿಕ್ಷಾ ಪಲ್ಟಿಯಾಗಿತ್ತು. ಅಪಘಾತವು ಒಂದು ನಾಯಿ ನಮ್ಮ ಆಟೋದ ಅಡ್ಡ ಬಂದಿರುವುದರಿಂದ ಆಗಿರುತ್ತದೆ. ಆಟೋ ಚಾಲಕನ ಹೆಸರು ಚಂದ್ರ ಎಂದು ಇತ್ತು. ಸದರಿ ದಿನ ಆಟೋ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆಟೋದಲ್ಲಿ 3 ಜನರು ಮಾತ್ರ ಪ್ರಯಾಣಿಸಬೇಕು, ಆದರೂ ಸಹ ನಾವು 6 ಜನರು ಪ್ರಯಾಣಿಸುತ್ತಿದ್ದರಿಂದ, 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲು ಸರಕಾರಿ ಆಸ್ಪತ್ರೆ, ಭಟ್ಕಳದಲ್ಲಿ ಚಿಕಿತ್ಸೆ ಪಡೆದುಕೊಂಡು, ವೈದ್ಯರ ಸಲಹೆ ಮೇರೆಗೆ ಕುಂದಾಪುರದ ಚಿನ್ಮಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನಾನು ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಸದರಿ ಆಸ್ಪತ್ರೆಯ ವೈದ್ಯರು ನನಗೆ ಪೆಟ್ಟಾದ ಸ್ಥಳಕ್ಕೆ ಔಷದೋಪಚಾರ ಮಾಡಿ ಕೈಗೆ ಬೆಲ್ಟ್ ಹಾಕಿ ಕಳುಹಿಸಿದ್ದರು. ನನಗೆ ಯಾವುದೇ ಮೂಳೆ ಮುರಿತವಾಗಿಲ್ಲ, ಆ ಕಾರಣಕ್ಕೆ ನನಗೆ ಬೆಲ್ಟ್ ಹಾಕಿದ್ದರು ಎಂದರೆ ಸರಿಯಲ್ಲ. ನಾನು ಹೇಳಿದಂತೆ ವಾಹನ ಬಾಡಿಗೆಗೆ ಹೇಳಿದಷ್ಟು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಬಸ್ಸಿನಲ್ಲಿ ಆಸ್ಪತ್ರೆಗೆ ಹೋಗಲು ಆಗುತ್ತಿರಲಿಲ್ಲ, ಏಕೆಂದರೆ ನನಗೆ ಕೈಗೆ ಹೆಚ್ಚು ಪೆಟ್ಟಾಗಿತ್ತು.

ನಾನು ಮೀನು ಮಾರಾಟ ಕೆಲಸ ಮಾಡುತ್ತೇನೆ. ನಾನು ತಿಂಗಳಿಗೆ ರೂ.22,000/– ಆದಾಯ ಗಳಿಸುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತದಲ್ಲಿ ನಾನು ಸ್ವಂತ ತಪ್ಪಿನಿಂದ ಗಾಯಗೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಯಾಣಿಸುತ್ತಿದ್ದ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ 1ನೇ ಎದುರದಾರನೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಹೇಳಿದಷ್ಟು ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ಶ್ರಿ ಎಂ.ಜಿ. ವಕೀಲರಿಂದಃ–**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ವಾಹನದ ಆಟೋ ಚಾಲಕ ಯಾವುದೇ ನಿಶ್ಕಾಳಜಿತನದಿಂದ ವಾಹನ ಓಡಿಸಿ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆಟೋ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನದ ಚಾಲಕನಿಗೆ ಕಾನೂನು ಬದ್ಧವಾದ ಚಾಲನಾ ಪರವಾನಿಗೆ ಪತ್ರ ಮತ್ತು ವಿಮೆ ಇರುವುದರಿಂದ 1ನೇ ಎದುರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 20-12-2024

**ಮುಂದುವರಿದ ಮುಖ್ಯ ವಿಚಾರಣೆಃ ಮಧ್ಯಂತರ ಅರ್ಜಿ ಸಂಖ್ಯೆ 4 ರ ಆದೇಶದನ್ವಯ**

**ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಮೃತ ನನ್ನ ಮಗನ ಒಳ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಆಸ್ಪತ್ರೆಯವರು ನೀಡಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಒಟ್ಟಾಗಿ ನಿಪಿ-113 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಮುಂದುವರಿದ ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ನಿಪಿ-113 ರ ಆಸ್ಪತ್ರೆಯ ದಾಖಲೆಗಳು ಇರುವುದಿಲ್ಲ, ಅವು ನಮ್ಮ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮಗ ಆದರ್ಶ ಆಸ್ಪತ್ರೆಯಲ್ಲಿ ಮೃತನಾಗಿರಲಿಲ್ಲ ಎಂದರೆ ಸರಿ. ಮೃತನು ಸಂಪೂರ್ಣವಾಗಿ ಗುಣಮುಖನಾಗಿದ್ದರಿಂದ ಆದರ್ಶ ಆಸ್ಪತ್ರೆಯವರು ನನ್ನ ಮಗನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಅಪಘಾತದಲ್ಲಿ ಗಾಯಗೊಂಡ ಗಾಯಗಳಿಂದ ಮೃತನಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು ಅಪಘಾತದಿಂದ ಗಾಯಗೊಂಡು ಮೃತನಾಗಿಲ್ಲವಾದ್ದರಿಂದ ನಾವು ಯಾವುದೇ ಪರಿಹಾರ ಪಡೆಯಲು ಬಾಧ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 20-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-8 ಎಂದು ಗುರುತಿಸಲಾಯಿತು. ಒಟ್ಟು 27 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 9 ರಿಂದ 35 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಅದರ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಸರಿಯಿದ್ದು, ಅದನ್ನು ನಿಪಿ-36 ಎಂದು ಗುರುತಿಸಿ, ಸಾಕ್ಷಿಗೆ ಮೂಲ ಪ್ರತಿಯನ್ನು ಹಿಂದಿರುಗಿಸಲಾಗಿದೆ. ನೆಗೆಟಿವ್ ರಹಿತ ಒಂದು ಫೋಟೊವನ್ನು ಹಾಜರುಪಡಿಸಿರುತ್ತೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

<u>ಪಾಟೀ ಸವಾಲುಃ</u> **2ನೇ ಎದುರುದಾರರ ಪರ ಶ್ರೀ ಎಸ್.ವಿ.ಕೆ. ವಕೀಲರಿಂದ.**

ಅಪಘಾತವಾಗುವ ಸಮಯದಲ್ಲಿ ಆರ್.ಸನ್ಸ್ ಎಂಬ ಹಾರ್ಡವೇರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು. ಸಾಮಾನ್ಯವಾಗಿ ನಾನು ಕೆಲಸ ಮಾಡುವ ಅಂಗಡಿಯು ಬೆಳಿಗ್ಗೆ 9.00 ಗಂಟೆಗೆ ತೆರೆಯುತ್ತದೆ ಎಂದರೆ ಸರಿ. ಸದರಿ ಅಂಗಡಿಯಲ್ಲಿ ನಾನು ಸುಮಾರು 7–8 ವರ್ಷಗಳ ವರೆಗೆ ಕೆಲಸ ಮಾಡುತ್ತಿದ್ದೇನೆ. ಸದರಿ ದಿನ ನಾನು ಕೆಲಸ ಮಾಡುವ ಅಂಗಡಿಯ ಗೋಡೌನಿಗೆ ಸಾಮಾನುಗಳನ್ನು ತರಲು ಹೋಗಿದ್ದೆನು. ಅಪಘಾತವಾದ ಸ್ಥಳವು ಸುಮಾರು 10 ಅಡಿ ಇರುತ್ತದೆ. ಆಪಾದಿತ ವಾಹನವು ನನಗೆ ಹಿಂಬದಿಯಿಂದ ಢಿಕ್ಕಿಪಡಿಸಿರುತ್ತದೆ. ನಾನು ಹಿಂಬದಿಯಿಂದ ಬರುವ ವಾಹನವನ್ನು ಗಮನಿಸದೇ ಒಮ್ಮೆಲೇ ಹಿಂದೆ ಬರುವ ವಾಹನಕ್ಕೆ ನಾನೇ ಢಿಕ್ಕಿಪಡಿಸಿಕೊಂಡಿರುತ್ತೇನೆ. ಅಪಘಾತವು ನನ್ನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ ಜ್ಞಾನ ತಪ್ಪಿತ್ತು. ವಾಹನದಲ್ಲಿ ಹಾಕುವಾಗ ನನಗೆ ಎಚ್ಚರವಾಗಿರುತ್ತದೆ. ನನ್ನನ್ನು ನೇರವಾಗಿ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆದಂತೆ ನನಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಒಳರೋಗಿಯಾಗಿ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ, ನಾನು ಹೇಳಿದಂತೆ ಆಸ್ಪತ್ರೆಗೆ ಹಣ ಖರ್ಚು ಮಾಡಿಲ್ಲ, ಊಟೋಪಚಾರಕ್ಕೆ ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಅಂಗಡಿಯಲ್ಲಿ ಸಂಬಳ ಕೊಡುವಾಗ ಅಂಗಡಿಯವರು ಒಂದು ಪುಸ್ತಕದಲ್ಲಿ ಸಹಿ ಪಡೆಯುತ್ತಿದ್ದರು. ನಾನು ರೂ.20,000/– ಸಂಬಳ ಪಡೆಯುತ್ತಿದ್ದೇನೆ ಎದು ತೋರಿಸಲು ನನಗೆ ಅಂಗಡಿಯ ಮಾಲೀಕರಿಂದ ದಾಖಲೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಈಗ ಸಂಪೂರ್ಣ ಗುಣಮುಖನಾಗಿರುತ್ತೇನೆ. ನನಗೆ ಈಗ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ, ಮೊದಲಿನಂತೆಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಒಳಸಾಧನವನ್ನು ತೆಗೆಯಲು ರೂ.35,000/– ವೆಚ್ಚ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

– 6 – ಎಂ.ವಿ.ಸಿಃ 421/2023
ಪಿ.ಡಬ್ಲ್ಯುಃ 1

ನನಗೆ ಬಿ.ಪಿ.ಎಲ್. ಪಡಿತರ ಚೀಟಿ ಇರುತ್ತದೆ. ನಾನು 6 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಶಾಲಾ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಮೇಲೆ ಹೇಳಿದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ–**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/–*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 20-12-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 2ನೇ ಎದುರುದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, 2ನೇ ಎದುರುದಾರರು ನೀಡಿದ ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ ಹಾಜರುಪಡಿಸಿದ್ದು, ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು. ಅದೇ ರೀತಿ, ಒಂದು ವಿಮಾ ಪತ್ರದ ಪ್ರತಿ ಮತ್ತು ಪ್ರೀಮಿಯಂ ರಿಸೀಟಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-2 ಮತ್ತು 3 ಎಂದು ಗುರುತಿಸಲಾಯಿತು. ಅದೇ ರೀತಿ, ಸಿ.ಸಿ. ನಂ.1638/2021 ರ ನ್ಯಾಯಾಲಯದ ದಿನಚರಿ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್-4 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು 2ನೇ ಎದ್ರುದಾರರ ವಿರುದ್ಧ ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

1ನೇ ಎದುರುದಾರನ ಆಪಾದಿತ ವಾಹನದ ಸಂಖ್ಯೆ ಕೆಎ-21/ಎನ್-8703 ವಾಹನವು ನಮ್ಮ ಸಂಸ್ಥೆಯಲ್ಲಿ ವಿಮಾ ಪಾಲಿಸಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಅಪಘಾತವಾದ ದಿನ ಮತ್ತು ಸಮಯದಂದು ವಿಮಾ ಪಾಲಿಸಿ ಚಾಲ್ತಿಯಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವು ದಿ.27-03-2021 ರಂದು ಮಧ್ಯಾಹ್ನ 1.15 ಗಂಟೆಗೆ ಆಗಿದೆ ಎಂದರೆ ಸರಿ. ಅದೇ ದಿನ ಅಂದರೆ ದಿ.27-03-2021 ರಂದು 1ನೇ ಎದುರುದಾರನ ವಾಹನಕ್ಕೆ ವಿಮಾ ಪಾಲಿಸಿ ಮಾಡಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಸದರಿ ಪಾಲಿಸಿಯು

ದಿ.28-03-2021 ರಂದು ಜಾರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ವಾಹನದ ಮಾಲೀಕರು ಪ್ರೀಮಿಯಂ ಅನ್ನು ಅಪಘಾತವಾದ ದಿನ ಸಂಜೆ 4.ಗಂಟೆ 19 ನಿಮಿಷಕ್ಕೆ ಹಣ ಪ್ರೀಮಿಯಂ ಮಾಡಿರುತ್ತಾರೆ.

ನಾವು ವಿಮಾ ಪಾಲಿಸಿ ಮಾಡುವಾಗ ವಾಹನದ ಆರ್.ಸಿ.ಯನ್ನು ನೋಡಿ ವಿಮಾ ಪಾಲಿಸಿ ಮಾಡುತ್ತೇವೆ. ಅದೇ ರೀತಿ, ಈ ಪ್ರಕರಣದ ಆರ್.ಸಿ.ಯನ್ನು ನೋಡಿ ವಿಮೆ ಮಾಡಲಾಗಿದೆ ಎಂದರೆ ಸರಿ. ನ್ಯಾಯಾಲಯದಿಂದ ನಮಗೆ ನೋಟಿಸ್ ಬಂದ ನಂತರ ನಮ್ಮ ಸಂಸ್ಥೆಯ ವತಿಯಿಂದ ಆಂತರಿಕ ತನಿಖಾಧಿಕಾರಿಯನ್ನು ನೇಮಿಸಿ ಪ್ರಕರಣದ ತನಿಖೆಯನ್ನು ಮಾಡುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿಯೂ ಸಹ ಆಂತರಿಕ ತನಿಖೆಯನ್ನು ಮಾಡಿಸಿದ್ದೆವು. ತನಿಖಾಧಿಕಾರಿಗಳು ತನಿಖೆ ಮಾಡಿ, ಸಲ್ಲಿಸಿದ ವರದಿಯ ಆಧಾರದ ಮೇಲೆ ನ್ಯಾಯಾಲಯಕ್ಕೆ ನಾವು ಪ್ರತಿವಾದ ಪತ್ರ ಸಲ್ಲಿಸುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಅದೇ ರೀತಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿ, ಪ್ರತಿವಾದ ಪತ್ರ ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ.

ಈ ಪ್ರಕರಣದಲ್ಲಿ ನಾವು ಯಾವ ದಿನಾಂಕದಂದು ಪ್ರತಿವಾದ ಪತ್ರ ಸಲ್ಲಿಸಿದ್ದೇವೆ ಎಂದು ನನಗೆ ನೆನಪಿಲ್ಲ. ಪ್ರತಿವಾದ ಪತ್ರ ಹಾಕುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ, ಪ್ರತಿವಾದ ಪತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ನಮ್ಮ ವಾದ ಪತ್ರದಲ್ಲಿ ಆಪಾದಿತ ವಾಹನಕ್ಕೆ ವಿಮೆ ಇರಲಿಲ್ಲ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರರಿದು, ನಮ್ಮ ಪ್ರತಿವಾದ ಪತ್ರದ ಪ್ಯಾರಾ ನಂ. 3 ರಲ್ಲಿ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಅದರಲ್ಲಿ ದಿನಾಂಕ ಮತ್ತು ಸಮಯ ನಮೂದಿಸಿಲ್ಲ ಎಂದರೆ ಸರಿ. ಒಂದು ವರ್ಷ ಕಳೆದರೂ ಸಹ ನಾವು ನಮ್ಮ ಪ್ರತಿವಾದ ಪತ್ರದಲ್ಲಿ ವಿಮೆ ಇರಲಿಲ್ಲ ಎಂದು ಅದರ ನಿಖರವಾದ ವೇಳೆ, ದಿನಾಂಕ ಮತ್ತು ವರ್ಷವನ್ನು ಹೇಳಿರುವುದಿಲ್ಲ ಎಂದರೆ ಸಾಕ್ಷಿ, ಹೌದು ಎಂದು ನುಡಿದು ಮುಂದುವರಿದು, ನಾವು ಪ್ರತಿವಾದ ಪತ್ರದ 3ನೇ ಪ್ಯಾರಾದಲ್ಲಿ "The car bearing No.KA.21/N-8703 was not covered at the material time under the Policy" ಎಂದು ಬರೆದು ಹಾಕಿದ್ದಾಗಿ ನುಡಿಯುತ್ತಾರೆ. ಸಾಕ್ಷಿ ಮುಂದಮರಿದು, ನಮ್ಮ ತಿದ್ದುಪಡಿ ಪ್ರತಿವಾದ ಪತ್ರದ ಪ್ಯಾರಾ ನಂ.3ಎ ರಲ್ಲಿ ನಿಖರವಾಗಿ ಹೇಳಿದ್ದೇವೆ ಎಂದು ನುಡಿಯುತ್ತಾರೆ .

ನಾವು ವಾಹನದ ಮಾಲೀಕರಿಗೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ. ವಾಹನದ ಮಾಲೀಕರು ಅಪಘಾವಾದ ಮೊದಲೇ ಅಂದರೆ ದಿ.27-03-2021 ರಂದು ಬೆಳಗ್ಗಿನ ಅವಧಿಯಲ್ಲಿ ಪ್ರೀಮಿಯಂ ಪಾವತಿ ಮಾಡಿದ್ದರೂ ಸಹ ತುಂಬಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾವು ವಾಹನದ ಮಾಲೀಕರಿಗೆ

ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಠಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 19-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 13–12–2024**

**ಮುಂದುವರಿದ ಮುಖ್ಯ ವಿಚಾರಣೆಃ ಮಧ್ಯಂತರ ಅರ್ಜಿ–II ಆದೇಶದಂತೆ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ 2ನೇ ಅರ್ಜಿದಾರರು ಈಗ 2 ತಿಂಗಳ ಹಿಂದೆ ಮೃತರಾಗಿರುತ್ತಾರೆ. ಮುಂದುವರಿದು, ಮೃತ ನನ್ನ ಗಂಡನ ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ ನಿಪಿ–10 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್.ಎಸ್.ಕೆ. ವಕೀಲರಿಂದಃ–**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲವಾದ್ದರಿಂದ ಅಪಘಾತ ಹೇಗೆ, ಯಾವ ವಾಹನದಿಂದ ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಕೆ.ಎ.20/ಎಎ–7699 ವಾಹನವು ಅಪಘಾತಕ್ಕೊಳಪಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ಆಪಾದಿತ ವಾಹನದ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತನು ಬೋಟಿನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತಿದ್ದು, ಆತನಿಗೆ ತಿಂಗಳಿಗೆ ರೂ.30,000/– ಆದಾರಯ ಬರುತ್ತಿದತ್ತುಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಆತನಿಗೆ 74 ರಿಂದ 75 ವರ್ಷವಾಗಿತ್ತು ಎಂದರೆ ಸರಿ. ಆತನಿಗೆ ಸರಿಯಾಗಿ ಕಣ್ಣು ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಮೃತನಿಗೆ ಹೆಚ್ಚು ವಯಸ್ಸಾಗಿದ್ದರಿಂದ ಆತನಿಗೆ ಮೊದಲಿನಂತೆ ಕೆಲಸ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿ. ಆತನಿಗೆ ವಾಹನಗಳು ಯಾವ ಕಡೆಯಿಂದ ಹೇಗೆ ಬರುತ್ತಿದ್ದವು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ

**ಪಿ.ಡಬ್ಲ್ಯು: 1**

ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

(1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(3ನೇ ಎದುರದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 13-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಕಲಂ.304(ಎ) ಅಳವಡಿಸಿಕೊಂಡ ಪೊಲೀಸರ ಮನವಿ ಪತ್ರ, ಪಿ.ಎಂ. ವರದಿ, ಘಟನಾ ಸ್ಥಳದ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ನಕ್ಷೆ ಮತ್ತು ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಅದೇ ರೀತಿ ಮೃತಳ ಅಟೆಸ್ಟೆಡ್ ಮಾಡಿದ ಜೆರಾಕ್ಸ್ ಆಧಾರ ಪ್ರತಿ ಮತ್ತು ನನ್ನ ಆಧಾರ ಪ್ರತಿ ಮತ್ತು ಮೂಲ ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-9 ರಿಂದ 11 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತವಾಗಿರುವುದು ನಮಗೆ ಒಂದು ತಾಸಿನ ನಂತರ ಗೊತ್ತಾಗಿರುತ್ತದೆ. 1ನೇ ಎದುರುದಾರ ನನಗೆ ತಮ್ಮನಾಗಬೇಕು. 1ನೇ ಎದುರದಾನಿಗೆ ಡಿ.ಎಲ್ ಇರುತ್ತದೆ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1ನೇ ಎದುರುದಾರನಿಗೆ ಡಿ.ಎಲ್ ಇರುವುದಿಲ್ಲ, ಆ ಕಾರಣಕ್ಕೆ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನು ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದಾಗ ದನ ಒಂದು ಅಡ್ಡಬಂದು ಅಪಘಾತವು ಆಗಿರುತ್ತದೆ. ಈ ಪ್ರಕರಣವನ್ನು ಹೊರತುಪಡಿಸಿ, ನಾನು ಬೇರೆ ಯಾವುದೇ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವುದಿಲ್ಲ. ನಾನು ಪೊಲೀಸರಿಗೆ ಪ್ರಕರಣದ ಸಂಬಂಧ ಹೇಳಿಕೆ ಅಥವಾ ಪಿರ್ಯಾದಿಯನ್ನು ನೀಡಿರುವುದಿಲ್ಲ.

2ನೇ ಅರ್ಜಿದಾರ ನನ್ನ ಮಗ. 2ನೇ ಅರ್ಜಿದಾರನು ಆನ್ ಲೈನಲ್ಲಿ ಯೋಗಾ ತರಬೇತಿ ಉದ್ಯೋಗ ಮಾಡುತ್ತಾನೆ. ಆತನು 'work from home' ಕೆಲಸ ಒಂದು

ಬೆಂಗಳೂರಿನ ಕಂಪನಿಯ ಮೂಲಕ ಕೆಲಸ ಮಾಡುತ್ತಾನೆ. ನನಗೆ ಒಬ್ಬ ಹೆಣ್ಣು ಮಗಳು ಇರುತ್ತಾಳೆ, ಅವಳ ಮದುವೆ ಮಾಡಿರುತ್ತೇನೆ. ನನಗೆ 10 ಗುಂಟೆ ಅಡಿಕೆ ತೋಟವಿದೆ. ಮೃತ ನನ್ನ ಹೆಂಡತಿ ಮನೆಯ ಕೆಲಸ ಮಾಡಿ, ಬೇರೆ ಕಡೆಗೆ ವಿಶೇಷ ಸಮಾರಂಭಗಳಿಗೆ ಅಡುಗೆ ಕೆಲಸ ಮಾಡಲು ಹೋಗುತ್ತಿದ್ದಳು. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಮೃತ ನನ್ನ ಹೆಂಡತಿ ಮದುವೆ ಸಮಾರಂಭಗಳಿಗೆ ಅಡುಗೆ ಕೆಲಸಕ್ಕೆ ಹೋಗುತ್ತಿದ್ದಳೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಮೃತ ನನ್ನ ಹೆಂಡತಿ 10 ನೇ ತರಗತಿಯವರೆಗೆ ಓದಿದ್ದರು. ಅವರು ಮಾರುಕೇರಿ ಸರಕಾರಿ ಶಾಲೆಯಲ್ಲಿ ಓದಿರುತ್ತಾಳೆ. ಮೃತಳ ನಿಖರವಾದ ವಯಸ್ಸು ತೋರಿಸಲು ಅವಳ ಶಾಲಾ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಅಪಘಾತವಾದ ದಿನ ಮೃತಳಿಗೆ 65 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು, ಅದಕ್ಕಾಗಿ ನಿಜ ಗೊತ್ತಾಗುತ್ತದೆ ಎಂದು ಅವಳ ಶಾಲಾ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2ನೇ ಅರ್ಜಿದಾರ ಮೃತಳ ಆದಾಯದ ಮೇಲೆ ಅವಲಬಿತರಾಗಿಲ್ಲ ಎಂದರೆ ಸರಿಯಲ್ಲ. ಮೃತಳಿಗೆ ಯಾವುದೇ ಆದಾಯವಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಕೃಷಿಯಿಂದ ಮತ್ತು 2ನೇ ಅರ್ಜಿದಾರನಿಂದ ಖಾಸಗಿ ಕೆಲಸ ಮಾಡಿ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ಮೃತಳಿಗೆ ಆದಾಯವಿರಲಿಲ್ಲ, ಮೃತಳು ನಮ್ಮ ಆದಾಯದ ಮೇಲೆ ಅವಲಂಬಿತಳಾಗಿದ್ದಳು ಎಂದರೆ ಸರಿಯಲ್ಲ. ರೂ.1,00,000/– ಅಂತ್ಯ ಸಂಸ್ಕಾರಕ್ಕೆ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಗಣನಾಥ ವಾಸುದೇವ ಹೆಬ್ಬಾರ ರವರ ಮೂಲಕ ಸುಳ್ಳು ಪಿರ್ಯಾದಿ ನೀಡಿದ್ದೇವೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ–**

1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 13–12–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಎರಡು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–8 ಮತ್ತು 9 ಎಂದು ಗುರುತಿಸಲಾಯಿತು. 43 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 10 ರಿಂದ 52 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಯನ್ನು, ಆರ್.ಸಿ. ಮತ್ತು ಡಿ.ಎಲ್. ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅವುಗಳನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ, ಅವುಗಳನ್ನು ನಿಪಿ–53 ರಿಂದ 55 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ–**

ಸದರಿ ಅಪಘಾತದ ದಿನ ನಾವು ಹೋಗುತ್ತಿದ್ದ ದಿಕ್ಕಿನಲ್ಲಿ ಆಪಾದಿತ ವಾಹನದ ಚಾಲಕನೂ ಬರುತ್ತಿದ್ದನು. ಸದರಿ ದಿನ ನಾವು ಹೋಗುತ್ತಿದ್ದ ರಸ್ತೆಯು ಚತುಷ್ಪಥ ರಾ.ಹೆ. ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳು ಹೋಗುತ್ತಿದ್ದವು. ಆಪಾದಿತ ವಾಹನದ ಚಾಲಕ ನಾನು ಹೋಗುತ್ತಿದ್ದ ಸಮಯದಲ್ಲಿ

ಎಡಬದಿಯಿಂದ ಬಂದು ನನಗೆ ಢಿಕ್ಕಿಪಡಿಸಿರುತ್ತಾನೆ. ಸದರಿ ರಸ್ತೆಯಲ್ಲಿ ಎರಡೂ ಬಂದಿಯಲ್ಲಿ ವಾಹನಗಳು ಹೋಗುತ್ತಿದ್ದವು ಎಂದರೆ ಸರಿ. ಅಪಘಾತವು 1ನೇ ಎದುರುದಾರನ ವಾಹನದ ಚಾಲಕನಿಂದ ಆಗಿರುವುದಿಲ್ಲ, ಬದಲಾಗಿ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು 1ನೇ ಎದುರುದಾರನ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸದರಿ ನಾನು ಹೇಳಿದಂತೆ, ನನಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಮತ್ತು ಹೇಳಿದಷ್ಟು ಚಿಕಿತ್ಸೆಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಕೈಗೆ ಶಸ್ತ್ರಚಿಕಿತ್ಸೆ ಮಾಡಿ, ಇಂಪ್ಲಾಂಟ್ ಅಳವಡಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಅಪಘಾತದಿಂದ ನಾನು ರೂ.1,50,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾವಳಿ ಪೊಲೀಸ್ ಠಾಣೆಯಲ್ಲಿ ಗಾರ್ಡ್ ಆಗಿ ಕೆಲಸ ಮಾಡುತ್ತಿಲ್ಲ, ಅದರಿಂದ ತಿಂಗಳಿಗೆ ಸುಮಾರು ರೂ.18,000/- ಆದಾಯ ಪಡೆಯುತ್ತಿದ್ದೇನೆ ಎಂದು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾವಳಿ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜುರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪೊಲೀಸ್ ಠಾಣೆಯಲ್ಲಿ 4 ತಿಂಗಳ ವರೆಗೆ ಕೆಲಸ ಮಾಡಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಈಗಲೂ ಸಹ ನಾನು ಸದರಿ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಅಪಘಾತದಿಂದ ನಾನು ಸುಮಾರು 6 ತಿಂಗಳ ವರೆಗೆ ವಿಶ್ರಾಂತಿ ಪಡೆದಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರನೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನಮ್ಮ ತಪ್ಪಿನಿಂದ ಆಗಿದ್ದರಿಂದ 3 ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ದಾಖಲೆಗಳು ಸುಳ್ಳಾಗಿ ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ.





**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್.ಎಸ್.ಕೆ. ವಕೀಲರಿಂದಃ-**

ಸದರಿ ಪ್ರಕರಣದಲ್ಲಿ 2ನೇ ಎದುರುದಾರನನನ್ನು ತಪ್ಪು ತಿಳುವಳಿಕೆಯಿಂದ ಪಕ್ಷಗಾರನನ್ನಾಗಿ ಮಾಡಲಾಗಿದೆ ಎಂದರೆ ಸರಿ. 2ನೇ ಎದುರುದಾರನ ವಿರುದ್ಧ ನನ್ನದು ಯಾವುದೇ ಕ್ಲೈಮ್ ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ-**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಭಟ್ಕಳ**

**ಎಂವಿಸಿಃ 344/2023**
**ಆರ್.ಡಬ್ಲ್ಯುಃ 3**
**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**
**ದಿನಾಂಕಃ 13-12-2024**

**ಹೆಸರು** : ಸುಬ್ರಾಯ ಶಂಭು ಹೆಗಡೆ
**ತಂದೆಯ ಹೆಸರು** : ಶಂಭು ಹೆಗಡೆ
**ವಯಸ್ಸು** : 54 ವರ್ಷ
**ಉದ್ಯೋಗ** : ಎ.ಆರ್.ಟಿ.ಓ., ಹೊನ್ನಾವರ
**ವಾಸ** : ಹೊನ್ನಾವರ

**ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ಎಸ್ .ಎಂ.ಬಿ. ವಕೀಲರಿಂದಃ-**

ನಾನು ಕಳೆದ ಮಾರ್ಚ್ 2024 ರಿಂದ ಈ ದಿನದ ವರೆಗೆ ಹೊನ್ನಾವರ ಸಯಾಯಕ ಪ್ರಾದೇಶಿಕ ಕಚೇರಿಯಲ್ಲಿ ಎ.ಆರ್.ಟಿ.ಓ. ಆಗಿ ಕೆಲಸ ಮಾಡುತ್ತಿದ್ದೇನೆ.

ನಾನು ಈ ದಿನ ನ್ಯಾಯಾಲಯಕ್ಕೆ ನನಗೆ ಸಾಕ್ಷಿ ನುಡಿಯಲು ಮತ್ತು ದಾಖಲೆ ಹಾಜರುಪಡಿಸಲು ನೋಟಿಸ್ ಬಂದಿರುವುದರಿಂದ ಬಂದಿರುತ್ತೇನೆ. ಈ ಪ್ರಕರಣದ ಸಂಬಂಧ ಆಟೋ ರಿಕ್ಷಾ ನಂ.ಕೆ.ಎ.47/A-4717 ರ 'ಬಿ' ಎಕ್ಸ್ಟ್ರಾಕ್ಟ್ ಹಾಜರುಪಿಪಡಿಸಿದ್ದು, ಅದನ್ನು ನಿ.ಆರ್-8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಆರ್-8(ಎ) ಎಂದು ಗುರುತಿಸಲಾಯಿತು. ಎಲ್ಲಾ ವಾಹನಗಳಿಗೆ ಮತ್ತು ಆಟೋ ರಿಕ್ಷಾಗಳಿಗೆ ನೋಂದಣಿ ಮಾಡುವುದು ಮತ್ತು ಪರ್ಮಿಟ್ ಕೊಡುವುದು ನಮ್ಮ ಕಚೇರಿಯ ಕಾರ್ಯವ್ಯಾಪ್ತಿಗೆ ಬರುತ್ತದೆ. ಆಟೋ ರಿಕ್ಷಾ ಕೆಎ.47/ಎ-4217 ನಮ್ಮ ಕಚೇರಿಯಲ್ಲಿ ದಿ.21-03-2023 ರಂದು ನೋಂದಾಯಿಸಲ್ಪಟ್ಟಿದೆ. ಸದರಿ ಆಟೋ ರಿಕ್ಷಾಗೆ ದಿ.30-08-2023 ರಿಂದ ದಿ. 29-09-2028 ಅವಧಿಯವರೆಗೆ ಪರ್ಮಿಟ್ ಕೊಡಲಾಗಿದೆ. ಸದರಿ ಆಟೋ ರಿಕ್ಷಾಗೆ ಮುರ್ಡೇಶ್ವರದ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಳಗೆ ಪರ್ಮಿಟ್ ನೀಡಲಾಗಿತ್ತು. ದಿ.21-03-2023 ರಂದು ಸದರಿ ಆಟೋ ರಿಕ್ಷಾಗೆ

ಪರ್ಮಿಟ್ ಇರಲಿಲ್ಲ. ಪರ್ಮಿಟ್ ಪಡೆಯದೇ ಆಟೋದಲ್ಲಿ ಪ್ರಯಾಣಿಕರನ್ನು ಆಟೋದಲ್ಲಿ ಪ್ರಯಾಣಿಸಿರುವುದು ಅಪರಾಧ ಆಗುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ– 1ನೇ ಎದ್ರುದಾರರ ಪರ ಶ್ರೀ ವಿ.ಎಫ್.ಜಿ ವಕೀಲರಿಂದಃ–**

ಹೊಸ ವಾಹನಕ್ಕೆ ನೊಂದ್ ಆಗುವವರೆಗೆ ಪರ್ಮಿಟ್ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ. ಆಪಾದಿತ ಆಟೋ ರಿಕ್ಷಾ ದಿ.21–03–2023 ರಂದು ನಮ್ಮ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟಿದೆ ಎಂದರೆ ಸರಿ. ಸದರಿ ಆಟೋ ರಿಕ್ಷಾಗೆ ದಿ.30–08–2023 ರಂದು ನಮ್ಮ ಕಚೇರಿಯಿಂದ ಪರ್ಮಿಟ್ ನೀಡಲಾಗಿದೆ ಎಂದರೆ ಸರಿ. ಅಪಘಾತವು ದಿ.21–03–2023 ರಂದು ಆಗಿದೆ ಎಂದರೆ ಸರಿ.

**ಪಾಟೀ ಸವಾಲುಃ– ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ–**

ಏನೂ ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 06-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಆರ್.ಎಸ್.ಕೆ. / ಶ್ರೀ ಎಂ.ಆರ್.ಎನ್. ವಕೀಲರಿಂದ.**

ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದುಶ್ರೀ ಎ.ಆರ್.ಎನ್. ವಕೀಲರು ಆರ್.ಎಸ್.ಕೆ. ವಕೀಲರ ಪರವಾಗಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 06-12-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಅದೇ ರೀತಿ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-9 ಎಂದು ಗುರುತಿಸಲಾಯಿತು. ಅದೇ ರೀತಿ 11 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 10 ರಿಂದ 20 ಎಂದು ಗುರುತಿಸಲಾಯಿತು. 5 ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ 21 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 3**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 05-12-2024**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಂ.ಜಿ. ವಕೀಲರಿಂದಃ-**

ನಾನು 7ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಾನು ಈ ದಿನದ ವರೆಗೆ ಸುಮಾರು 3-4 ಬಾರಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ. ಸದರಿ ಪ್ರಕರಣದ ಸಿ.ಸಿ.ನಂ.394/2019 ರಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ಸಾಕ್ಷಿ ಪ್ರಮಾಣ ಪತ್ರ ನೋಡುತ್ತಿದ್ದು, ಅದು ಸರಿಯಿರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ.ಆರ್.-3 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಿ.ಆರ್.-3 ರಲ್ಲಿ ನನ್ನ ಸಹಿ ಇರುತ್ತದೆ, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿರುವುದರಿಂದ ಅದನ್ನು ನಿ.ಆರ್.-3(ಎ) ಎಂದು ಗುರುತಿಸಲಾಯಿತು. **ಸದರಿ ನಿ.ಆರ್.-3 ರಲ್ಲಿ ನ್ಯಾಯಾಲಯದ ಮುಂದೆ ನನಗೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಮರುಹೇಳಿಕೆ ನೀಡಿಲ್ಲ, ಪಂಚನಾಮೆ ಮಾಡಿಲ್ಲ ಎಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.**

1ನೇ ಅರ್ಜಿದಾರರ ಪರಿಚಯ ನನಗೆ ತುಂಬಾ ವರ್ಷಗಳಿಂದ ಇರುತ್ತದೆ. 1ನೇ ಅರ್ಜಿದಾರರಿಗೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ಮುಖ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ 1ನೇ ಎದುರುದಾರನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಅರ್ಜಿದಾರರು ಈ ಅರ್ಜಿಯನ್ನು ವಿಮಾ ಪರಿಹಾರ ಪಡೆಯಲು ಹಾಕಿರುತ್ತಾರೆ. ಅರ್ಜಿದಾರರಿಗೆ ವಿಮೆ ಪರಿಹಾರ ಹಣ ಸಿಗಲಿ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸಿ.ಸಿ.ನಂ.394/2019 ರಲ್ಲಿ ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿರಲಿಲ್ಲ. ನಿ.ಆರ್.-3 ರಲ್ಲಿ ಹೇಳಿದ ಹೆಸರು ಮತ್ತು ಈ ಪ್ರಕರಣದಲ್ಲಿ ಹೇಳಿದ

ಹೆಸರು, ವಿಳಾಸ ನನ್ನದೇ ಇರುತ್ತದೆ ಎಂದರೆ ಸರಿ. ನಾನು ಸದರಿ ಮೇಲೆ ಹೇಳಿದ ಪ್ರಕರಣದಲ್ಲಿ ಯಾವತ್ತೂ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿರುವುದಿಲ್ಲ. ನಿ.ಆರ್.-3 ರಲ್ಲಿ ನನ್ನ ಸಹಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂಬಂಧ ನಾನು ಪೊಲೀಸರಿಗೆ ಪಿರ್ಯಾದಿ ಕೊಟ್ಟಿರುತ್ತೇನೆ. ಸದರಿ ಪಿರ್ಯಾದಿಯನ್ನು ಘಟನೆಯಾದ ದಿನ ರಾತ್ರಿಯ ಸಮಯದಲ್ಲಿ ನೀಡಿರುತ್ತೇನೆ.

ಘಟನೆಯಾದಾಗ ಮತ್ತು ಪಿರ್ಯಾದಿ ನೀಡಿದಾಗ ನನಗೆ 34 ವರ್ಷ ವಯಸ್ಸಾಗಿತ್ತು. ಘಟನೆಯು 2018 ರಲ್ಲಿ ಆಗಿರುತ್ತದೆ. ಈಗ ನನಗೆ 41 ವರ್ಷ ವಯಸ್ಸಾಗಿದೆ.

ಮೃತನ ಹೆಸರು ಗೋವಿಂದ ಎಂದು ಇತ್ತು, ಆತನನ್ನು ಗೊಯ್ದಾ ಎಂದು ಕರೆಯುತ್ತಿದ್ದರು. ಮೃತನ ಪರಿಚಯ ನನಗೆ ಸುಮಾರು 15 ವರ್ಷಗಳಿಂದ ಇತ್ತು. ನನ್ನ ಮನೆಯಿಂದ ಮೃತನ ಮನೆ ಅರ್ಧ ಕಿ.ಮೀ. ಅಂತರದಲ್ಲಿರುತ್ತದೆ. ನನಗೆ ಮೊದಲು ಮೃತನು ಪರಿಚಯವಾದಾಗ, 15 ವರ್ಷಗಳ ಹಿಂದೆ ಮೃತನು ಬೆಳ್ನಿಯಲ್ಲಿ ವಾಸಿಸುತ್ತಿದ್ದರು. ನಂತರ ಶಿರಾಲಿಯಲ್ಲಿ ವಾಸಿಸುತ್ತಿದ್ದರು. ಮೃತನ ಮದುವೆ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಮೃತನ ಹೆಂಡತಿಯ ಪರಿಚಯ ಇರುತ್ತದೆ, ಆದರೆ ಅವರ ಮಕ್ಕಳ ಪರಿಚಯ ಇರುವುದಿಲ್ಲ. ನಾನು ಅಪಘಾತವನ್ನು ನೋಡಿದ ತಕ್ಷಣ ಮೃತನ ಗ್ರಾಮದ ಶ್ರೀನಿವಾಸ ಮೊಗೇರ ಎನ್ನುವವರಿಗೆ ಫೋನು ಮಾಡಿ ವಿಚಾರ ತಿಳಿಸಿರುತ್ತೇನೆ. ಮೃತನನ್ನು ನಾನು ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಅವರ ಸಂಬಂಧಿಕರು ಕುಂದಾಪುರಕ್ಕೆ ಕರೆದುಕೊಂಡು ಹೋಗಿರುತ್ತಾರೆ.

1ನೇ ಅರ್ಜಿದಾರರು ತನ್ನ ಗಂಡ 2013 ರಲ್ಲಿ ಮನೆ ಬಿಟ್ಟು ಹೋಗಿದ್ದು, ಇನ್ನೂ ಮರಳಿ ಬಂದಿಲ್ಲ ಎಂದು ಹೇಳಿ ತಹಶೀಲ್ದಾರರವರಿಗೆ ಅರ್ಜಿ ನೀಡಿ, ತನ್ನ ಗಂಡನ ಹೆಸರನ್ನು ಪಡಿತರ ಚೀಟಿಯಿಂದ ತೆಗೆದು ಹಾಕಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಬೇರೆ ಯಾರೋ ಅಪರಿಚಿತ ವ್ಯಕ್ತಿ ಅಪಘಾತದಲ್ಲಿ ಮೃತಹೊಂದಿದ್ದು, ಆ ಅಪರಿಚಿತ ವ್ಯಕ್ತಿಯನ್ನು ಅರ್ಜಿದಾರರ ಗಂಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿ ಹೇಳಿದ ಎಲ್ಲಾ ವಿಷಯ ಸತ್ಯವಾಗಿದ್ದರೆ, ಸಿ.ಸಿ.ನಂ.394/2019 ರಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ

ದಾಖಲಿಸಿದ್ದರಿಂದ ಸಿ.ಸಿ.ನಂ.394/2019 ರಲ್ಲಿಯೂ ಸಹ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿ.ಆರ್.-3 ರನ್ನು ಸುಳ್ಳಾಗಿ ಸೃಷ್ಟಿಸಲಾಗಿದೆಯಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು, ನಾನು ನ್ಯಾಯಾಲಯಕ್ಕೆ ಯಾವತ್ತೂ ಹಾಜರಾಗಿ ಸಿ.ಸಿ.ನಂ.394/2019 ರಲ್ಲಿ ಸಾಕ್ಷಿ ನುಡಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ನಾನು ಹೇಳಿದ ವ್ಯಕ್ತಿ ಮತ್ತು 1ನೇ ಅರ್ಜಿದಾರರ ಗಂಡ ಎಂದು ಹೇಳಿದ ವ್ಯಕ್ತಿ ಅಪಘಾತದಲ್ಲಿ ಗಾಯಗೊಂಡು ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂದು ಅರ್ಜಿದಾರರ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು಼ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 30-11-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಜೆ.ಎನ್. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ಮತ್ತು 2 ಎಂದು, ಅಟೆಸ್ಟೆಡ್ ಮಾಡಿದ ನನ್ನ ಆಧಾರ ಪ್ರತಿ ಮತ್ತು ಎಸ್.ಎಸ್.ಎಲ್.ಸಿ. ಯ ಅಂಕಪಟ್ಟಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಸದರಿ ದಾಖಲೆಯ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದು, ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು. ಜನವರಿ 2023 ರ ವೇತನ ಪತ್ರ ಮತ್ತು ಎರಡು ಸೇವಾ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು. 27 ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-9 ರಿಂದ 35 ಎಂದು ಗುರುತಿಸಲಾಯಿತು. ಆರು ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ 36 ಎಂದು ಗುರುತಿಸಲಾಯಿತು. ಎರಡು ಎಕ್ಸರೇಗಳನ್ನು ಹಾಜರುಪಡಿಸಿದ್ದು, ಅವುಗಳನ್ನು 37 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*ಸಹಿ ಇದೆ.*

ಮೆಂಬರ್  ಎಡಿಶನಲ್ ಎಂ.ಎ.ಸಿ.ಟಿ. ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

ಪಿ.ಡಬ್ಲ್ಯುಃ 2

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 25-11-2024

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ-

ಅಪಘಾತವಾಗುವ ಪೂರ್ವದಲ್ಲಿ ನಾನು ವೆಲ್ಡಿಂಗ್ ಶಾಪಿನಲ್ಲಿದ್ದೆನು. ಅಪಘಾತವಾದ ಶಬ್ದ ನನಗೆ ಕೇಳಿಸಿತು, ಆಗ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತವಾದ ಸ್ಥಳದಿಂದ ವೆಲ್ಡಿಂಗ್ ಶಾಪ್ 10 ಮೀ. ದೂರದಲ್ಲಿರುತ್ತದೆ. ನನ್ನ ವೆಲ್ಡಿಂಗ್ ಶಾಪ್ ಅಪಘಾತವಾದ ಸ್ಥಳದ ಬಲ ಬದಿಗೆ ಇರುತ್ತದೆ. ನನ್ನ ವೆಲ್ಡಿಂಗ್ ಶಾಪ್ ಹತ್ತಿರ ನಿಂತರೆ ಅಪಘಾತವಾದ ಸ್ಥಳ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಅಪಘಾತವಾಗುವಾಗ ವೆಲ್ಡಿಂಗ್ ಶಾಪಿನಲ್ಲಿದ್ದೆ ಎಂದು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಅಪಘಾತವಾದಾಗ ವೆಲ್ಡಿಂಗ್ ಶಾಪಿನಲ್ಲಿದ್ದೆ ಎಂದು ನನ್ನ ವಕೀಲರು ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು, ನನ್ನ ಪ್ರಮಾಣ ಪತ್ರದಲ್ಲಿ ನಾನು ವೆಲ್ಡಿಂಗ್ ಶಾಪಿನಲ್ಲಿದ್ದೆ ಎಂದು ಬರೆದಿರುವುದಾಗಿ ನುಡಿಯುತ್ತಾರೆ. ಅಪಘಾತವಾದಾಗ ಸ್ಥಳದಲ್ಲಿ ಯಾರೂ ಇರಲಿಲ್ಲ ಎಂದರೆ ಸರಿ. ಅಪಘಾತದ ಸ್ಥಳದ ಪಂಚನಾಮೆಗೆ, ಪೊಲೀಸರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅದನ್ನು ಸ್ಥಳದಲ್ಲಿ ಲ್ಯಾಪ್-ಟಾಪಿನಲ್ಲಿ ತಯಾರಿಸಲಾಗಿದೆ. ಪಂಚನಾಮೆ ಕಾಲಕ್ಕೆ ಪೊಲೀಸರು ಅಪಘಾತವಾದ ಸ್ಥಳದ ನಕ್ಷೆ ತಯಾರಿಸಿರುತ್ತಾರೆ. ನಕ್ಷೆಯಲ್ಲಿ ಪೊಲೀಸರು ಅಪಘಾತವಾದ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ನಕ್ಷೆಯಲ್ಲಿ ಜನರೇಟರ್ ಯಾವ ಸ್ಥಳದಲ್ಲಿತ್ತು ಎಂದು ತೋರಿಸಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ಮೃತ ಹೊಂದಿದ ರಾಘವೇಂದ್ರ ಗೊಂಡ ರವರು ನನ್ನ ಗೆಳೆಯ ಎಂದರೆ ಸಾಕ್ಷಿ ಅವರು ನಮ್ಮ ಊರಿನವರು ಎಂದು ನುಡಿಯುತ್ತಾರೆ. ಮೃತನ ಮನೆಯಿಂದ ನನ್ನ ಮನೆ 2 ಕಿ.ಮೀ ಅಂತರದಲ್ಲಿರುತ್ತದೆ. ಪೊಲೀಸ್ ಠಾಣೆಗೆ ನಾನು ಘಟನೆಯಾದ ಮಾರನೇ ದಿನ ಹೋಗಿರುತ್ತೇನೆ. ಆಗ ಗಣಪತಿ ಗೊಂಡ ಎನ್ನುವವರು ಇದ್ದರು. ಅವರು ದೂರನ್ನು ಕೊಟ್ಟಿರುತ್ತಾರೆ. ಮೃತ ರಾಘವೇಂದ್ರ ಗೊಂಡ ರವರು ಮಧ್ಯಪಾನಿಯಾಗಿದ್ದರು ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿರುವುದಿಲ್ಲ, ಮೃತನು ನನ್ನ ಗೆಳೆಯನಾಗಿದ್ದರಿಂದ ಅವರ ಕುಟುಂಬಕ್ಕೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು

ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ತಯಾರಿಸಿದ ನಕ್ಷೆಯಲ್ಲಿ ನನ್ನ ಗ್ಯಾರೇಜ್ / ವೆಲ್ಡಿಂಗ್ ಶಾಪನ್ನು ತೋರಿಸಿರುತ್ತಾರೆ. ನನಗೆ ಅಪಘಾತವಾದ ಸ್ಥಳದ ಮತ್ತು ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–4 ನಕ್ಷೆಯಲ್ಲಿ ಧನವಂತರಿ ದೇವಸ್ಥಾನ ಮತ್ತು ನಾಗೇಶ ಹೆಬ್ಬಾರ್ ರವರ ಮನೆ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ–4 ನಕ್ಷೆಯಲ್ಲಿ ನನ್ನ ವೆಲ್ಡಿಂಗ್ ಶಾಪ್ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ನಕ್ಷೆಯನ್ನು ನೋಡಿ, ನನ್ನ ವೆಲ್ಡಿಂಗ್ ಶಾಪ್ ತೋರಿಸಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ನನ್ನ ವೆಲ್ಡಿಂಗ್ ಶಾಪ್ ಅಪಘಾತವಾದ ಸ್ಥಳದ ಹತ್ತಿರ ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ರಾ.ಹೆ. ಇರುತ್ತದೆ. ರಾ. ಹೆದ್ದಾರಿಯ ಅಂಚಿನ ಒಂದು ಅಡಿ ರಸ್ತೆ ಇರುತ್ತದೆ. ಮೃತ ರಾಘು ಗೊಂಡ ಕಪ್ಪು ಬಣ್ಣದ ಹೆಲ್ಮೆಟ್ ಹಾಕಿಕೊಂಡಿದ್ದರು. ಪೊಲೀಸರು ಪಂಚನಾಮೆ ಮಾಡುವಾಗ ಹೆಲ್ಮೆಟ್ ಸ್ಥಳದಲ್ಲಿತ್ತು. ಪಂಚನಾಮೆ ಮಾಡುವಾಗ ಹೆಲ್ಮೆಟ್ ವಾಹನದ ಹತ್ತಿರ ಇತ್ತು. ಪೊಲೀಸರು ಪಂಚನಾಮೆಯನ್ನು ಘಟನೆಯಾದ ಮಾರನೇ ದಿನ ಮಾಡಿರುತ್ತಾರೆ. ಮೃತನು ಹೆಲ್ಮೆಟ್ ಹಾಕಿಲ್ಲ ಎಂದರೆ ಸರಿಯಲ್ಲ, ಮೃತನು ತಾನೇ ನಿಶ್ಕಾಳಜಿತನದಿಂದ ಓಡಿಸಿಕೊಂಡು ಬಂದು, ಸ್ಕಿಡ್ ಆಗಿ ಬಿದ್ದು, ಗಾಯಗೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಮತ್ತು ಮೃತನ ಸಾವಿಗೂ, ಪ್ರಕರಣಕ್ಕೂ ಎದುರುದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/–*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 23–11–2024.**

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದಃ–**

ನಾವು ಸಾಧಿಸುವಂತೆ ಅಪಘಾತವು ದಿ.27–05–2019 ರಂದು ಆಗಿದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ದಿ.03–01–2023 ರಂದು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿ. ಅಪಘಾತವಾಯಿತು ಎಂದು ಹೇಳಿದ ದಿನದಂದು ನಾನು ಬೈಕಿನಲ್ಲಿ ಒಬ್ಬನೇ ಕಾಮತ್ ಕ್ಯಾಂಟೀನಿನಿಂದ ಮನೆಗೆ ಅಂದರೆ ಬೇಂಗ್ರೆಗೆ ಹೋಗುತ್ತಿದ್ದೆನು. ಆಪಾದಿತ ವಾಹನದ ಚಾಲಕನು ಸಣ್‌ಬಾವಿ ಯಿಂದ ಬೇಂಗ್ರೆ ಕಡೆಗೆ ಹೋಗುತ್ತಿದ್ದನು. ಅಪಘಾತವಾದ ಸ್ಥಳದಲ್ಲಿ 12 ಅಡಿ ಅಗಲ ಟಾರು ರಸ್ತೆ ಇರುತ್ತದೆ ಎಂದರೆ ಸರಿ. ಅಪಘಾತವು ಸದರಿ ಹೇಳಿದ ರಸ್ತೆಯ ಮಧ್ಯೆ ಆಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ರಸ್ತೆಯಲ್ಲಿ ಜಲ್ಲಿ ಮತ್ತು ಹೊಂಡಗಳು ಇದ್ದವು ಎಂದರೆ ಸರಿ. ಅಪಘಾತವಾದಾಗ ನನಗೆ ಸ್ವಲ್ಪ ಪ್ರಜ್ಞೆ ತಪ್ಪಿತ್ತು. ಆಸ್ಪತ್ರೆಗೆ ಹೋದಾಗ ನಾನು ಅಪಘಾತವಾದ ಬಗ್ಗೆ ವೈದ್ಯರಿಗೆ ತಿಳಿಸಿರುತ್ತೇನೆ. ನನ್ನನ್ನು ಮುರ್ಡೇಶ್ವರದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಖಾಸಗಿ ಆಸ್ಪತ್ರೆಯಿಂದ ಮುರ್ಡೇಶ್ವರ ಠಾಣೆ ಒಂದೂವರೆ ಕಿ.ಮೀ. ಅಂತರದಲ್ಲಿರುತ್ತದೆ. ವೈದ್ಯರಿಗೆ ನನಗೆ ಆದ ಗಾಯಗಳು ಅಪಘಾತದಲ್ಲಿ ಆಗಿರುವುದಾಗಿ ಹೇಳಿರುತ್ತೇನೆ. ವೈದ್ಯರು ಅದನ್ನು ಬರೆದುಕೊಂಡಿರುತ್ತಾರೆ. ಅದೇ ದಿನ ನನ್ನನ್ನು ಕುಂದಾಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿಯೂ ಸಹ ವೈದ್ಯರಿಗೆ ಅಪಘಾತದಲ್ಲಿ ಗಾಯಗೊಂಡಿರುವುದಾಗಿ ಹೇಳಿರುತ್ತೇನೆ. ಅಪಘಾತದ ಸಂಬಂಧ ದೂರನ್ನು ನನ್ನ ತಮ್ಮ ತಿಮ್ಮಪ್ಪ ಮಂಜಪ್ಪ ನಾಯ್ಕ ನೀಡಿರುತ್ತಾನೆ. ದೂರನ್ನು ದಿ.01–06–2019 ರಂದು ನೀಡಿರುತ್ತಾರೆ ಎಂದರೆ ಸರಿ.

ಆಸ್ಪತ್ರೆಯಲ್ಲಿ ನಾನು 19 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದು ಕೊಂಡಿರುತ್ತೇನೆ. ಆಸ್ಪತ್ರೆಯಲ್ಲಿದ್ದಾಗ ಬೌಧಿಕ ವ್ಯಾಯಾಮ ಮಾಡಲು ನನಗೆ ಹೇಳಿದ್ದರು. ಆದರೆ ನನಗೆ ವ್ಯಾಯಾಮ ಮಾಡಲು ಸಾಧ್ಯವಾಗಿರಲಿಲ್ಲ. ನನಗೆ ಅಳವಡಿಸಿರುವ ಒಳಸಾಧನವನ್ನು ಈಗ ತೆಗೆದಿರುತ್ತಾರೆ ಎಂದರೆ ಸರಿ. ಆಸ್ಪತ್ರೆಯಲ್ಲಿದ್ದಾಗ ನನ್ನೊಂದಿಗೆ ನನ್ನ ಹೆಂಡತಿ ಮತ್ತು ನನ್ನ ಗೆಳೆಯ ಧರ್ಮ ಎನ್ನುವವರು ಇದ್ದರು.

ಅಪಘಾತದ ಪೂರ್ವದಲ್ಲಿ ಮಂಗಳೂರಿನ ಶಾರದಾ ಅಂಬಿಕಾ ಬೋಟಿನಲ್ಲಿ ಕೆಲಸ ಕಲಾಸಿಯಾಗಿ ಮಾಡುತ್ತಿದ್ದೆನು. ನಾನು ಈಗ ಏನೂ ಕೆಲಸ ಮಾಡುವುದಿಲ್ಲ. ಬೋಟಿನಲ್ಲಿ ಕೆಲಸ ಮಾಡುವಾಗ ನಿಗದಿತವಾಗಿ ಆದಾಯ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು, ಅದು ಮೀನು ಸಿಕ್ಕರೆ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ನಾನು ವೈದ್ಯಕೀಯ ವೆಚ್ಚವಾಗಿ ರೂ.1,10,000/-, ಊಟ ತಿಂಡಿಗಾಗಿ ರೂ.20,000/- ವಾಹನ ಬಾಡಿಗೆಗಾಗಿ ರೂ.35,000/- ಖರ್ಚು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಕೆಲಸದಿಂದ ತಿಂಗಳಿಗೆ ರೂ.25,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವು 1ನೇ ಎದುರುದಾರನ ವಾಹನದ ಚಾಲಕನಿಂದ ಆಗಿರುವುದಿಲ್ಲ. ಬದಲಾಗಿ ನಾನು ಹಟ್ಟಾತ್ತಾಗಿ ಬಲಕ್ಕೆ ತಿರುಗಿಸಿರುವುದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದ ಎಂದರೆ ಸರಿಯಲ್ಲ, ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ಮಾಡಿದ ಕೆಲಸವನ್ನು ಈಗಲೂ ಸಹ ಸರಿಯಾಗಿ ಮಾಡುತ್ತಿದ್ದೇನೆ, ಆದ್ದರಿಂದ ನನ್ನ ಆದಾಯದಲ್ಲಿ ಯಾವುದೇ ಕುಂಠಿತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ 1ನೇ ಎದುರುದಾರನ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯು ಅವಧಿ ಮೀರಿದ ಅರ್ಜಿಯಾಗಿದ್ದರಿಂದ 2ನೇ ಎದುರುದಾರನು ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*ಸಹಿ ಇದೆ.*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 22-11-2024

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್.ವಕೀಲರಿಂದಃ-**

ನಾನು ಉಡುಪಿಯಿಂದ ಭಟ್ಕಳದ ಕಡೆಗೆ ಬೈಕಿನಲ್ಲಿ ಹೋಗಬೇಕಾದರೆ, ನಾನು ಎಂ.ವಿ.ಸಿ. ನಂ.109/2023 ರ ಅರ್ಜಿದಾರರಾದ ಚಲಾಯಿಸುತ್ತಿದ್ದ ವಾಹನದ ಹಿಂಬದಿ ಸವಾರನಾಗಿ ಹೋಗುತ್ತಿದ್ದೆ ಎಂದರೆ ಸರಿ. ಅಪಘಾತವು ಎಂ.ವಿ.ಸಿ. ನಂ.109/2023 ರ ಅರ್ಜಿದಾರನ ಅತೀ ವೇಗ ಮತ್ತು ನಿಶ್ಕಾಳಜಿತನದಿಂದ ಅಪಘಾತವಾಗಿದ ಎಂದರೆ ಸರಿಯಲ್ಲ. ನಾನು ಭಟ್ಕಳದ ಸರಕಾರಿ ಆಸ್ಪತ್ರೆ ಮತ್ತು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ, ಮತ್ತು ರೂ.30,000/- ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಭವಿಷ್ಯದಲ್ಲಿ ರೂ.15,000/- ವೈದ್ಯಕೀಯ ಚಿಕಿತ್ಸೆಗೆ ಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ಮೀನುಗಾರಿಕೆಯಿಂದ ರೂ.30,000/- ಆದಾಯ ಗಳಿಸುತಿರಲಿಲ್ಲ ಮತ್ತು ಅಪಘಾತದಿಂದ ನನಗೆ ಆದಾಯದಲ್ಲಿ ಯಾವುದೇ ಕುಂಠಿತವಾಗಿಲ್ಲ ಎಂದರೆ ಸರಿಯಲ್ಲ.

**ಈ.ಎಸ್.ಐ. ವಿಮಾ ಸಂಸ್ಥೆಯಿಂದ ನಾನು ರೂ. 30,000/- ಪರಿಹಾರ ಪಡೆದುಕೊಂಡಿರುತ್ತೇನೆ.** ನಾನು ಈಗಾಗಲೇ ಈ.ಎಸ್.ಐ. ವಿಮಾ ಸಂಸ್ಥೆಯಿಂದ ಪರಿಹಾರ ಪಡೆದಿರುವುದರಿಂದ ಈ ಪ್ರಕರಣದಲ್ಲಿ ಹೇಳಿದಂತೆ ಯಾವುದೇ ಪರಿಹಾರ ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತ ಬಸ್ಸಿನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಪರಿಹಾರ ಪಡೆಯಲು ಅರ್ಹತೆ ಇಲ್ಲದೇ ದ್ದರೂ ಸಹ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ದಿನ ನಾನು ಹೋಗುತ್ತಿದ್ದ ವಾಹನದ ಚಾಲಕ ವಾಹನವನ್ನು ವೇಗವಾಗಿ ಮತ್ತು ನಿಶ್ಕಾಳಜಿತನದಿಂದ ಚಲಾಯಿಸಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆಪಾದಿತ ಬಸ್ಸಿನ ಚಾಲಕ ಸದರಿ ದಿನ ನಾನು ಹೇಳಿದಂತೆ ವೇಗವಾಗಿ ನಿಶ್ಕಾಳಜಿತನದಿಂದ ವಾಹನವನ್ನು ಓಡಿಸುತ್ತಿರಲಿಲ್ಲ, ನಿಧಾನವಾಗಿ ಓಡಿಸುತ್ತಿದ್ದ ಎಂದರೆ ಸರಿಯಲ್ಲ. ಆತನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 22-11-2024**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್.ವಕೀಲರಿಂದಃ-**

ನಾನು ಉಡುಪಿಯಿಂದ ಭಟ್ಕಳದ ಕಡೆಗೆ ವಾಹನದಲ್ಲಿ ಬೈಕಿನಲ್ಲಿ ಹೋಗಬೇಕಾದರೆ, ನನ್ನ ವಾಹನದ ಹಿಂಬದಿ ಸವಾರನಾಗಿ ಎಂ.ವಿ.ಸಿ. ನಂ.152/2023 ರ ಅರ್ಜಿದಾರರಾದ ಕೇಶವ ಮಂಗಲ ಗೊಂಡ ರವರು ಸವಾರಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ದಿನ ನಾನು ನನ್ನ ವಾಹನವನ್ನು ವೇಗವಾಗಿ ಮತ್ತು ನಿಶ್ಕಾಳಜಿತನದಿಂದ ಚಲಾಯಿಸಿದ್ದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆಪಾದಿತ ಬಸ್ಸಿನ ಚಾಲಕ ಸದರಿ ದಿನ ನಾನು ಹೇಳಿದಂತೆ ವೇಗವಾಗಿ ನಿಶ್ಕಾಳಜಿತನದಿಂದ ವಾಹನವನ್ನು ಓಡಿಸುತ್ತಿರಲಿಲ್ಲ, ನಿಧಾನವಾಗಿ ಓಡಿಸುತ್ತಿದ್ದ ಎಂದರೆ ಸರಿಯಲ್ಲ. ಆತನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಭಟ್ಕಳದ ಸರಕಾರಿ ಆಸ್ಪತ್ರೆ ಮತ್ತು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ, ಮತ್ತು ರೂ.50,000/- ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಭವಿಷ್ಯದಲ್ಲಿ ರೂ.25,000/- ವೈದ್ಯಕೀಯ ಚಿಕಿತ್ಸೆಗೆ ಬೇಕಾಗುತ್ತದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ಮೀನುಗಾರಿಕೆಯಿಂದ ರೂ.30,000/- ಆದಾಯ ಗಳಿಸುತಿರಲಿಲ್ಲ ಮತ್ತು ಅಪಘಾತದಿಂದ ನನಗೆ ಆದಾಯದಲ್ಲಿ ಯಾವುದೇ ಕುಂಠಿತವಾಗಿಲ್ಲ ಎಂದರೆ ಸರಿಯಲ್ಲ.

**ಈ.ಎಸ್.ಐ. ವಿಮಾ ಸಂಸ್ಥೆಯಿಂದ ನಾನು ರೂ. 10,000/- ಪರಿಹಾರ ಪಡೆದುಕೊಂಡಿರುತ್ತೇನೆ.** ನಾನು ಈಗಾಗಲೇ ಈ.ಎಸ್.ಐ. ವಿಮಾ ಸಂಸ್ಥೆಯಿಂದ ಪರಿಹಾರ ಪಡೆದಿರುವುದರಿಂದ ಈ ಪ್ರಕರಣದಲ್ಲಿ ಹೇಳಿದಂತೆ ಯಾವುದೇ ಪರಿಹಾರ ಪಡೆಯಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತ ಬಸ್ಸಿನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಪರಿಹಾರ ಪಡೆಯಲು ಅರ್ಹತೆ ಇಲ್ಲದೇ ದ್ದರೂ ಸಹ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

***Sd/-***

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು಼ 3**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 20-11-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರರ ಪರ ಸಾಕ್ಷಿ ನುಡಿಯುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ದೂರು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಮತ್ತು 2ನೇ ಎದುರುದಾರರ ಪರ ಶ್ರೀ ಎಂ.ಜಿ. / ಶ್ರೀ ಆರ್.ಐ.ಎನ್. ವಕೀಲರಿಂದಃ-**

1 ಮತ್ತು 2ನೇ ಎದ್ರುದಾರರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 20-11-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರರ ಪರ ಸಾಕ್ಷಿ ನುಡಿಯುತ್ತಿದ್ದೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಂ.ಜಿ. ವಕೀಲರಿಂದಃ-**

ಮೃತನು ನನಗೆ ಭಾವನಾಗಬೇಕು. ಮೃತನು ಅಪಘಾತದಲ್ಲಿ ಮೃತಹೊಂದಿರುವ ವಿಚಾರವನ್ನು ನನಗೆ ಫೋನು ಮಾಡಿ ತಿಳಿಸಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ದಾಖಲಿಸಿರುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರನ ತಪ್ಪಿನಿಂದ ಆಗಿರುವುದಿಲ್ಲ, ಬದಲಾಗಿ ಮೃತನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. 1ನೇ ಎದುರುದಾರನ ಮೇಲೆ ದಾಖಲಿಸಿದ ಕ್ರಿಮಿನಲ್ ಪ್ರಕರಣ ಖುಲಾಸೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ಸಲ್ಲಿಸಿದ ಸುಳ್ಳು ಅರ್ಜಿಗೆ ಅವರಿಗೆ ಪರಿಹಾರ ಕೊಡಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ 1ನೇ ಎದುರುದಾರನು ಅರ್ಜಿದಾರರಿಗೆ ಪರಿಹಾರ ಕೊಡಲು ಭಾದ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಮೃತನನ್ನು ಕೊನೆಯ ಬಾರಿಗೆ ನಾನು ಯಾವಾಗ ಭೇಟಿಯಾಗಿ ಆತನನ್ನು ನೋಡಿದ್ದೆನು ಎಂದು ನೆನಪಿರುವುದಿಲ್ಲ. ಮೃತನಿಗೆ ಗೊಯ್ದು ಮತ್ತು ಗೋವಿಂದ ಎಂದು

ಎರಡು ಹೆಸರಿನಿಂದ ಕರೆಯಲಾಗಿತ್ತು. ನಾನು ಗೋವಿಂದ ಭಾವ ಎಂದು ಕರೆಯುತ್ತಿದ್ದೆನು. ಮೃತಪಟ್ಟ ವ್ಯಕ್ತಿಯ ಹೆಸರು ಗೋವಿಂದ ಮಂಜಪ್ಪ ಮೊಗೇರ ಎಂದು ಇರುತ್ತದೆ. ಮೃತನ ಪಿ.ಎಂ. ವರದಿ, ಅಪಘಾತದ ಸಮಯದಲ್ಲಿ ನೀಡಿದ ವರದಿ ಮತ್ತು ಮರಣ ಪ್ರಮಾಣ ಪತ್ರದಲ್ಲಿ ಆತನ ಹೆಸರು ಗೋವಿಂದ ಮಂಜಪ್ಪ ಮೊಗೇರ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ.

ಮೃತನಿಗೆ ನನ್ನ ತಂಗಿಯನ್ನು 1990 ರಲ್ಲಿ ವಿವಾಹ ಮಾಡಿಕೊಟ್ಟಿರುತ್ತೇನೆ. ಈಗ ಅವರ ಮದುವೆಯಾಗಿ 34 ವರ್ಷವಾಗಿರುತ್ತದೆ. ಮದುವೆಯಾದಾಗ ನನ್ನ ತಂಗಿಯ ವಯಸ್ಸು 24 ವರ್ಷವಾಗಿತ್ತು. 24 ವರ್ಷ ಮತ್ತು 34 ವರ್ಷ ಕೂಡಿಸಿದರೆ ಈಗ ಅರ್ಜಿದಾರರಿಗೆ 58 ವರ್ಷ ವಯಸ್ಸಾಗುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂಗಿ ಮೃತನನ್ನು ತೊರೆದು ನಮ್ಮ ಮನೆಯ ಹತ್ತಿರ ವಾಸಿಸುತ್ತಿದ್ದಳು. ಆದ್ದರಿಂದ ಅವಳ ಕುಟುಂಬದ ಎಲ್ಲಾ ವಿಚಾರ ನನಗೆ ಗೊತ್ತಿರುತ್ತದೆ. 2ನೇ ಅರ್ಜಿದಾರರಿಗೆ ಈಗ 27 ವರ್ಷ ವಯಸ್ಸಾಗಿರುತ್ತದೆ. ನನ್ನ ತಂಗಿಗೆ ಮೃತನಿಗೆ ತಾರಾ ಎನ್ನುವ ಹೆಣ್ಣು ಮಗಳು ಇರುತ್ತಾರೆ ಎಂದರೆ ಸರಿ. ಅವಳಿಗೆ ಈಗ 24 ವರ್ಷ ವಯಸ್ಸಾಗಿದೆ. ಈ ಪ್ರಕರಣ ದಾಖಲಿಸುವಾಗ ಸದರಿ ತಾರಾ ಎನ್ನುವವಳ ವಿವಾಹವಾಗಿರಲಿಲ್ಲ.

ದಿಃ 22-08-2015 ರಂದು 1ನೇ ಅರ್ಜಿದಾರರು ತನ್ನ ಗಂಡ 2 ವರ್ಷಗಳಿಂದ ನಾಪತ್ತೆಯಾಗಿದ್ದು, ಆದ್ದರಿಂದ ನನ್ನ ಗಂಡನ ಹೆಸರನ್ನು ಪಡಿತರ ಚೀಟಿಯಿಂದ ಕಡಿತ ಮಾಡಲು ತಹಶೀಲ್ದಾರವರಿಗೆ ಪ್ರಮಾಣ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ಪಡಿತರ ಚೀಟಿಯಲ್ಲಿ 1 ಮತ್ತು 2ನೇ ಅರ್ಜಿದಾರು ಮತ್ತು ಅವರ ಮಗಳಾದ ತಾರಾ ಇವರ ಹೆಸರು ಮಾತ್ರ ದಾಖಲಿಸಬೇಕು ಎಂದು ಕೋರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂಗಿಯ ಮನೆಯ ಪಡಿತರ ಚೀಟಿಯನ್ನು ಸುಮಾರು 15 ವರ್ಷಗಳ ಹಿಂದೆ ನಾನು ನೋಡಿರುತ್ತೇನೆ. ಆಗ ಪಡಿತರ ಚೀಟಿಯಲ್ಲಿ 4 ಜನರ ಹೆಸರು ಇದ್ದವು. ಸನ್ 2015 ರಲ್ಲಿ ತಹಶೀಲ್ದಾರರವರು ನೀಡಿದ ಪಡಿತರ ಚೀಟಿಯಲ್ಲಿ ಮೂವರ ಹೆಸರು ಮಾತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಡಿತರ ಚೀಟಿಯ ಸಂಖ್ಯೆ BTK14114546 ಎಂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಡಿತರ ಚೀಟಿಯಲ್ಲಿ ಸನ್ 2015 ರಲ್ಲಿ ನನ್ನ ಭಾವ ನಾಪತ್ತೆಯಾಗಿದ್ದಾನೆ ಅಥವಾ ಮೃತನಾಗಿದ್ದಾನೆ

ಎಂದು ಕಡಿತ ಮಾಡಲಾಗಿದೆ ಎಂದರೆ ಸರಿಯಲ್ಲ. ಬೇರೆ ಯಾವುದೋ ಮೃತ ದೇಹವನ್ನು ತನ್ನ ಭಾವ ಎಂದು ಭಾವಿಸಿ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣದ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. 2013 ರಲ್ಲಿ ಮೃತಪಟ್ಟ ಗೋಯ್ದು ಮಂಜಪ್ಪ ಮೊಗೇರ ಇವರಿಗೆ ಸೇರಿದ ಚುನಾವಣೆ ಪತ್ರ, ಪಡಿತರ ಚೀಟಿ ಮತ್ತು ಆಧಾರ ಕಾರ್ಡು, ಇವುಗಳನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ಚುನಾವಣೆ ಪತ್ರ ಮಾತ್ರ ನೋಡಿದ್ದೇನೆ ಎಂದು ನುಡಿಯುತ್ತಾರೆ ಮೃತನಿಗೆ ಯ ಾವುದೇ ಚಿರ ಮತ್ತು ಸ್ಥಿರ ಆಸ್ತಿ ಇರುವುದಿಲ್ಲ. ಮೃತನು ಎಲ್ಲಾ ಚುನಾವಣೆಯಲ್ಲಿ ಮತ ಚಲಾಯಿಸಿರುತ್ತಾರೆ. ಆ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ವ್ಯಕ್ತಿ ಸನ್ 2013 ರಲ್ಲಿ ನಾಪತ್ತೆ ಅಥವಾ ಮೃತಪಟ್ಟಿರುತ್ತಾರೆ, ಹಾಗಾಗಿ ಅವರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸಾಧಿಸುತ್ತಿರುವ ಮೃತ ಭಾವ ಮತ್ತು ದಾಖಲೆಯಲ್ಲಿ ಹೇಳಿದ ವ್ಯಕ್ತಿ ಬೇರೆ ಬೇರೆಯಾಗಿರುತ್ತಾರೆ, ಆದರೂ ಸಹ ಪರಿಹಾರ ಪಡೆಯಲು ನಮ್ಮ ಭಾವ ಮೃತನಾಗಿದ್ದಾನೆ ಎಂದು ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಮೀನುಗಾರಿಕೆಯಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ಕೊಡುತ್ತಾರೆ ಎಂದರೆ ಸಾಕ್ಷಿ ಮೃತನು ಆಗ ಗುರುತಿನ ಚೀಟಿಯನ್ನು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಮೃತನು ಮೀನುಗಾರಿಕೆ ಸೊಸೈಟಿಯಲ್ಲಿ ಸದಸ್ಯತ್ವ ಪಡೆದುಕೊಂಡಿರುವುದಿಲ್ಲ. ಮೀನುಗಾರಿಕೆ ಕೆಲಸ ಮಾಡುವ ಕಾರ್ಮಿಕರಿಗೆ ಸಮುದ್ರದಲ್ಲಿ ಮೀನುಗಾರಿಕೆ ಮಾಡಲುವಾಗ ಮೃತಪಟ್ಟರೆ ಅವರ ಕುಟುಂಬಕ್ಕೆ ಮೀನುಗಾರಿಕೆ ಇಲಾಖೆಯಿಂದ ರೂ.5,00,000/- ನಗದು ಪರಿಹಾರ ಸಿಗುತ್ತದೆ ಎಂದರೆ ಸರಿ. 1ನೇ ಅರ್ಜಿದಾರರು ಲಕ್ಷ್ಮೀ ಸರಸ್ವತಿ ಕೋ-ಅಪರೇಟಿವ್ ಸೊಸೈಟಿಯಿಂದ ನಾಲ್ಕು ವರ್ಷಗಳ ಹಿಂದೆ ಸಾಲ ಪಡೆದಿರುತ್ತಾರೆ. ಮೃತಪಟ್ಟ ವ್ಯಕ್ತಿಯು ಸದರಿ ಮೇಲೆ ಹೇಳಿದ ಸೊಸೈಟಿಯಲ್ಲಿ ಶೇರುಗಾರರಿದ್ದರು. ಮೃತನು ತನಗೆ ಸಾಲದ ಅಗತ್ಯವಿಲ್ಲವೆಂದು ಸಾಲ ಪಡೆದಿರುವುದಿಲ್ಲ. ನಾವು ಹೇಳಿದ ವ್ಯಕ್ತಿ ಜೀವಿತವಿರುವುದಿಲ್ಲ. ಆದ್ದರಿಂದ ಶೇರು ಮತ್ತು ಸಾಲ ಪಡೆಯುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿದ ಎಲ್ಲಾ ವಿಚಾರಗಳೂ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಎಂ.ವಿ.ಸಿಃ 470/2023**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 20–11–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆ.ಎಂ.ಎಂ. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.779/2023 ಇದರ ಆದೇಶದ ಪ್ರತಿಯನ್ನು ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ರಿಂದ ನಿಪಿ–8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/–*

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 16-11-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಮರುಹೇಳಿಕೆ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸ್ವಯಂ ದೃಢೀಕರಿಸಿದ ಒಂದು ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಅದೇ ರೀತಿ, ಒಂದು ಎಂ.ಎಲ್.ಸಿ. ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-11 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-12 ಎಂದು ಗುರುತಿಸಲಾಯಿತು. 35 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 13 ರಿಂದ 47 ಎಂದು ಗುರುತಿಸಲಾಯಿತು. 19 ವೈದ್ಯಕೀಯ ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-48 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**<u>ಪಾಟೀ ಸವಾಲುಃ</u> ಎದುರುದಾರರ ಪರಃ**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು, ಪ್ರಕರಣವನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 15-11-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರರ ಪರ ಸಾಕ್ಷಿ ನುಡಿಯುತ್ತಿದ್ದೇನೆ. ಅರ್ಜಿದಾರರಿಗೆ ನಾನು ನೀಡಿದ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-47 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಿಪಿ-47 ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವಾಗ ಅರ್ಜಿದಾರನಿಗೆ ಹಾಕಿದ ಇಂಪ್ಲಾಂಟ್ ತೆಗೆದಿರಲಿಲ್ಲ. ಒಳಸಾಧನ ತೆಗೆದರೆ, ಅಂಗನ್ಯೂನ್ಯತೆ ಕಡಿಮೆಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಅರ್ಜಿದಾರನಿಗೆ ಮಾಡಿದ ಶಸ್ತ್ರಚಿಕಿತ್ಸೆಯಿಂದ ಮೂಳೆಗಳು ಸರಿಯಾಗಿ ಕೂಡಿರುತ್ತದೆ ಎಂದರೆ ಸರಿ. ಈಗ ಒಂದೂವರೆ ತಿಂಗಳ ಹಿಂದೆ ಅರ್ಜಿದಾರನಿಗೆ ಹಾಕಿದ ಇಂಪ್ಲಾಂಟನ್ನು ತೆಗೆಯಲಾಗಿದೆ. ಅರ್ಜಿದಾರರಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವಾಗ ವೈದ್ಯಕೀಯ ಪರೀಕ್ಷೆಗೊಳಪಡಿಸಿ ನೀಡಿರುತ್ತೇನೆ. ಪ್ರಮಾಣ ಪತ್ರ ಕೊಡುವ ಪೂರ್ವದಲ್ಲಿ ಎಕ್ಸರೇಗೊಳಪಡಿಸಿರುತ್ತೇನೆ. ಆದರೆ ಎಕ್ಸರೇಯನ್ನು ಪ್ರಮಾಣ ಪತ್ರದೊಂದಿಗೆ ಹಾಜರುಪಡಿಸಿರುವುದಿಲ್ಲ. ಪ್ರಮಾಣ ಪತ್ರದೊಂದಿಗೆ ರೇಡಿಯೋಲಜಿ ವರದಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ರೇಡಿಯಾಲಜಿ ವರದಿಯನ್ನು ಹಾಜರುಪಡಿಸಿದರೆ, ಅರ್ಜಿದಾರನಿಗೆ ಅಂಗನ್ಯೂನ್ಯತೆ ಇಲ್ಲದಿರುವುದು ಕಂಡುಬರುತ್ತದೆ ಎಂದು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-47 ನ್ನು ಕೊಡುವಾಗ ಯಾವ ನಿಯಮಾವಳಿಗಳನ್ನು ಪಾಲಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ನಾನು ನನ್ನ ಹಿರಿಯ ವೈದ್ಯರನ್ನು ಕೇಳಿ ನೀಡಿದ್ದಾಗಿ ನುಡಿಯುತ್ತಾರೆ. ನಾನು ಭಾರತ ಸರಕಾರ ನಿಯಮಾವಳಿಗಳ ಪ್ರಕಾರ ಲೆಕ್ಕ ಹಾಕಿದರೆ, ನಿಪಿ-47 ರಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ

ಆಗುವುದಿಲ್ಲ, ಅದು ಕಡಿಮೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ನಾನು ಹೇಳಿದಷ್ಟು ಅಂಗನ್ಯೂನ್ಯತೆ ಆಗಿರುವುದಿಲ್ಲ. ಅರ್ಜಿದಾರನು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕಾರಣ, ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–22 ಔಷಧಿ ವೆಚ್ಚ ರಶೀದಿ ಕ್ರೆಡಿಟ್ ಮೆಮೋ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಔಷಧಿ ವೆಚ್ಚ ತೆಗೆದುಕೊಳ್ಳುವುದು ನಮ್ಮ ಆಸ್ಪತ್ರೆಯ ಮೆಡಿಕಲ್ ನವರ ಕೆಲಸವಾಗಿರುತ್ತದೆ. ಅದು ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರಿದು, ನಿಪಿ–22 ರಲ್ಲಿ ಪೈಡ್ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಅರ್ಜಿದಾರನನ್ನು ನೇರವಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿದೆ. ಎಂ.ಎಲ್.ಸಿ.ಯನ್ನು ದಾಖಲಿಸಿಕೊಂಡಿರುತ್ತೇವೆ. ಎಂ.ಎಲ್.ಸಿ.ಯನ್ನು ಪೊಲೀಸರಿಗೆ ಯಾವಾಗ ತಿಳಿಸಲಾಗಿದೆ ಎಂದು ನನಗೆ ನೆನಪಿಲ್ಲ. ಅದು ನಮ್ಮ ಆಸ್ಪತ್ರೆಯ ಕಚೇರಿಯಲ್ಲಿರುತ್ತದೆ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ. ಆದರೂ ಸಹ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕಾರಣ, ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**
**ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಸಿ**
**ಪ್ರಮಾಣಿಕರಿಸಲಾಯಿತು.**
**ದಿನಾಂಕಃ 15–11–2024.**

**ಮುಂದುವರಿದ ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಿಪಿ–12 ರ ವೈದ್ಯಕೀಯ ವೆಚ್ಚದಲ್ಲಿ ಶೇ.10 ರಷ್ಟು ವಿನಾಯಿತಿ ಮಾಡಿರುತ್ತಾರೆ ಎಂದರೆ ಸರಿ. ಅದು, **ಶೇ.10ರಷ್ಟು ವಿನಾಯಿತಿ ಮಾಡಿದರೆ ಅದು ರೂ.1,98,963/– ಆಗುತ್ತದೆ ಎಂದರೆ ಸರಿ.** ಅದೇ ರೀತಿ ನಿಪಿ–18 ರಲ್ಲಿಯೂ ಸಹ ವೈದ್ಯಕೀಯ ವೆಚ್ಚದಲ್ಲಿ ಶೇ. 10 ರಷ್ಟು ವಿನಾಯಿತಿ ಮಾಡಿದ್ದಾರೆ ಎಂದರೆ ಸರಿ. **ಶೇ.10 ರಷ್ಟು ವಿನಾಯಿತಿ ಮಾಡಿದರೆ ಅದು ರೂ.1,08,000/– ಆಗುತ್ತದೆ ಎಂದರೆ ಸರಿ.** ನಿಪಿ–19, 37, 93 ರಿಂದ 98 ರಲ್ಲಿ ತೋರಿಸಿದ ವೈದ್ಯಕೀಯ ವೆಚ್ಚವು ನಾವು ಬೇರೆ ಸಂಸ್ಥೆಯಿಂದ ಕ್ಲೈಮ್ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ–34 ಅದು ವೈದ್ಯಕೀಯ ವೆಚ್ಚವಿರುವುದಿಲ್ಲ, ಅದು ಲ್ಯಾಬ್ ಸ್ಟೇಟ್‌ಮೆಂಟ್ ಎಂದರೆ ಸರಿಯಲ್ಲ. ಅಪಘಾತವು 1ನೇ ಎದುರುದಾರನ ವಾಹನದ ಚಾಲಕನಿಂದ ಆಗಿರುವುದಿಲ್ಲ, ಬದಲಾಗಿ ನನ್ನ ಮಗನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗ ವಾಹನ ಚಲಾಯಿಸುವಾಗ ಹಿಂದೆ ಮುಂದೆ ನೋಡದೇ ಅಚಾನಕ್ಕಾಗಿ ತಿರುವು ಪಡೆದಿದ್ದರಿಂದ ಅಪಘಾತವಾಗಿದ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನದ ಚಾಲಕ ನಿಧಾನವಾಗಿ ತನ್ನ ಸರಿಯಾದ ಪಥದಲ್ಲಿ ಹೋಗುತ್ತಿದ್ದ ಎಂದರೆ ಸರಿಯಲ್ಲ, ಅದೂ ಅಲ್ಲದೇ 1ನೇ ಎದುರುದಾರನ ವಾಹನದ ಚಾಲಕನಿಗೆ ಡಿ.ಎಲ್ ಇರಲಿಲ್ಲ ಮತ್ತು ವಾಹನಕ್ಕೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 15-11-2024

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ, ಹೆಚ್ಚುವರಿ ದೋಷಾರೋಪಣಾ ಪತ್ರ ಹಾಜರುಪಡಿಸಿದರುತ್ತೇನೆ. ಅದನ್ನು ನಿಪಿ-108 ಎಂದು ಗುರುತಿಸಲಾಯಿತು. ಒಂದು ಪಿ.ಎಂ. ವರದಿ, ಶವಪಂಚನಾಮೆ ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-109 ಮತ್ತು 110 ಎಂದು ಗುರುತಿಸಲಾಯಿತು. ಅದೇ ರೀತಿ 4 ಫೋಟೋಗಳನ್ನು ಮತ್ತು ಒಂದು ಸಿ.ಡಿ.ಯನ್ನು ಹಾಜರುಪಡಿಸಿದ್ದು, ಫೋಟೊಗಳನ್ನು ಒಟ್ಟಾಗಿ ನಿಪಿ-111 ಎಂದು, ಮತ್ತು ಸಿ.ಡಿಯನ್ನು ನಿಪಿ-112 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ಅಪಘಾತವಾಗಿರುವುದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆದ್ದರಿಂದ ಅಪಘಾತ ಹೇಗೆ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಮೃತ ನನ್ನ ಮಗ ಸದರಿ ದಿನ ಆತನ ಗೆಳೆಯನ ಬೈಕನ್ನು ಚಲಾಯಿಸಿಕೊಂಡು ಹೋಗುತ್ತಿದ್ದನು. ಮೃತ ನನ್ನ ಮಗನಿಗೆ ವಾಹನ ಚಲಾಯಿಸುವ





ಪರವಾನಿಗೆ ಪತ್ರ ಮತ್ತು ಸದರಿ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ನಾನು ನೀಡಿಲ್ಲ. ಆದರೆ, ಪಿರ್ಯಾದಿಯನ್ನು ನನ್ನ ದೊಡ್ಡ ಮಗ ಮೊಹಮ್ಮದ್ ಅಖಿಲ್ ನೀಡಿರುತ್ತಾನೆ. ಅಪಘಾತವಾದ ತಕ್ಷಣ ಮೃತ ನನ್ನ ಮಗನನ್ನು ಆರ್.ಎನ್.ಎಸ್. ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಅರ್ಧ ಗಂಟೆ ಚಿಕಿತ್ಸೆ ಪಡೆದುಕೊಂಡು ನಂತರ ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ನನ್ನ ಮೃತ ಮಗ 10ನೇ ತರಗತಿಯವರೆಗೆ ಓದಿದ್ದನು. ಮೃತನ ವಯಸ್ಸು ತೋರಿಸಲು ಆತನ ಶಾಲಾ ದಾಖಲೆಗಳನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಅಪಘಾತದ ಸಮಯದಲ್ಲಿ ಮೃತನಿಗೆ 30 ವರ್ಷಕ್ಕಿಂತ ಹೆಚ್ಚಾಗಿತ್ತು. ಆದ್ದರಿಂದ ಆತನ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿಲ್ಲ

ಎಂದರೆ ಸರಿಯಲ್ಲ. ನನ್ನ ಮಗ ಅನ್ಬಾಲ್ ಸೂಪರ್ ಮಾರ್ಕೇಟ್ ನಲ್ಲಿ ಕೆಲಸ ಮಾಡುತ್ತಿದ್ದು, ಆತನು ತಿಂಗಳಿಗೆ ರೂ.16,000/- ವೇತನ ಪಡೆಯುತ್ತಿದ್ದ ಎಂದು ನಿಪಿ-9 ರಂತೆ ಸುಳ್ಳು ದಾಖಲೆ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮೃತನನ್ನು ಒಳಗೊಂಡು ನನಗೆ ಒಟ್ಟು 6 ಜನರು ಮಕ್ಕಳು. ನನ್ನ ಈಗ 3 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಅವರು ಆಟೋ ಚಾಲಕರಾಗಿದ್ದರು. ನನ್ನ ಈಗಲೂ ಜೀವಿತವಿರುತ್ತಾರೆ, ಅದಕ್ಕಾಗಿ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಐವರು ಮಕ್ಕಳಲ್ಲಿ ಒಬ್ಬನು ಹನ್ನೆರಡನೇ ತರಗತಿಯಲ್ಲಿ ಮತ್ತು ಇನ್ನೊಬ್ಬ ಶಾಲೆ ಬಿಟ್ಟು ಮನೆಯಲ್ಲಿ ಖಾಲಿ ಇರುತ್ತಾನೆ. ಉಳಿದ ಮೂವರು ಮಕ್ಕಳು ಕೋರಿಯರ್ ಅಂಗಡಿ, ಬಟ್ಟೆಯಂಗಡಿಯಲ್ಲಿ ಕೆಲಸ ಮಾಡುತ್ತಾರೆ. ನಾನು ಯಾವುದೇ ಕೆಲಸ ಮಾಡುವುದಿಲ್ಲ. ನಾನು ಮತ್ತು ಐವರು ಮಕ್ಕಳು ಎಲ್ಲರೂ ಕೆಲಸ ಮಾಡುತ್ತೇವೆ. ನಮಗೆ ಸಾಕಾಗುವಷ್ಟು ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನಾನಾಗಲೀ, ನನ್ನ ಮಕ್ಕಳಾಗಲೀ ಮೃತನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಮೃತನು ತಾನು ಗಳಿಸಿದ ಹಣ ಆತನಿಗೇ ಸಾಕಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಆತನು ನಮಗೆ ಹಣ ಸಹಾಯ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಮೃತನು ನಮಗೆ ಹಣ ನೀಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನು ಅಪಘಾತದಲ್ಲಿ ಗಾಯಗೊಂಡು ಮೃತನಾಗಿರುವುದಿಲ್ಲ, ಬದಲಾಗಿ ಬೇರೆ ಕಾರಣದಿಂದ ಮೃತನಾಗಿದ್ದಾನೆ ಎಂದರೆ ಸರಿಯಲ್ಲ. ಮೃತನಿಗೆ ಆಸ್ಪತ್ರೆಗೆ ಮತ್ತು ತಿರುಗಾಟಕ್ಕೆ

ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ಮೃತನು ಒಳರೋಗಿಯಾಗಿ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಶವ ಸಂಸ್ಕಾರಕ್ಕಾಗಿ ರೂ.1,50,000/– ಹಣ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–111 ಫೋಟೋಗಳನ್ನು ನನ್ನ ಮಗ ಸಫಾನ್ ಎನ್ನುವವನು ಮಾಡಿರುತ್ತಾನೆ. ಸಿ.ಡಿ.ಯನ್ನು ಅವನೇ ಮಾಡಿಕೊಂಡು ಬಂದಿರುತ್ತಾನೆ. ಅವನು ಸಿ.ಡಿ. ಮತ್ತು ಫೋಟೊ ತೆಗೆಯುವ ಯಾವುದೇ ತರಬೇತಿ ಪಡೆದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ನ್ಯಾಯಾಲಯದ ಊಟದ ಬಿಡುವಿನ ವೇಳೆಯಾದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 15-11-2024

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಒಂದು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-28 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದಃ-**

ಸದರಿ ದಿನ ನಾನು ಮನೆಗೆ ಹೋಗಲು ನಡೆದುಕೊಂಡು ಹೋಗುತ್ತಿದ್ದಾಗ ಪಶ್ಚಿಮ ಬದಿಯ ರಸ್ತೆಯಲ್ಲಿ ನಿಂತುಕೊಂಡಿದ್ದೆನು. ಸದರಿ ದಿನ ನಾನು ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ರಸ್ತೆ ದಾಟಿಕೊಂಡು ಬಂದಿದ್ದೆನು. ಸದರಿ ಅಪಘಾತವಾದ ಸ್ಥಳದಲ್ಲಿ ರಸ್ತೆ ದಾಟಲು ಯಾವುದೇ ದಾರಿ ಇರುವುದಿಲ್ಲ. ಅಲ್ಲಿ ಬೀದಿ ದೀಪಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನ ಬರುವುದು ನಾನು ಸುಮಾರು 1 ಕಿ.ಮೀ. ದೂರದಲ್ಲಿದ್ದಾಗ ನೋಡಿರುತ್ತೇನೆ. ನಾನು ವಾಹನಗಳನ್ನು ಬರುವುದನ್ನು ನೋಡದೇ ಏಕಾಏಕಿ ರಸ್ತೆ ದಾಟಿದ್ದರಿಂದ ನನ್ನ ತಪ್ಪಿನಿಂದ ರಸ್ತೆ ಅಪಘಾತವಾಗಿದೆ ಎಂದರೆ ಸರಿಯಲ್ಲ. ಬೈಕ್ ಸವಾರನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಟಾರು ರಸ್ತೆಯಲ್ಲಿ ಆಗಿರುವುದಿಲ್ಲ, ಕಚ್ಚಾ ರಸ್ತೆಯಲ್ಲಿ ಆಗಿರುತ್ತದೆ. ಅಪಘಾತವು ಟಾರು ರಸ್ತೆಯ ಮೇಲಾಗಿರುತ್ತದೆ, ಸದರಿ ದಿನ ಆಪಾದಿತ ವಾಹನದ ಚಾಲಕ ತನ್ನ ಸರಿಯಾದ ಬದಿಯಿಂದ ಹೋಗುತ್ತಿದ್ದನು, ಆದರೂ ಸಹ ನಾನು ನಿರ್ಲಕ್ಷತನದಿಂದ ರಸ್ತೆ ದಾಟುತ್ತಿದ್ದಾಗ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ಸ್ವಲ್ಪ ದೂರದಲ್ಲಿ ಪೊಲೀಸ್ ಚೆಕ್ ಪೋಸ್ಟ್ ಇರುತ್ತದೆ. ನಾನು ಒಟ್ಟು ಐದು ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಮೂಳೆ ಮುರಿತದ ಒಂದೇ ಗಾಯವಾಗಿರುತ್ತದೆ. ಅಲ್ಲಿ ರಾಡ್ ಹಾಕಿರುತ್ತಾರೆ. ಆಸ್ಪತ್ರೆಗೆ ಹೋಗಲು ಬಾಡಿಗೆ ವಾಹನಕ್ಕೆ ರೂ.25,000/- ವೆಚ್ಚ ಭರಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ವೆಚ್ಚಕ್ಕಾಗಿ ಸುಮಾರು ರೂ.5,00,000/- ವೆಚ್ಚ ಭರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

ನಾನು ಕೂಲಿ ಕೆಲಸ ಮಾಡುತ್ತಿದ್ದೆನು. ನಾನು ತಿಂಗಳಿಗೆ ರೂ.20,000/- ಆದಾಯ ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜುರುಪಡಿಸಿಲ್ಲ ಎಂದರೆ ಸರಿ. ನಾನು ಈಗ ಯಾವುದೇ ಸಲಕರಣೆ ಉಪಯೋಗಿಸದೇ ಸ್ವತಂತ್ರವಾಗಿ ನಡೆದಾಡುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆಯೇ ಈಗ ಕೆಲಸ ಮಾಡುತ್ತೇನೆ, ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ವಾಹನ ಚಲಾಯಿಸುತ್ತಿದ್ದ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದಲ್ಲಿ ಗಾಯಗೊಂಡಿಲ್ಲ, ಆದರೂ ಸಹ ನಾನು ಮತ್ತು 1ನೇ ಎದುರುದಾರ ಕೂಡಿಕೊಂಡು 2ನೇ ಎದುರುದಾರನಿಂದ ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಪೆಟ್ಟಾಗದೇ ಇದ್ದರಿಂದ 2ದಿನಗಳು ವಿಳಂಬ ಮಾಡಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 15–11–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–6 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಮತ್ತು ಚಿಕಿತ್ಸೆ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–7 ಮತ್ತು 8 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–9 ಎಂದು ಗುರುತಿಸಲಾಯಿತು. ಒಂದು ಓ.ಪಿ.ಡಿ.ಪ್ರತಿಯನ್ನು ಹಾಜುರುಪಡಿಸಿದ್ದು, ಅದನ್ನು ನಿಪಿ–10 ಎಂದು ಗುರುತಿಸಲಾಯಿತು. ಒಟ್ಟು 60 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 11 ರಿಂದ 70 ಎಂದು ಗುರುತಿಸಲಾಯಿತು. 2 ಡಿಸ್ಚಾರ್ಜ್ ಬಿಲ್ಲನ್ನು ಮತ್ತು ಒಂದು ವೈದ್ಯರ ಬಿಲ್ಲನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–71 ಮತ್ತು 72 ಎಂದು ಗುರುತಿಸಲಾಯಿತು. ಒಂದು ಅಟೆಸ್ಟೆಡ್ ಮಾಡಿದ ಆಧಾರ ಪ್ರತಿ ಮತ್ತು ಡಿ.ಎಲ್. ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ ನಿಪಿ–73 ಮತ್ತು 74 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**<u>ಪಾಟೀ ಸವಾಲುಃ</u>    1ನೇ ಎದ್ರುದಾರರ ಪರಃ–**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ</u>   2ನೇ ಎದ್ರುದಾರರ ಪರಃ–**

2ನೇ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಶ್ರೀ ಎಸ್.ಎಂ.ಬಿ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 12–11–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಪಿ.ಎಸ್ ಪರವಾಗಿ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

ಈ ಪ್ರಕರಣದಲ್ಲಿ ನಾನು ಅರ್ಜಿದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ–**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯುಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 12–11–2024

<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ–

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆದ್ದರಿಂದ ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಅಪಘಾತದಲ್ಲಿ ಒಂದೇ ವಾಹನ ಭಾಗಿಯಾಗಿರುತ್ತದೆ. ಭಾಗಿಯಾದ ವಾಹನವು ನನ್ನ ಮೃತ ಅಣ್ಣನಿಗೆ ಸೇರಿದ್ದಾಗಿತ್ತು. ಅದಕ್ಕೆ ವಿಮೆ ಇತ್ತು. ನನ್ನ ಅಣ್ಣನ ವಾಹನದ ವಿಮೆ ಇರುವ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಅರ್ಜಿಯಲ್ಲಿ ಎಷ್ಟು ಜನರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಅರ್ಜಿಯಲ್ಲಿ ಅಪಘಾತ ಹೇಗೆ ಆಗಿದೆ ಎಂದು ಬರೆಯಲಾಗಿದೆ ಎಂಬುವುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರಮಾಣ ಪತ್ರದಲ್ಲಿ ಮಂಜುಳಾ ಎಸ್.ಗೊಂಡ ಎನ್ನವವರು ನನಗೆ ಗೊತ್ತಿರುವುದಿಲ್ಲ. ಆದರೆ, ಅದು ಹೆಸರು ತಪ್ಪಾಗಿ ಮಂಜುನಾಥ ಗೊಂಡ ಎನ್ನುವುದರ ಬದಲಾಗಿ ಮಂಜುಳಾ ಗೊಂಡ ಎಂದಾಗಿದೆ ಎಂದು ನುಡಿಯುತ್ತಾರೆ. ನಾವು ಅರ್ಜಿದಾರರು ಒಟ್ಟಾಗಿ ವಾಸಿಸುತ್ತೇವೆ ಎಂದು ತೋರಿಸಲು ಬಿ.ಪಿ.ಎಲ್ ಪಡಿತರ ಚೀಟಿ ಇರುತ್ತದೆ. ಅದು ನಮ್ಮ ತಾಯಿಯ ಹೆಸರಿನಲ್ಲಿರುತ್ತದೆ. ನಾವು ಮೃತನು ಒಟ್ಟಾಗಿ ವಾಸಿಸುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಮೃತ ನನ್ನ ಅಣ್ಣ ಗಾರೆ ಕೆಲಸ ಮಾಡುತ್ತಿದ್ದರು. ಮೃತನು ಗಾರೆ ಕೆಲಸ ಮಾಡುತ್ತಿದ್ದ ಬಗ್ಗೆ ಕಾರ್ಮಿಕ ಇಲಾಖೆಯಿಂದ ಗುರುತಿನ ಚೀಟಿ ಇತ್ತು. ಆದರೆ ಅದನ್ನು ಹಾಜರುಪಡಿಸಿರುವುದಿಲ್ಲ.

1ನೇ ಎದುರುದಾರನಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಜನರೇಟರ್ 1ನೇ ಎದುರುದಾರನಿಗೆ ಸಂಬಂಧಿಸಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಿಪಿ–7 ರಶೀದಿ ಯಾರಿಂದ ಸ್ವೀಕರಿಸಲಾಗಿದ್ದು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ–7 ನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ–7ನ್ನು ಯಾರು ಎಲ್ಲಿಂದ ಪಡೆದುಕೊಂಡು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–7ನ್ನು ಕಂಪ್ಯೂಟರಿನಲ್ಲಿ ತೆಗೆಯಲಾಗಿದೆಎಂದರೆ ಸಾಕ್ಷಿ ಅದನ್ನು ನಾನು ಕೊಟ್ಟಿರುವುದಿಲ್ಲ ಮತ್ತು

– 6 – ಎಂ.ವಿ.ಸಿಃ 374/2023

ಪಿ.ಡಬ್ಲ್ಯುಃ 1

ಹಾಜರುಪಡಿಸಿರುವುದಿಲ್ಲ, ಆದ್ದರಿಂದ ಅದು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಯಾವುದೇ ಕೆಲಸ ಮಾಡುವುದಿಲ್ಲ, ಮನೆಯಲ್ಲಿ ನನ್ನ ತಾಯಿಯ ಸೇವೆ ಮಾಡಿಕೊಂಡಿರುತ್ತೇನೆ. ಏಕೆಂದರೆ ನನ್ನ ತಾಯಿಗೆ ವಯಸ್ಸಾಗಿದೆ, ಅವರ ಆರೋಗ್ಯ ಸರಿಯಿರುವುದಿಲ್ಲ. 3ನೇ ಅರ್ಜಿದಾರರು ದ್ವಿತೀಯ ಪಿ.ಯು.ಸಿ. ಮಾಡುತ್ತಿದ್ದಾರೆ. 3ನೇ ಅರ್ಜಿದಾರರಿಗೆ ಈಗ 25 ವರ್ಷ ವಯಸ್ಸಾಗಿದೆ. ಆತನು ಯಾವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಎಂದು ಗೊತ್ತಿಲ್ಲ. ನಾನು ಅದನ್ನು 3ನೇ ಅರ್ಜಿದಾರನಿಗೆ ಕೇಳಿರುವುದಿಲ್ಲ. 3ನೇ ಅರ್ಜಿದಾರನನ್ನು ನನ್ನ ಮಾವ ಹಣಕಾಸಿನ ನೆರವು ನೀಡಿ ಶಿಕ್ಷಣ ಕೊಡಿಸುತ್ತಿದ್ದಾರೆ. ನಾನು ಯಾವುದೇ ಕೆಲಸ ಮಾಡದೇ ಮನೆಯಲ್ಲಿ ಇರುತ್ತೇನೆ ಮತ್ತು 3ನೇ ಅರ್ಜಿದಾರನು ಶಿಕ್ಷಣ ಪಡೆಯುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 3ನೇ ಅರ್ಜಿದಾರನು ಒಳ್ಳೆಯ ಕೆಲಸದಲ್ಲಿದ್ದೇವೆ, ಮೃತನ ಆದಾಯದ ಮೇಲೆ ಅವಲಂಬಿತರಾಗಿದ್ದೇವೆ ಎಂದರೆ ಸರಿಯಲ್ಲ. ಮೃತನಿಗೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ಸರಿಯಲ್ಲ. ನಮಗೆ ಸ್ವಂತ ಜಮೀನು ಇದೆ, ಅದರಲ್ಲಿ 200 ಅಡಿಕೆ ಮರಗಳನ್ನು ಬೆಳೆಸಿರುತ್ತೇವೆ. 1ನೇ ಅರ್ಜಿದಾರರಿಗೂ ಆದಾಯ ಇದೆ ಎಂದರೆ ಸರಿಯಲ್ಲ. ನಾವೆಲ್ಲರೂ ನಮ್ಮ ಜಮೀನಿನಿಂದ ಬಂದ ಆದಾಯದಿಂದ ಜೀವನ ಸಾಗಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಮೃತನು ತಾನು ದುಡಿದು, ಸಾರಾಯಿ ಕುಡಿದು ತನ್ನ ಹಣವನ್ನು ತಾನೇ ಖರ್ಚು ಮಾಡುತ್ತಿದ್ದ ಎಂದರೆ ಸರಿಯಲ್ಲ. ಮೃತನು ಸಾರಾಯಿ ಕುಡಿದು ನಶೆಯಲ್ಲಿ ಬಿದ್ದು ತಾನೇ ತನ್ನ ತಪ್ಪಿನಿಂದ ಅಪಘಾತಪಡಿಸಿಕೊಂಡು ಗಾಯಗೊಂಡು ಮೃತನಾಗಿದ್ದಾನೆ ಎಂದರೆ ಸರಿಯಲ್ಲ. ಮೃತನು ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ರಸ್ತೆಯ ಮೇಲೆ ಬಿದ್ದು ಗಾಯಗೊಂಡು ತನ್ನ ತಪ್ಪಿನಿಂದ ಮೃತನಾಗಿದ್ದಾನೆ ಎಂದರೆ ಸರಿಯಲ್ಲ.

ಪಿರ್ಯಾದಿಯನ್ನು ಸುರೇಶ ಎನ್ನುವವರು ನೀಡಿರುತ್ತಾರೆ. ನಾನು ಪಿರ್ಯಾದಿ ಕೊಟ್ಟಿರುವುದಿಲ್ಲ. ಪಿರ್ಯಾದಿಯನ್ನು ಘಟನೆಯಾದ 2 ದಿನಗಳ ನಂತರ ನೀಡಲಾಗಿದೆ. ಹೆಚ್ಚಿನ ಪರಿಹಾರ ಪಡೆಯುವದಕ್ಕಾಗಿ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 08-11-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.429/2020 ಇದರ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು. 11 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 9 ರಿಂದ 19 ಎಂದು ಗುರುತಿಸಲಾಯಿತು. ಒಂದು ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 08-11-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಫಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.429/2020 ರ ನ್ಯಾಯಾಲಯದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ, ಅವುಗಳನ್ನು ನಿಪಿ-1 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-7 ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು, ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-9 ಎಂದು ಗುರುತಿಸಲಾಯಿತು. 6 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 10 ರಿಂದ 15 ಎಂದು ಗುರುತಿಸಲಾಯಿತು. 3 ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ 16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 08-11-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಮೂಲ ಅರ್ಜಿದಾರರ ತಾಯಿಯಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಮೃತ ಅರ್ಜಿದಾರನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಮೃತ ನನ್ನ ಮಗನ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-9 ಎಂದು ಗುರುತಿಸಲಾಯಿತು. ಎರಡು ಡಿಸ್ಚಾರ್ಜ್ ಸಮ್ಮರಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. 92 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 12 ರಿಂದ 103 ಎಂದು ಗುರುತಿಸಲಾಯಿತು. ಒಂದು ಓ.ಪಿ.ಡಿ. ಪ್ರಮಾಣ ಪತ್ರ ಮತ್ತು ಒಂದು ಸಿಟಿ ಸ್ಕ್ಯಾನ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-104 ಎಂದು ಗುರುತಿಸಲಾಯಿತು. ಒಂದು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-105 ಎಂದು ಗುರುತಿಸಲಾಯಿತು. 7 ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-106 ಎಂದು ಗುರುತಿಸಲಾಯಿತು. ಒಂದು ಅಟೆಸ್ಟೆಡ್ ಮಾಡಿದ ಪಡಿತರ ಚೀಟಿಯನ್ನು ಹಾಜರುಡಿಪಸಿದ್ದು, ಅದನ್ನು ನಿಪಿ-107 ಎಂದು ಗುರುತಿಸಲಾಯಿತು.

**ಪಿ.ಡಬ್ಲ್ಯು: 1**

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**
**ದಿನಾಂಕಃ 08-11-2024.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ನಾನು ಪ್ರಯಾಣಿಸುತ್ತಿದ್ದ ವಾಹನವು ನನ್ನ ಗಂಡನ ಮಾಲ್ಕಿಯ ವಾಹನವಾಗಿತ್ತು. ಸದರಿ ವಾಹನವನ್ನು ನನ್ನ ಗಂಡ ಚಲಾಯಿಸುತ್ತಿದ್ದರು. ಸದರಿ ದಿನ ನಾವು ಒಂದೇ ವಾಹನದಲ್ಲಿ ಮೂವರು ಪ್ರಯಾಣಿಸುತ್ತಿದ್ದೆವು. ನಾನು 10ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಗಂಡ 8 ನೇ ತರಗತಿಯವರೆಗೆ ಓದಿರುತ್ತಾರೆ. ಸದರಿ ದಿನ ನನ್ನ ಮಗ ವಾಹನದ ಮುಂದುಗಡೆ ಪೆಟ್ರೋಲ್ ಟಾಂಕಿನ ಮೇಲೆ ಕುಳಿತುಕೊಂಡಿದ್ದನು. ಒಂದೇ ದ್ವಿಚಕ್ರವಾಹನದಲ್ಲಿ ಮೂವರು ಪ್ರಯಾಣಿಸುವುದು ಅಪರಾಧ ಎಂದು ನನಗೆ ತಿಳಿದಿರುತ್ತದೆ. ನಾವು ಸದರಿ ದಿನ ಭಟ್ಕಳದಿಂದ ಮುರ್ಡೇಶ್ವರಕ್ಕೆ ಹೋಗುತ್ತಿದ್ದೆವು. ಆಪಾದಿತ ಮಿನಿ ಟ್ರಕ್ ಭಟ್ಕಳದಿಂದ ಮುರ್ಡೇಶ್ವರಕ್ಕೆ ಹೋಗುತ್ತಿತ್ತು. ಮಿನಿ ಟ್ರಕ್ ನಮ್ಮ ಹಿಂದುಗಡೆಯಿಂದ ಬರುತ್ತಿತ್ತು, ಅದು ಬರುವುದು ನಾನು ನೋಡಿಲ್ಲ ಎಂದರೆ ಸರಿ. ಅಪಘಾತವು ಆಪಾದಿತ ಮಿನಿ ಟ್ರಕ್ಕಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ಬದಲಾಗಿ ನನ್ನ ಗಂಡ ನಮ್ಮ ಮಗನನ್ನು ವಾಹನದ ಪೆಟ್ರೋಲ್ ಟಾಂಕಿನ ಮೇಲೆ ಕೂರಿಸಿಕೊಂಡು ಹೋಗಿದ್ದರಿಂದ ವಾಹನ ನಿಯಂತ್ರಣ ಕಳೆದುಕೊಂಡು ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರಿಂದ 2ನೇ ಎದುರುದಾರ ನಮಗೆ ಪರಿಹಾರ ಕೊಡಲು ಬಾಧ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ ಡಿ.ಎಲ್ ಇರಲಿಲ್ಲ ಮತ್ತು ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಮತ್ತು ನಮ್ಮ ಮಗನಿಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-9 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನಾವು ಯಾರೂ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಮತ್ತು ತಿರುಗಾಟಕ್ಕಾಗಿ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆದಾಯದಲ್ಲಿ ಯಾವುದೇ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಟೈಲಂರಿಂಗ್ ಕೆಲಸ ಮಾಡುತ್ತಿದ್ದೆ, ಅದರಿಂದ ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನಾನು ಯಾವುದೇ

ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಮತ್ತು ನನ್ನ ಮಗನಿಗೆ ಆರು ತಿಂಗಳ ವರೆಗೆ ವಿಶ್ರಾಂತಿ ಪಡೆಯಲು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ ಮಿನಿ ಟ್ರಕ್ ಚಾಲಕನಿಗೆ ಡಿ.ಎಲ್ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ–**

1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 08–11–2024

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಎ.ಐ.ಆರ್. ಫಾರ್ಮ್, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–6 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ–7 ಎಂದು ಗುರುತಿಸಲಾಯಿತು. ಅಂಗನ್ಯೂನತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ



ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–8 ಎಂದು ಗುರುತಿಸಲಾಯಿತು. 15 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 9 ರಿಂದ 23 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ–**

ನಾನು ಪ್ರಯಾಣಿಸುತ್ತಿದ್ದ ವಾಹನವು ನನ್ನ ಗೆಳೆಯನ ಮಾಲ್ಕಿಯ ವಾಹನವಾಗಿತ್ತು. ಸದರಿ ವಾಹನವನ್ನು ನನ್ನ ಗೆಳೆಯ ತಿಮ್ಮಯ್ಯ ನಾಯ್ಕ ಚಲಾಯಿ ಸುತ್ತಿದ್ದರು. ನಾನು ಹಿಂಬದಿಯಲ್ಲಿ ಕುಳಿತುಕೊಂಡಿದ್ದೆನು. ಅಪಘಾತವಾದ ತಕ್ಷಣ ನನ್ನನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸದರಿ ಆಸ್ಪತ್ರೆಯಲ್ಲಿ ನಾಲ್ಕು ತಾಸುಗಳ ವರೆಗೆ ಚಿಕಿತ್ಸೆ ಪಡೆದು, ನಂತರ ಭಟ್ಕಳದ ಲೈಫ್ ಕೇರ್ ಆಸ್ಪತ್ರೆಗೆ ದಾಖಲಿಸಲಾಯಿತು. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಸರಕಾರಿ ಆಸ್ಪತ್ರೆಯಲ್ಲಿ ನನ್ನೊಂದಿಗೆ ನನ್ನ ಗೆಳೆಯ ತಿಮ್ಮಯ್ಯ ನಾಯ್ಕ ಇದ್ದರು. ಸದರಿ ಆಸ್ಪತ್ರೆಗೆ ಪೊಲೀಸರು ಬಂದಿರಲಿಲ್ಲ. ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಅಪಘಾತದಿಂದ ಗಾಯಗೊಂಡಿರುವುದಾಗಿ

ವೈದ್ಯರ ಬಳಿ ಹೇಳಿರುತ್ತೇನೆ. ಲೈಫ್ ಕೇರ್ ಆಸ್ಪತ್ರೆಗೆ ಪೊಲೀಸರು ಬಂದಿರಲಿಲ್ಲ. ಸದರಿ ಆಸ್ಪತ್ರೆಯಲ್ಲಿದ್ದಾಗ ನನ್ನ ಭಾವ ಮತ್ತು ನನ್ನ ತಂಗಿ ಬಂದಿದ್ದರು. ಅಪಘಾತ ಹೇಗೆ ಆಯಿತು ಎಂದು ನನ್ನ ಭಾವ ಮತ್ತು ನನ್ನ ತಂಗಿಗೆ ತಿಳಿಸಿರುತ್ತೇನೆ. ಅದನ್ನು ಆಸ್ಪತ್ರೆಯವರಿಗೂ ಸಹ ತಿಳಿಸಿರುತ್ತೇನೆ. ನಾನು 6ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಗೆಳೆಯ ತಿಮ್ಮಯ್ಯ ನಾಯ್ಕ ರವರು 10 ನೇ ತರಗತಿಯವರೆಗೆ ಓದಿರುತ್ತಾರೆ. ನಾವು ಪ್ರಯಾಣಿಸುತ್ತಿದ್ದ ವಾಹನದ ಮಾಲೀಕನ ಹೆಸರು ರೋಹಿದಾಸ ನಾಗಪ್ಪ ನಾಯ್ಕ ಎಂದು ಇರುತ್ತದೆ. ಅವರು ಬೆಂಗಳೂರಿನಲ್ಲಿ ವಾಸಿಸುತ್ತಾರೆ. ಸದರಿಯವರಿಗೆ ಅಪಘಾತದ ವಿಷಯವನ್ನು 2 ದಿನಗಳ ನಂತರ ತಿಳಿಸಿರುತ್ತೇವೆ. ಅಪಘಾತವಾದ ತಕ್ಷಣ ಪೊಲೀಸರಿಗೆ ತಿಳಿಸಬೇಕಾಗುತ್ತದೆ ಎಂದು ನನಗೆ ಜ್ಞಾನ ಇರುತ್ತದೆ. ಅಪಘಾತದ ಸಂಬಂಧ ಪಿರ್ಯಾದಿಯನ್ನು ನಾನೇ ನೀಡಿರುತ್ತೇನೆ.



ಲೈಫ್ ಕೇರ್ ಆಸ್ಪತ್ರೆಯಲ್ಲಿ ನಾನು 4 ದಿನಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಪ್ರಯಾಣಿಸುತ್ತಿದ್ದ ವಾಹನದ ಚಾಲಕನಿಗೆ ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ಹಿಂಬದಿ ಸವಾರನಿಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಸಮಯದಲ್ಲಿ ಚಾಲಕ ವೃತ್ತಿ ಮಾಡುತ್ತಿದ್ದೆ, ಅದರ ದಾಖಲೆ ಡಿ.ಎಲ್.ನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ನೂರಿ ಫಿಷರೀಶ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಸಮಯದಲ್ಲಿ ಮೇಲೆ ಹೇಳಿದ ಕಂಪನಿಯಲ್ಲಿ ಕೆಲಸ ಮಾಡಿ, ತಿಂಗಳಿಗೆ ರೂ.30,000/– ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ–8 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಆದಾಯದಲ್ಲಿ ಯಾವುದೇ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಿಪಿ–14 ರಲ್ಲಿ ತೋರಿಸಿದ ವೆಚ್ಚವನ್ನು ನಾನು ಆಸ್ಪತ್ರೆಯಲ್ಲಿ ಭರಿಸಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ವಾಹನಕ್ಕೆ ಮತ್ತು ನನ್ನನ್ನು ನೋಡಿಕೊಳ್ಳಲು ರೂ.12,000/– ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಪುನಃ

ಹೋಗಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ಮತ್ತು ನಾನು ಹೇಳಿದಷ್ಟು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದು, ಆದ್ದರಿಂದ ವಯಸ್ಸನ್ನು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನಾನು ಪ್ರಯಾಣಿಸುತ್ತಿದ್ದ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.



**ಪಿ.ಡಬ್ಲ್ಯುಃ 1**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 08-11-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-7 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-8 ಎಂದು ಗುರುತಿಸಲಾಯಿತು. 18 ವೈಧ್ಯಕೀಯ ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 9 ರಿಂದ 26 ಎಂದು ಗುರುತಿಸಲಾಯಿತು. ಒಂದು ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-27 ಒಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 26–10–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಅದು ನಾನು ನೀಡಿದ ಚಿಕಿತ್ಸೆ ಮತ್ತು ಅಂಗನ್ಯೂನ್ಯತೆ ಪ್ರಮಾಣ ಪತ್ರವಿದ್ದು, ಅದನ್ನು ನಿಪಿ–40 ಎಂದು, ಸಾಕ್ಷಿಯ ಸಹಿಯನ್ನು ನಿಪಿ–40(ಎ) ಎಂದು ಗುರುತಿಸಲಾಯಿತು. ನಿಪಿ–40 ರಲ್ಲಿ ನಜರ್ ಚುಕ್ಕಿಯಿಂದ 01–01–2024 ರ ಬದಲು 01–01–2022 ಎಂದು ತಪ್ಪಾಗಿ ನಮೂದಾಗಿರುತ್ತದೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.(ಹೆಚ್) ವಕೀಲರಿಂದಃ–**

ನಿಪಿ–40 ರ 1 ಮತ್ತು 2ನೇ ಗಾಯವು ಸಂಪೂರ್ಣವಾಗಿ ಗುಣವಾಗಿ ಕೂಡಿರುತ್ತವೆ ಎಂದರೆ ಸರಿ. ನಿಪಿ–40 ರಲ್ಲಿ ಹೇಳಿದ 3ನೇ ಮತ್ತು 4ನೇ ಗಾಯಗಳಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಕೈಗಳು ಅಲ್ಲಾಡಿಸಲು ಮತ್ತು ಮೇಲೆತ್ತಲು ತೊಂದರೆಯಾಗುತ್ತಿತ್ತು. ಅಂಗನ್ಯೂನ್ಯತೆಯನ್ನು ಅಳೆಯಲು ಯಾವುದೇ ಯಂತ್ರೋಪಕರಣಗು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು, ನಾವು ಎಕ್ಸರೇ ಮತ್ತು ರೋಗಿಯನ್ನು ಪರೀಕ್ಷಿಸಿ ಪ್ರಮಾಣಪತ್ರವನ್ನು ನೀಡುತ್ತೇವೆ ಎಂದು ನುಡಿಯುತ್ತಾರೆ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವಾಗ ಅರ್ಜಿದಾರರ ಎಕ್ಸರೇ ತೆಗೆದಿರುತ್ತೇನೆ. ಆದರೆ ಎಕ್ಸರೇ ಟೆಕ್ನಿಷಿಯನ್ ರವರಿಂದ ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ. ರೋಗಿಗಳು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಬಂದಾಗ ತಾನು ಹೆಚ್ಚು

ಅಂಗನ್ಯೂನ್ಯತೆ ಹೊಂದಿದ್ದೇನೆ ಎಂದು ನಟನೆ ಮಾಡಬಹುದು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಹೇಳಿದಷ್ಟು ಅಂಗನ್ಯೂನ್ಯತೆ ಇರುವುದಿಲ್ಲ, ಆದರೂ ಸಹ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕಾರಣ, ಹೆಚ್ಚಿನ ಪರಿಹಾರ ಸಿಗಲು ನಿಪಿ–40 ರಂತೆ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಈಗ ಸಂಪೂರ್ಣ ಗುಣಹೊಂದಿರುತ್ತಾರೆ, ಈಗ ಅವರಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮುಂದುವರಿದ ಚಿಕಿತ್ಸೆಗಾಗಿ ರೂ.45,000/– ಖರ್ಚು ಬರುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ–**

2ನೇ ಎದುರುದಾರರ ಪರವಾಗಿ ಶ್ರೀ ಎಂ.ಎಲ್.ಎನ್.(ಹೆಚ್) ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 26-10-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಜೆ.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದೇನೆ, ಅವುಗಳನ್ನು ನಿಪಿ-1 ರಿಂದ 5 ಎಂದು ಗುರುತಿಸಲಾಯಿತು. ನವೆಂಬರ್ 2022 ರ ನನ್ನ ವೇತನ ಪ್ರಮಾಣ ಪತ್ರ, ಸೇವಾ ಪ್ರಮಾಣ ಪತ್ರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡಿದ ಒಂದು ದೃಢೀಕರಣ ಪತ್ರ ಹಾಜರುಪಡಿಸಿದ್ದೇನೆ. ಅವುಗಳನ್ನು ನಿಪಿ-6 ರಿಂದ 8 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ಆಧಾರ ಪ್ರತಿ ಮತ್ತು 10 ನೇ ತರಗತಿಯ ಅಂಕ ಪಟ್ಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-11 ಎಂದು ಗುರುತಿಸಲಾಯಿತು. 16 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 12 ರಿಂದ 27 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 3ನೇ ಮತ್ತು 4ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.(ಹೆಚ್) ವಕೀಲರಿಂದ.**

ಸದರಿ ದಿನ ನಾನು ಟೆಂಪೋದ ಮುಂದುಗಡೆಯಲ್ಲಿ ಕುಳಿತು ಪ್ರಯಾಣಿಸುತ್ತಿದ್ದೆನು. ನಾನು ಸದರಿ ದಿನ ಟೆಂಪೋದಲ್ಲಿ ಮುಂದುಗಡೆ ನೋಡುತ್ತಾ ಕುಳಿತಿರಲಿಲ್ಲ, ಬದಲಾಗಿ ಚಾಲಕನ ಬಳಿ ಇರುವ ಆಸನದ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದೆನು. ನಾನು ಸದರಿ ದಿನ ಸಹಜವಾಗಿ ಕುಳಿತಿದ್ದೆನು. ಬಸ್ ಹಿಂದಿನಿಂದ ಬರುವುದನ್ನು ನಾನು ನೋಡಿಲ್ಲ ಎಂದರೆ ಸರಿ. ಆದ್ದರಿಂದ ಹಿಂದುಗಡೆಯಿಂದ ಬರುತ್ತಿದ್ದ

ಬಸ್ ವೇಗವಾಗಿ ಬರುತ್ತಿತ್ತಾ ಅಥವಾ ನಿಧಾನವಾಗಿ ಬರುತ್ತಿತ್ತಾ ಎಂದರೆ ಸಾಕ್ಷಿ ನಮ್ಮ ಟೆಂಪೋ ನಿಧಾನವಾಗಿ ಹೋಗುತ್ತಿದ್ದು ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ನನಗೆ ಜ್ಞಾನ ತಪ್ಪಿತ್ತು. ಆರ್.ಎನ್.ಎಸ್. ಆಸ್ಪತ್ರೆಯಲ್ಲಿ ಜ್ಞಾನ ಬಂದಿರುತ್ತದೆ. ಆರ್.ಎನ್.ಎಸ್. ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಕುಂದಾಪುರದ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಅಪಘಾತವು ಬಸ್ಸಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದ ಸಮಯದಲ್ಲಿ ಎಷ್ಟು ಸಂಬಳ ಇತ್ತೋ, ಈಗ ಅದಕ್ಕಿಂತ ಹೆಚ್ಚಿನ ಸಂಬಳ ಬರುತ್ತದೆ ಎಂದರೆ ಸರಿ. ನಾನು ಸೆಪ್ಟೆಂಬರ್ 2024 ರ ತಿಂಗಳಿನಲ್ಲಿ ಒಟ್ಟು ರೂ. 52,000/- ಸಂಬಳ ಪಡೆದಿರುತ್ತೇನೆ. ಈ ಅಪಘಾತದಲ್ಲಿ ನನಗೆ ಆದಾಯದಲ್ಲಿ ತೊಂದರೆಯಾಗಿಲ್ಲ ಎಂದರೆ ಸರಿ. ವಿಶ್ರಾಂತಿ ಪಡೆದ ಅವಧಿಯಲ್ಲಿ ನಾನು ಇಲಾಖೆಯಿಂದ ಗಳಿಕೆ ರಜೆಯನ್ನು ತೆಗೆದುಕೊಂಡು ವಿಶ್ರಾಂತಿ ಪಡೆದಿರುತ್ತೇನೆ. ಗಳಿಕೆ ರಜೆ ಪಡೆದರೂ ಸಹ ನನಗೆ ವೇತನ ಬಂದಿರುತ್ತದೆ ಎಂದರೆ ಸರಿ. ಅಪಘಾತದಿಂದ ಗಾಯಗೊಂಡಿದ್ದರಿಂದ, ನನ್ನ ಆದಾಯದಲ್ಲಿ ನಷ್ಟವಾಗಿದೆ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಲಗೈ ಭುಜದಲ್ಲಿ ಮುರಿತ ಉಂಟಾದ ಎಲುಬು ಈಗ ಸಂಪೂರ್ಣ ಕೂಡಿಡರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಈಗಲೂ ಸಹ ನನಗೆ ಸದರಿ ಭಾಗದಲ್ಲಿ ನೋವು ಇದೆ, ಕೈ ಮೇಲೆ ಮಾಡಿ ಶಾಲೆಯಲ್ಲಿ ಬರೆಯಲು ಕಷ್ಟವಾಗುತ್ತದೆ ಮತ್ತು ಇನ್ನು ಮುಂದೆ ಶಸ್ತ್ರ ಚಿಕಿತ್ಸೆ ಮಾಡಿಕೊಳ್ಳುವ ಸಂದರ್ಭ ಬಂದರೂ ಬರಬಹುದು ಎಂದು ನುಡಿಯುತ್ತಾರೆ. ಅಪಘಾತದ ಪೂರ್ವದಲ್ಲಿ ನನ್ನ ಮನೆಗೆಲಸ ನಾನೇ ಮಾಡಿಕೊಳ್ಳುತ್ತಿದ್ದೆನು. ಆದರೆ, ಈಗ ಮನೆಗೆಲಸಕ್ಕೆ ಕೆಲಸದವರನ್ನು ಇಟ್ಟುಕೊಂಡಿರುತ್ತೇನೆ. ನನ್ನ ಮನೆಯಲ್ಲಿ ನಾನು ಮತ್ತು ನನ್ನ ಗಂಡ ಇಬ್ಬರೇ ವಾಸಿಸುತ್ತೇವೆ. ನನ್ನ ಗಂಡನೂ ಸಹ ವಸತಿ ಶಾಲೆಯ ಶಿಕ್ಷಕರಾಗಿರುತ್ತಾರೆ. ನಾವು ಇಬ್ಬರೂ ಶಿಕ್ಷಕರಾಗಿರುವುದರಿಂದ ದಿನನಿತ್ಯದ ಕೆಲಸವನ್ನು ನಾನು ಇಬ್ಬರೂ ಸೇರಿಕೊಂಡು ಮಾಡುತ್ತೇವೆ ಎಂದರೆ ಸರಿ. ನಾನು ಕೆಲಸದವರನ್ನು ನೇಮಿಸಿಕೊಂಡ ಬಗ್ಗೆ ಮತ್ತು ಅವರಿಗೆ ವೇತನ ನೀಡುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಅಪಘಾತದಿಂದ ಆದ ನೋವುಗಳು ಈಗ ಸಂಪೂರ್ಣ ಗುಣವಾಗಿದ್ದು, ನಾನು ಮೊದಲಿನಂತೆಯೇ ಈಗ ನನ್ನ ಕೆಲಸ ಕಾರ್ಯದಲ್ಲಿ ತೊಡಗಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ

ವೆಚ್ಚವನ್ನು ಸರಕಾರದಿಂದ ಕ್ಲೈಮ್ ಮಾಡಿಕೊಂಡಿರುವುದಿಲ್ಲ. ಅಪಘಾತವು ನಾನು ಶಾಲೆಗೆ ಹೋಗುವ ಸಂದರ್ಭದಲ್ಲಿ ಆಗಿರುತ್ತದೆ ಎಂದರೆ ಸರಿ. ವೈದ್ಯಕೀಯ ವಿಮೆ ಪಾಲಿಸಿಯನ್ನು ನಾನು ಹೊಂದಿರುತ್ತೇನೆ. ನಾನು ಸರಕಾರಿ ನೌಕರಳಾಗಿದ್ದು ಮತ್ತು ವಿಮೆದಾರಳು ಇರುವುದರಿಂದ, ನಾನು ಖರ್ಚು ಮಾಡಿದ ವೈದ್ಯಕೀಯ ವೆಚ್ಚವನ್ನು ನಮ್ಮ ಇಲಾಖೆಯಿಂದ ಮತ್ತು ವಿಮಾದಾರರಿಂದ ಪಡೆದುಕೊಂಡಿರುತ್ತೇನೆ, ಆದ್ದರಿಂದ 3 ಮತ್ತು 4ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮುಂದುವರಿದ ಚಿಕಿತ್ಸೆಗಾಗಿ, ರೂ.50,000/- ಖರ್ಚು ಬರುತ್ತದೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ-**

ನಾನು ಪ್ರಯಾಣಿಸುತ್ತಿದ್ದ ಟೆಂಪೋ ಚಾಲಕನು ಅಚಾನಕ್ಕಾಗಿ ವಾಹನವನ್ನು ನಿಲ್ಲಿಸಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಕು. ಎನ್.ಟಿ.ಎನ್. ವಕೀಲರಿಂದಃ-**

ಅಪಘಾತವು ನಾನು ಪ್ರಯಾಣಿಸುತ್ತಿದ್ದ ಟೆಂಪೋ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ಬದಲಾಗಿ ಬಸ್ಸಿನ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 23-10-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಪಿ.ಎಸ್ ವಕೀಲರ ಪರವಾಗಿ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 2ನೇ ಅರ್ಜಿದಾರನಾಗಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಪಿ.ಎಂ. ವರದಿ ಮತ್ತು ಚಾರ್ಜ್‌ಶೀಟ್ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 6 ಎಂದು ಗುರುತಿಸಲಾಯಿತು. ಒಂದು ಟ್ಯಾಕ್ಸ್ ಇನ್‌ವಾಯ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-7 ಎಂದು, ಮೂರು ಅಟೆಸ್ಟೆಡ್ ಮಾಡಿದ ಆಧಾರ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-8 ರಿಂದ 10 ಎಂದು ಗುರುತಿಸಲಾಯಿತು. ಒಂದು ಅಟೆಸ್ಟೆಡ್ ಮಾಡಿದ ಡಿ.ಎಲ್. ಮತ್ತು ವಿಮಾ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-11 ರಿಂದ 13 ಎಂದು ಗುರುತಿಸಲಾಯಿತು. ಒಂದು ಎಮಿಷನ್ ಟೆಸ್ಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ-**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ-**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

2ನೇ ಎದ್ರುದಾರರ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

1ನೇ ಎದುರುದಾರರ ಪರ ವಕೀಲರು ಶ್ರೀ ಸಿ.ಡಿ.ಎನ್, ಶ್ರೀ ಎಂ.ಜಿ. ವಕೀಲರ ಪರವಾಗಿ ಹಾಜರಿದ್ದು, 2ನೇ ಎದುರುದಾರರ ಪರವಾಗಿ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಭಟ್ಕಳ**

**ಎಂವಿಸಿ ನಂ. 300/2022**
**ಪಿಡಬ್ಲ್ಯು : 2**
**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**
**ದಿನಾಂಕಃ 19-10-2024.**

| | | |
|---|---|---|
| **ಹೆಸರು** | : | ಡಾ. ಶೆಹನವಾಜ್ ಮಣಿಪಾಡಿ |
| **ತಂದೆಯ ಹೆಸರು** | : | ಎ.ಆರ್.ಎಸ್. ಮಣಿಪಾಡಿ |
| **ವಯಸ್ಸು** | : | 56 ವರ್ಷ |
| **ಉದ್ಯೋಗ** | : | ಮೆಡಿಕೋ ಲೀಗಲ್ ಕನ್ಸಲ್ಟೆಂಟ್ |
| **ವಾಸ** | : | ಹೈಲ್ಯಾಂಡ್ ಆಸ್ಪತ್ರೆ, ಮಂಗಳೂರು |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ :-**

ನಾನು ಕಳೆದ 13 ವರ್ಷಗಳಿಂದ ಹೈಲ್ಯಾಂಡ್ ಆಸ್ಪತ್ರೆ ಮಂಗಳೂರಿನಲ್ಲಿ ಮೆಡಿಕೋ ಲೀಗಲ್ ಕನ್ಸಲ್ಟೆಂಟ್ ನಾಗಿ ಕೆಲಸ ಮಾಡುತ್ತಿದ್ದೇನೆ.

ನನಗೆ ಗಾಯಾಳು ಅಬ್ದುಲ್ ಲತೀಫ್ ಮೂಸಾ ಗೊತ್ತು. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ದಿ.24-10-2021ರಂದು ಈ ಪ್ರಕರಣದ ಅರ್ಜಿದಾರರು ವಾಹನ ಅಪಘಾತದಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದಿದ್ದರು. ಅರ್ಜಿದಾರನನ್ನು ನಾನು ಪರೀಕ್ಷಿಸಿದಾಗ ಅರ್ಜಿದಾರರಿಗೆ ತಲೆಗೆ ಪೆಟ್ಟಾಗಿ ಮೆದುಳಿಗೆ ಎನಿಮಾ ಆಗಿ ನೀರು ತುಂಬಿತ್ತು ಮತ್ತು ರಕ್ತಸ್ರಾವ ಆಗಿತ್ತು. ಅದೇ ರೀತಿ ಮೆದುಳಲ್ಲಿ ರಕ್ತ ಹೆಪ್ಪುಗಟ್ಟಿತ್ತು ಮತ್ತು ಬಲಗಾಲಿನ ಮೂಳೆ ಮುರಿತವಾಗಿತ್ತು. ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿ, ಕಾಲಿಗೆ ಒಳಸಾಧನ ಅಳವಡಿಸಲಾಗಿದೆ. ಅರ್ಜಿದಾರರು ದಿ.12-11-2021 ರಂದು ಅರ್ಜಿದಾರರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಅರ್ಜಿದಾರರಿಗೆ ಆದ ಗಾಯಗಳು ಎಲ್ಲವೂ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಅರ್ಜಿದಾರರನ್ನು ಪರೀಕ್ಷೆಗೊಳಪಡಿಸಿ, ಅವರಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಅರ್ಜಿದಾರರನ್ನು ಪರೀಕ್ಷಿಸಿದಾಗ ಗಾಯಾಳುವಿಗೆ ಓಡುವುದು, ಮೆಟ್ಟಿಲುಗಳನ್ನು ಹತ್ತುವುದು ಇಳಿಯುವುದಕ್ಕೆ ಕಷ್ಟವಾಗುತ್ತಿತ್ತು. ಅರ್ಜಿದಾರರ ಕಾಲಿನಲ್ಲಿ ಶಕ್ತಿ ಇರಲಿಲ್ಲ, ತಲೆ ನೋವು ಇತ್ತು, ಎಡಕಿವಿ ಕೇಳಿಸುತ್ತಿರಲಿಲ್ಲ, ಅರ್ಜಿದಾರರ ತಲೆಗೆ ಪೆಟ್ಟಾಗಿದ್ದರಿಂದ ಅವರ ನೆನಪಿನ ಶಕ್ತಿ ಕಡಿಮೆಯಾಗಿತ್ತು. ಆದ್ದರಿಂದ ನನ್ನ ಅಭಿಪ್ರಾಯದ ಮೇರೆಗೆ ಅರ್ಜಿದಾರರ ಮೊಣಗಾಲಿಗೆ ಶೇ.45 ರಷ್ಟು ಅಂಗನ್ಯೂನ್ಯತೆ ಆಗಿತ್ತು. ಅರ್ಜಿದಾರರಿಗೆ ಒಟ್ಟು ತಲೆ ಮತ್ತು ಕಾಲಿಗೆ ಶೇ.29 ರಷ್ಟು ಅಂಗನ್ಯೂನ್ಯತೆ ಉಂಟಾಗಿರುತ್ತದೆ. ಅರ್ಜಿದಾರರಿಗೆ ಇಂಪ್ಲಾಂಟುಗಳನ್ನು ಹೊರತೆಗೆಯಲು ನಮ್ಮ ಆಸ್ಪತ್ರೆಯಲ್ಲಿ ಸುಮಾರು ರೂ.45,000/- ಖರ್ಚು ಬರುತ್ತದೆ. ಆ ಬಗ್ಗೆ ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ವಿ.ಸಿ ಮುಖಾಂತರ ತೋರಿಸಿದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 2ನೇ ಎದ್ರುದಾರರ ಪರ ಶ್ರೀಮತಿ ಎಸ್.ಎಂ.ಹೆಚ್./ ಶ್ರೀ ಎಂ.ಎಲ್.ಎನ್.(ಹೆಚ್)ವಕೀಲರಿಂದ :-**

ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ಆದರೆ ಶಸ್ತ್ರಚಿಕಿತ್ಸೆಯನ್ನು ನಾನು ಮಾಡಿರುವುದಿಲ್ಲ. ಅರ್ಜಿದಾರರಿಗೆ ಅಪಘಾವಾದಾಗ 45 ವರ್ಷ ವಯಸ್ಸಾಗಿತ್ತು. ನಾನು ಅರ್ಜಿದಾರರಿಗೆ ಚಿಕಿತ್ಸೆ ಕೊಡುವಾಗ ವೈದ್ಯರಲ್ಲಿ ನಾನೂ ಒಬ್ಬ ಟೀಮ್ ಸದಸ್ಯನಾಗಿದ್ದೆನು. ನಾನು ಶಸ್ತ್ರ ಚಿಕಿತ್ಸೆ ಮಾಡಿಲ್ಲವಾದ್ದರಿಂದ ಅರ್ಜಿದಾರರಿಗೆ ಕಾಲಲ್ಲಿ ಯಾವ ಯಾವ ಒಳಸಾಧನಗಳನ್ನು ಅಳವಡಿಸಿದ್ದಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಮುಂದುವರೆದು, ಅದರ ಬಳಿ ನಮ್ಮ ಬಳಿ ದಾಖಲೆ ಇರುತ್ತವೆ ಎಂದು ನುಡಿಯುತ್ತಾರೆ. ನಾನು ಅರ್ಜಿದಾರರ ದೇಹಕ್ಕೆ ಒಟ್ಟು ಶೇ.29 ರಷ್ಟು ಶಂಗನ್ಯೂನ್ಯತೆ ಎಂದು ಪ್ರಮಾಣ ಪತ್ರ ನೀಡಿರುತ್ತೇನೆ. ಕೇಂದ್ರ ಸರಕಾರದ ಸಾಮಾಜಿಕ ನ್ಯಾಯ ಮತ್ತು ಎಂಪವರ್‌ಮೆಂಟ್ - 2018 ರ ನಿಯಮದ ಅಧಿಸೂಚನೆಯ ಪ್ರಕಾರ ಪ್ರಮಾಣ ಪತ್ರ ನೀಡಿರುತ್ತೇನೆ.



ಅರ್ಜಿದಾರನಿಗೆ ನಾನು ಶಸ್ತ್ರಚಿಕಿತ್ಸೆ ಮಾಡಿಲ್ಲ, ಆದ್ದರಿಂದ ಕಾಲಿಗೆ ಒಳಸಾಧನವನ್ನು ನಾನು ಹಾಕಿಲ್ಲವಾದ್ದರಿಂದ ನನಗೆ ನಿಪಿ-10 ರಂತೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ದಿನ ಅರ್ಜಿದಾರನು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಮತ್ತು ಹೊರರೋಗಿಯಾಗಿ ಚಿಕಿತ್ಸೆ

ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನು ಈಗ ಸಂಪೂರ್ಣವಾಗಿ ಗುಣಮುಖನಾಗಿದ್ದು, ಈಗ ಆತನಿಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಮುಂದುವರಿದ ಚಿಕಿತ್ಸೆಗಾಗಿ ರೂ.45,000/- ವರೆಗೆ ಖರ್ಚು ಬರುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕಾರಣ, ಆತನಿಗೆ ಪರಿಹಾರ ಸಿಗಲು ಸಹಕರಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1ನೇ ಎದ್ರುದಾರರ ಪರ ವಕೀಲರಿಂದ :-**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04–10–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ–8 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–9 ಎಂದು ಗುರುತಿಸಲಾಯಿತು. 23 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ 10 ರಿಂದ 32 ಎಂದು ಗುರುತಿಸಲಾಯಿತು. 15 ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ 33 ಎಂದು ಗುರುತಿಸಲಾಯಿತು. 3 ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–34 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಎಂ.ವಿ.ಸಿಃ 152/2023**

**ಪಿ.ಡಬ್ಲ್ಯುಃ 2**

**clubbed with MVC No.**109/2023

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04–10–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂ.ವಿ.ಸಿ.ನಂ.109/2023 ರಲ್ಲಿ ನಿಪಿ–1 ರಿಂದ 4 ಮತ್ತು ನಿಪಿ–6 ನ್ನು ಸದರಿ ಪ್ರಕರಣದಲ್ಲಿ ಅಳವಡಿಸಿಕೊಳ್ಳಬೇಕಾಗಿ ವಿನಂತಿ. ಮುಂದುವರಿದು, ಒಂದು ಗಾಯದ ಪ್ರಮಾಣ ಪತ್ರ,ಹಾಜರುಪಡಿಸಿದ್ದು, ಅದನ್ನು ನಿಪಿ–17 ಎಂದು ಗುರುತಿಸಲಾಯಿತು. 7 ವೈದ್ಯಕೀಯ ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–18 ರಿಂದ 24 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04-10-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿರುತ್ತದೆ. ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಲಾಯಿತು.

ಈ.ಎಸ್.ಐ. ಯೋಜನೆಯಡಿಯಲ್ಲಿ ಆಸ್ಪತ್ರೆಯ ವೆಚ್ಚವನ್ನು ನಾನು ಪ್ರಯೋಜನ ಪಡೆದುಕೊಂಡಿರುತ್ತೇನೆ. ಆದ್ದರಿಂದ ನಾನು ಡಿಸ್ಚಾರ್ಜ್ ಸಮ್ಮರಿ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಮುಂದುವರಿದು, 8 ವೈದ್ಯಕೀಯ ಔಷಧಿ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ 15 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-16 ಎಂದು ಗುರುತಿಸಲಾಯಿತು.ಮೆ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು,

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04-10-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-8 ಎಂದು ಗುರುತಿಸಲಾಯಿತು. 12 ವೈದ್ಯಕೀಯ ಔಷಧಿ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-9 ರಿಂದ 20 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-21 ಎಂದು ಗುರುತಿಸಲಾಯಿತು. 5 ವೈದ್ಯಕೀಯ ಔಷಧಿ ಚೀಟಿ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-22 ರಿಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಾನು ಸದರಿ ದಿನ ಚಲಾಯಿಸುತ್ತಿದ್ದ ವಾಹನ ನನ್ನ ಮಾಲ್ಕಿಯದ್ದಾಗಿರುತ್ತದೆ. ನನ್ನ ವಾಹನಕ್ಕೆ ಯಾವ ಕಂಪನಿಯ ವಿಮೆ ಇತ್ತು ಎಂದು ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನನಗೆ ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇರಲಿಲ್ಲ ಮತ್ತು ಡಿ.ಎಲ್. ಇರಲಿಲ್ಲ, ಆ ಕಾರಣಕ್ಕಾಗಿ ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸಾಕ್ಷಿ ರಾಯಲ್ ಎನ್‌ಫೀಲ್ಡ್ ವಾಹನಕ್ಕೆ ಹಾಫ್ ಹೆಲ್ಮೆಟ್

ಕೊಡುತ್ತಾರೆ, ನಾನು ಹಾಫ್ ಹೆಲ್ಮೆಟ್ ಧರಿಸಿದ್ದೆ ಎಂದು ನುಡಿಯುತ್ತಾರೆ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ತಡವಾಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು 12ನೇ ತರಗತಿಯವರೆಗೆ ಓದಿರುತ್ತೇನೆ. ಅಪಘಾತದ ಸಮಯದಲ್ಲಿ ನನಗೆ 25 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಶಾಲಾ ದಾಖಲಾತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆಯಾಗಿಲ್ಲ. ನಾನು ಇಂಜಿನಿಯರಿಂಗ್ ಪದವಿ ಮಾಡಿರುವುದಿಲ್ಲ. ನಾನು ಯಾವ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ.

ನಾನು ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿದ್ದೆ ಎಂದು ಬಾಯಿ ಮಾತಿನಲ್ಲಿ ಹೇಳುತ್ತಿದ್ದೇನೆ ಹೊರತುಪಡಿಸಿ, ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ. ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ಪುನಃ ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ ಮತ್ತು ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-21 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಮತ್ತು ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ವಕೀಲರಿಂದಃ-**

ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04–10–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿರುತ್ತದೆ. ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ–1



ರಿಂದ 8 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ–9 ಎಂದು ಗುರುತಿಸಲಾಯಿತು. 7 ವೈದ್ಯಕೀಯ ವೆಚ್ಚ ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–10 ರಿಂದ 16 ಎಂದು ಗುರುತಿಸಲಾಯಿತು. 4 ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–17 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಾನು ಸವಾರಿ ಮಾಡುತ್ತಿದ್ದ ವಾಹನವು ಕಿರಣ ನಾಯ್ಕ ಎನ್ನುವವರಿಗೆ ಸೇರಿದ್ದಾಗಿತ್ತು. ಅವರು ನನಗೆ ಸಂಬಂಧಿಯಲ್ಲ. ಆದರೆ, ಸದರಿ ಸಮಯದಲ್ಲಿ ಲಾಕ್ ಡೌನ್ ಆಗಿದ್ದು, ಯಾವುದೇ ವಾಹನ ಇಲ್ಲದ ಕಾರಣ ಅವರು ನನಗೆ ಮನೆಗೆ ಕರೆದುಕೊಂಡು ಬರುತ್ತಿದ್ದರು. ಸದರಿ ಕಿರಣ ನಾಯ್ಕ ರವರ ವಾಹನಕ್ಕೆ ವಿಮೆ ಮತ್ತು ಡಿ.ಎಲ್ ಇತ್ತು. ಆದರೆ, ಯಾವ ಕಂಪನಿಯ ವಿಮೆ ಎಂದು ನನಗೆ ಗೊತ್ತಿಲ್ಲ. ಸದರಿಯವರ ಡಿ.ಎಲ್. ಅವಧಿಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಕಿರಣ ನಾಯ್ಕ ರವರ

ವಾಹನಕ್ಕೆ ವಿಮೆ ಇರಲಿಲ್ಲ ಮತ್ತು ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ಪೋಸ್ಟ್ ಆಫೀಸ್ ಎದುರು ಆಗಿರುತ್ತದೆ, ಆಗ ಎಲ್ಲರು ಹೊರಗೆ ಬಂದಿದ್ದರು, ನಾನು 5ನೇ ತರಗತಿಯವರೆಗೆ ಓದಿರುತ್ತೇನೆ. ಸದರಿ ಕಿರಣ ನಾಯ್ಕ ಮತ್ತು ನಾನು ಅಂಚೆ ಕಚೇರಿಯಲ್ಲಿ ದಿನಗೂಲಿ ಕೆಲಸ ಮಾಡುತ್ತೇವೆ. ಅಪಘಾತವು ಕಿರಣ ನಾಯ್ಕನ ತಪ್ಪಿನಿಂದ ಆಗಿದ್ದರಿಂದ ತಕ್ಷಣ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ನಾನು ಟೈಲರಿಂಗ್ ತರಬೇತಿಯನ್ನು ಯಲ್ವಾಡಿಕವೂರು ಗ್ರಾಮ ಪಂಚಾಯತ್ ನಲ್ಲಿ ಪಡೆದಿರುತ್ತೇನೆ. ಅದರ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ, ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಪೊಲೀಸರಿಗೆ ದೂರು ನೀಡಿದ ಪಿರ್ಯಾದಿಯಲ್ಲಿ ಪೋಸ್ಟ್ ಆಫೀಸಿನಲ್ಲಿ ಸ್ವೀಪರ್ ಕೆಲಸ ಮಾಡುತ್ತೇನೆ ಎಂದು ಮಾತ್ರ ಬರೆಯಲಾಗಿದೆ ಎಂದರೆ ಸರಿ. ಟೈಲರಿಂಗ್ ಮತ್ತು ದಿನಗೂಲಿ ಕೆಲಸದಿಂದ ರೂ.22,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ+



ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ, ನಾನು ಹೇಳಿದಷ್ಟು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನಕ್ಕೆ ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ವಕೀಲರಿಂದಃ-**

1ನೇ ಎದ್ರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

ಮೆಂಬರ್  ಎಡಿಶನಲ್ ಎಂಎಸಿಟಿ ಮತ್ತು
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04-10-2024

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ, ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಅದನ್ನು ನಿಪಿ-46 ಎಂದು ಗುರುತಿಸಲಾಯಿತು. ಐದು ಪುಟಗಳನ್ನು ಹೊಂದಿರುವ ಒಂದು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದೆ. ನಿಪಿ-22 ರ ದಾಖಲೆಯು ಕ್ರೆಡಿಟ್ ಬಿಲ್ ಆಗಿದ್ದು, ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ-22 ಎಂದು ಗುರುತಿಸಲಾಗಿತ್ತು. ಈಗ ಹಾಜರುಪಡಿಸಿದ ದಾಖಲೆಗಳು ಕ್ಯಾಶ್ ಬಿಲ್ ಆಗಿದ್ದು, ಅವುಗಳನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-47 ಎಂದು ಗುರುತಿಸಲಾಯಿತು. ಒಂದು ಜೆರಾಕ್ಸ್ ಮಾಡಿದ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದು ಅದನ್ನು ನಿಪಿ-48 ಎಂದು ಗುರುತಿಸಲಾಯಿತು.

- 6 - ಎಂ.ವಿ.ಸಿಃ 417/2023
ಪಿ.ಡಬ್ಲ್ಯುಃ 1

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತವಾಗಿ ಅರ್ಧ ಗಂಟೆಯ ನಂತರ ನನಗೆ ಗೊತ್ತಾಗಿರುತ್ತದೆ. ಅಪಘಾತವನ್ನು ನಾನು ನೋಡಿಲ್ಲವಾದ್ದರಿಂದ ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಪೊಲೀಸರಿಗೆ ದೂರನ್ನು ಅದೇ ದಿನ ರಾತ್ರಿ ಭಟ್ಕಳ ಶಹರು ಪೊಲೀಸ್ ಠಾಣೆಗೆ ಹೋಗಿ ನಾನೇ ನೀಡಿರುತ್ತೇನೆ. ಅಪಘಾತದ ಸಮಯದಲ್ಲಿ ಅರ್ಜಿದಾರ ನನ್ನ 2ನೇ ಮಗ ಅಂಜುಮಾನ ಕಾಲೇಜಿನಲ್ಲಿ ಓದುತ್ತಿದ್ದನು . ನಾನು 7ನೇ ತರಗತಿಯವರೆಗೆ ಓದಿರುತ್ತೇನೆ. ಅರ್ಜಿದಾರ ನನ್ನ ಮಗ ಕಾಲೇಜು ಹಾಸ್ಟೆಲಿನಲ್ಲಿ ಓದುತ್ತಿದ್ದನು. ಅರ್ಜಿದಾರನು ಬಿಡುವಿನ ಸಮಯದಲ್ಲಿ ಭಟ್ಕಳದಲ್ಲಿರುವ ನನ್ನ ತಂಗಿಯ ಬಟ್ಟೆ ಅಂಗಡಿಯಲ್ಲಿ ಕೆಲಸ

ಮಾಡುತ್ತಿದ್ದನು. ಸಣ್ಣ ಮಕ್ಕಳಿಗೆ ಕೆಲಸಕ್ಕೆ ಕಳುಹಿಸುವುದು ಅಪರಾಧ ಎಂದು ನನಗೆ ಗೊತ್ತಿರುತ್ತದೆ. ಅಪಘಾತವು ಅರ್ಜಿದಾರ ಬರುವ ಮತ್ತು ಹೋಗುವ ವಾಹನಗಳನ್ನು ನೋಡದೇ ಹಟ್ಟಾತ್ತಾಗಿ ರಸ್ತೆ ದಾಟಿದ್ದರಿಂದ ನನ್ನ ಮಗ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ, ಪರಿಹಾರ ಪಡೆಯುವ ಸಲುವಾಗಿ ತಡವಾಗಿ ಸುಳ್ಳು ದೂರು ನೀಡಿ, ಸುಳ್ಳು ಪರಕರಣ ದಾಖಲಿಸಲಾಗಿದೆ ಎಂದರೆ ರಿಯಲ್ಲ. ಆಪಾದಿತ ವಾಹನದ ಚಾಲಕನಿಗೆ ಡಿ.ಎಲ್ ಇರಲಿಲ್ಲ. ಮತ್ತು ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಮಗನಿಗೆ ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ ಮತ್ತು ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ–47 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಾನು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಅರ್ಜಿದಾರನು ತಿಂಗಳಿಗೆ ರೂ.18,000/– ಆದಾಯ ಗಳಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ನೀಡಿದ ದೂರಿನಲ್ಲಿ ಅರ್ಜಿದಾರನು ಕೂಲಿ ಕೆಲಸ ಮಾಡುತ್ತಿದ್ದ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಅಪಘಾತವು ಅರ್ಜಿದಾರನ



ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ–**

1ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**



**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**
**ದಿನಾಂಕ: 04-10-2024**

**ಪಾಟೀ ಸವಾಲು: 1 ಮತ್ತು 2 ನೇ ಎದುರುದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ:-**

ಮೃತ ಶ್ರೀಧರ ನಾಯ್ಕ ಮತ್ತು ಎಂ.ವಿ.ಸಿ. ನಂ.387/2022 ರ 1ನೇ ಅರ್ಜಿದಾರನ ಮದುವೆ ಸನ್ 2011 ರಲ್ಲಿ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಮೃತ ಮತ್ತು 1ನೇ ಅರ್ಜಿದಾರರು ಅವರೇ ಮದುವೆ ಮಾಡಿಕೊಂಡು ನಮ್ಮ ಮನೆಗೆ

**- 7 - ಎಂ.ವಿ.ಸಿ. ನಂ.466/2022**
**ಪಿ.ಡಬ್ಲ್ಯು: 2**

ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ನನ್ನ ಮಗ ಮತ್ತು ಸದರಿ ಎಂ.ವಿ.ಸಿ. ನಂ.387/2022 ರ 1ನೇ ಅರ್ಜಿದಾರರು ಬೇರೆ ಜಾತಿಯವರು ಎಂದರೆ ಸರಿ. ಸಾಕ್ಷಿ ಮುಂದುವರಿದು, ಮೃತ ನನ್ನ ಮಗ 1ನೇ ಅರ್ಜಿದಾರಳು ಬೇರೆ ಜಾತಿಯವರಾಗಿದ್ದರಿಂದ ನಮ್ಮ ಮಠಕ್ಕೆ ಹೋಗಿ ಶುದ್ಧಾಚಾರ ಮಾಡಿಕೊಂಡು ಬಂದಿರುವುದಾಗಿ ನುಡಿಯುತ್ತಾರೆ.

ಮೃತನು ಮತ್ತು ಅರ್ಜಿದಾರಳು ಪ್ರೀತಿಸಿ ಮದುವೆ ಮಾಡಿಕೊಂಡಿರುವುದಕ್ಕೆ ನಮ್ಮ ವಿರೋಧವಿತ್ತು ಎಂದರೆ ಸರಿಯಲ್ಲ. ಸದರಿ ಮೃತ ನನ್ನ ಮಗ ಮತ್ತು 1ನೇ ಅರ್ಜಿದಾರಳು 6 ತಿಂಗಳ ವರೆಗೆ ಮಾತ್ರ ನಮ್ಮ ಮನೆಯಲ್ಲಿದ್ದರು ನಂತರ ಬೇರೆ ಕಡೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಅರ್ಜಿಯಲ್ಲಿ ಸದರಿ ಎಂ.ವಿ.ಸಿ. ನಂ.387/2022 ರ 1ನೇ ಅರ್ಜಿದಾರಳನ್ನು ನಮ್ಮ ಪ್ರಕರಣದಲ್ಲಿ ಅರ್ಜಿದಾರನನ್ನಾಗಿ ಮಾಡಿಲ್ಲ, ಬದಲಾಗಿ 1ನೇ ಎದುರುದಾರನನ್ನಾಗಿ ಮಾಡಲಾಗಿದೆ ಎಂದರೆ ಸರಿ. ಮೃತ ನನ್ನ ಮಗನಿಗೆ ಇಬ್ಬರು ಮಕ್ಕಳು, ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇರುತ್ತದೆ. ನಮ್ಮ ಪ್ರಕರಣದಲ್ಲಿ ಅರ್ಜಿದಾರಳನ್ನು ಮತ್ತು ಒಂದು ಗಂಡು ಮಗುವನ್ನು ಮಾತ್ರ ಎದುರುದಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿ.

ಮೃತನ ಅಂತ್ಯ ಸಂಸ್ಕಾರವನ್ನು ನಾವು ಮಾಡಿಲ್ಲ, ಬದಲಾಗಿ 1ನೇ ಎದುರುದಾರರು ಮತ್ತು ಊರಿನವರು ಸೇರಿಕೊಂಡು ಮಾಡಿದ್ದಾರೆ ಎಂದರೆ ಸರಿಯಲ್ಲ, ನನಗೆ ಕೃಷಿ, ತೋಟ, ಗದ್ದೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾವು ಮೃತನ ಆದಾಯದ ಮೇಲೆ ಅವಂಬಿತರಾಗಿಲ್ಲ ಎಂದರೆ ಸರಿಯಲ್ಲ. ಮೃತನ ಅಂತ್ಯಕ್ರಿಯೆಗೆ ನಾವು ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್. ವಕೀಲರಿಂದಃ-**

ಮೃತನು ಅಪಘಾತವಾಗುವ ದಿನದಂದು ನಮ್ಮೊಂದಿಗೆ ವಾಸಿಸುತ್ತಿದ್ದ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನನ್ನ 3ನೇ ಮಗ ಚಿದಾನಂದ ಎನ್ನುವವನು ತನ್ನ ಸಣ್ಣವಯಸ್ಸಿನಲ್ಲಿಯೇ ಅಂದರೆ 9ನೇ ತರಗತಿಯಲ್ಲಿ ಓದುತ್ತಿದ್ದಾಗ ಮೃತನಾಗಿರುತ್ತಾನೆ. ನಿಪಿ-18 ವಂಶ ವೃಕ್ಷ ದಾಖಲೆಯಲ್ಲಿ ಚಿದಾನಂದ ನನ್ನ 3ನೇ ಮಗನ

ಹೆಸರು ತೋರಿಸಲಾಗಿದೆ ಎಂದರೆ ಸರಿ. ನಾವು ಕೂಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ನಾವು ಕೂಲಿ ಕೆಲಸ ಮಾಡುತ್ತಿರುವುದರಿಂದ ನಾವು ಮೃತನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಮೃತನು ಯಾವತ್ತೂ ನಮ್ಮೊಂದಿಗೆ ವಾಸಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಮೃತನಿಗೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ, ಮತ್ತು ನಾವು ಹೇಳಿದಷ್ಟು ಕೈಯಾಕರ್ಮಕ್ಕೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ, 3ನೇ ಅರ್ಜಿದಾರ ಅಂಗವಿಕಲನಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಆತನು ದುಡಿಯಲು ಸಾಮರ್ಥ್ಯ ಹೊಂದಿದ್ದು, ಮೃತನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-17 ಅಂಗವಿಕಲ ಗುರುತಿನ ಚೀಟಿಯನ್ನು ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ಆಪಾದಿತ ಕಾರಿಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರು ವಿಮಾ ಪಾಲಿಸಿ ಪಾವತಿ ಮಾಡಲು 4ನೇ ಎದುರುದಾರನಿಗೆ ನೀಡಿದ ಚೆಕ್ ಅಮಾನ್ಯವಾಗಿತ್ತು ಎಂದರೆ ಗೊತ್ತಿಲ್ಲ. ಚೆಕ್ ಅಮಾನ್ಯವಾಗಿದ್ದರಿಂದ 4ನೇ ಎದುರುದಾರನು, 3ನೇ ಎದುರುದಾರನಿಗೆ ಕೊಟ್ಟ ವಿಮಾ ಪಾಲಿಸಿಯನ್ನು ರದ್ದುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಅಪಘಾತವಾದ ಸಮಯ ಮತ್ತು ದಿನಾಂಕದಂದು ಆಪಾದಿತ ಕಾರಿಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 4ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಮೃತನಿಗೆ ಸ್ವಂತ ಆಟೋ ರಿಕ್ಷಾ ಇತ್ತು. ಮತ್ತು ಯಾರಾದರೂ ಕಾರು ಚಾಲನೆಗೆ ಕರಸಿದರೆ ಅದಕ್ಕೂ ಹೋಗುತ್ತಿದ್ದರು. ಮೃತನಿಗೆ ರಿಕ್ಷಾ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೃತನಿಗೆ ಯಾವುದೇ ಸ್ವಂತ ರಿಕ್ಷಾ ಇರಲಿಲ್ಲ, ಅದರಿಂದ ಅವರು ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 3 ನೇ ಎದುರುದಾರರ ಪರ ವಕೀಲರಿಂದಃ–**

3 ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯು಼ 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 04-10-2024

<u>ಪಾಟೀ ಸವಾಲುಃ</u> 2 ನೇ ಎದುರುದಾರರ ಪರ ಶ್ರೀ ವೈ.ವಿ.ಎಸ್. ವಕೀಲರಿಂದ.

ಎಂ.ವಿ.ಸಿ. ನಂ.466/2022 ರ 1ನೇ ಅರ್ಜಿದಾರ ಸುಬ್ಬಯ್ಯ ದುರ್ಗಪ್ಪ ನಾಯ್ಕ ರವರು ನನ್ನ ಮಾವ. ಸದರಿ ಪ್ರಕರಣದ 2ನೇ ಅರ್ಜಿದಾರ ನನ್ನ ಅತ್ತೆ. ಸುಬ್ಬಯ್ಯ ದುರ್ಗಪ್ಪ ನಾಯ್ಕ ಮತ್ತು ನನ್ನ ಅತ್ತೆ ಮಾದೇವಿಯವರಿಗೆ ಒಟ್ಟು ಮೂವರು ಗಂಡು ಮಕ್ಕಳು. ಅವರು 1) ನನ್ನ ಗಂಡ, 2) ಗಂಗಾಧರ ಮತ್ತು 3) ಮೂರನೇ ಮಗನ ಹೆಸರು ನನಗೆ ಗೊತ್ತಿಲ್ಲ. ಅವರು ನನ್ನ ಮದುವೆಯ ಮೊದಲು ಮೃತರಾಗಿರುತ್ತಾರೆ. ಚಿದಾನಂದ ಸುಬ್ಬಯ್ಯ ನಾಯ್ಕ ರವರು ನನ್ನ ಗಂಡನ ತಮ್ಮ. ನಿಪಿ-7 ಪಡಿತರ ಚೀಟಿಯು ನನ್ನ ಕುಟುಂಬಕ್ಕೆ ಸಂಬಂಧಿಸಿರುತ್ತದೆ, ಅದನ್ನು ನಾನು ದಿ.14-02-2014 ರಂದು ಪಡೆದಿರುತ್ತೇನೆ. ನಿಪಿ-7 ನೀಡಿದ ದಿನದಿಂದ ಅಪಘಾತವಾಗುವ ಸಮಯದವರೆಗೆ ನಾನು ಮತ್ತು ನನ್ನ ಮಕ್ಕಳು ಮೃತನೊಂದಿಗೆ ಒಟ್ಟಾಗಿ ಕೂಡಿಕೊಂಡು ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ, ನಾನು ಮೃತನ ಆದಾಯದ ಮೇಲೆ ಅವಲಂಬನೆಯಾಗಿರಲಿಲ್ಲ ಎಂದರೆ ಸರಿಯಲ್ಲ.

ಮೃತನ ನನ್ನ ಗಂಡ 10 ನೇ ತರಗತಿಯವರೆಗೆ ಓದಿದ್ದರು. ಅಪಘಾತವಾದ ದಿನ ಇಷ್ಟೇ ವಯಸ್ಸಾಗಿತ್ತು ಎಂದು ತೋರಿಸಲು ಮೃತನ ಶಾಲಾ ದಾಖಲಾತಿಯು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಮೃತನು ನಿಪಿ-8 ರ ಆಧಾರ ಕಾರ್ಡಿನಲ್ಲಿ ತೋರಿಸಿದ ಜನುಮ ದಿನಾಂಕ ಸುಳ್ಳು ಇರುತ್ತದೆ, ಮೃತನು ಅದರ ಮೊದಲೇ ಜನಿಸಿದ್ದನು ಎಂದರೆ ಸರಿಯಲ್ಲ.

ಮೃತನಿಗೆ ಸ್ವಂತ ಆಟೋ ರಿಕ್ಷಾ ಇತ್ತು. ಮತ್ತು ಯಾರಾದರೂ ಕಾರು ಚಾಲನೆಗೆ ಕರಸಿದರೆ ಅದಕ್ಕೂ ಹೋಗುತ್ತಿದ್ದರು. ಮೃತನಿಗೆ ರಿಕ್ಷಾ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಮೃತನಿಗೆ ಯಾವುದೇ ಸ್ವಂತ ರಿಕ್ಷಾ ಇರಲಿಲ್ಲ, ಅದರಿಂದ ಅವರು ತಿಂಗಳಿಗೆ ರೂ.30,000/- ಆದಾಯ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತನಿಗೆ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಮೃತನ ಕೈಯಾಕ್ರಮಗಳನ್ನು ಮಾಡಲು ಹೇಳಿದಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸಾಕ್ಷಿ ಎಂ.ವಿ.ಸಿ. ನಂ.466/2022 ರ ಅರ್ಜಿದಾರರು ನನ್ನ ಮತ್ತು ನನ್ನ ಗಂಡನ

ಜೊತೆ ಜಗಳ ಮಾಡಿದ್ದರಿಂದ ನಾವು ಹೊರಗಡೆ ವಾಸ ಮಾಡುತ್ತಿದ್ದರು. ನನ್ನ ಗಂಡ ಮೃತ ಪಟ್ಟಾಗ, ಸದರಿ ಪ್ರಕರಣದ ಅರ್ಜಿದಾರರು ಮೃತನ ಯಾವುದೇ ಕ್ರಿಯಾ ಕ್ರಮಗಳನ್ನು ಮಾಡದೇ ಮೃತ ದೇಹವನ್ನು ತೆಗೆದುಕೊಂಡು ಹೋಗಲು ನಿರಾಕರಿಸಿದ್ದರು. ಆದ್ದರಿಂದ ನನ್ನ ತಂದೆ ಮತ್ತು ಊರಿನವರು ಸೇರಿಕೊಂಡು ಮೃತನ ಕ್ರಿಯಾಕ್ರಮಗಳನ್ನು ಮಾಡಿದ್ದಾರೆ ಎಂದು ಹೇಳುತ್ತಾರೆ. ಅಪಘಾತವು ಕಾರು ಚಾಲಕನ ತಪ್ಪಿನಿಂದ ಆಗಿರುವುದಿಲ್ಲ. ಬದಲಾಗಿ ಮೃತ ನನ್ನ ಗಂಡ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿ, ನಿಶ್ಕಾಳಜಿತನದಿಂದ ತಾನೇ ಅಪಘಾತಪಡಿಸಿಕೊಂಡು ಗಾಯಗೊಂಡು ತನ್ನ ತಪ್ಪಿನಿಂದಲೇ ಮೃತಹೊಂದಿದ್ದಾನೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ಆಪಾದಿತ ಕಾರಿಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರು ವಿಮಾ ಪಾಲಿಸಿ ಪಾವತಿ ಮಾಡಲು 2ನೇ ಎದುರುದಾರನಿಗೆ ನೀಡಿದ ಚೆಕ್ ಅಮಾನ್ಯವಾಗಿತ್ತು ಎಂದರೆ ಗೊತ್ತಿಲ್ಲ. ಚೆಕ್ ಅಮಾನ್ಯವಾಗಿದ್ದರಿಂದ 2ನೇ ಎದುರುದಾರನು, 1ನೇ ಎದುರುದಾರನಿಗೆ ಕೊಟ್ಟ ವಿಮಾ ಪಾಲಿಸಿಯನ್ನು ರದ್ದುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಅಪಘಾತವಾದ ಸಮಯ ಮತ್ತು ದಿನಾಂಕದಂದು ಆಪಾದಿತ ಕಾರಿಗೆ ವಿಮಾ ಪಾಲಿಸಿ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ವಕೀಲರಿಂದಃ–**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 04–10–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಿ.ಜೆ.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಗಾಯದ ಪ್ರಮಾಣ ಪತ್ರ,ಐ.ಎಂ.ವಿ. ವರದಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 5 ಎಂದು ಗುರುತಿಸಲಾಯಿತು. ಡಿಸ್ಚಾರ್ಜ್ ಸಮ್ಮರಿಯನ್ನು ಮತ್ತು ರಕ್ತ ಪರೀಕ್ಷೆ ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು. 22 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಸಿಡಿದ್ದು, ಅವುಗಳನ್ನು ನಿಪಿ–8 ರಿಂದ 29 ಎಂದು ಗುರುತಿಸಲಾಯಿತು. ವೈದ್ಯಕೀಯ ಔಷಧಿ ಚೀಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–30 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ಅಪಘಾತವಾದ ತಕ್ಷಣ ನನ್ನನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು ಅರ್ಧ ಗಂಟೆಯಿಂದ ಒಂದು ಗಂಟೆಯವರೆಗೆ ಇದ್ದೆನು. ಆಗ ಪೊಲೀಸರು ಅಲ್ಲಿಗೆ ಬಂದಿದ್ದರು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ನನ್ನೊಂದಿಗೆ ಇದ್ದ ಕೃಷ್ಣ ನಾಯ್ಕ ಎನ್ನುವವರ ಬಳಿ ವಾಹನದ ನಂಬರನ್ನು ಕೇಳಿಕೊಂಡು ಹೋಗಿರುತ್ತಾರೆ. ಗಜಾನನ ಗೋವಿಂದ ಮೊಗೇರ ನನ್ನ ಅಕ್ಕನ ಗಂಡನಾಗಬೇಕು. ಸದರಿಯವರು ಅಪಘಾತವನ್ನು ಗಜಾನನ ಗೋವಿಂದ ಮೊಗೇರ ರವರು ನೋಡಿರುವುದಿಲ್ಲ. ಮೋಟಾರು ಬೈಕ್ ಚಾಲಕ ವೇಗವಾಗಿ ಬಂದು ನಮ್ಮ

ವಾಹನಕ್ಕೆ ಢಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾಹನಗಳನ್ನು ಬರುವುದು ನೋಡದೇ ರಸ್ತೆ ದಾಟುತ್ತಿದ್ದಾಗ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ತಕ್ಷಣ ದೂರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನನ್ನ ಭಾವ ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ನಾನು ಒಳರೋಗಿಯಾಗಿ ಆಸ್ಪತ್ರೆಗೆ ಸೇರಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಬೋಟಿನಲ್ಲಿ ಮೀನುಗಾರಿಕೆ ಕೆಲಸ ಮಾಡಿ, ತಿಂಗಳಿಗೆ ರೂ.25,000/-ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ, ಮತ್ತು ಅದಕ್ಕಾಗಿ ಒಂದು ವರ್ಷ ವಿಶ್ರಾಂತಿ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೀನುಗಾರಿಕೆಯ ಗುರುತಿನ ಚೀಟಿ ನನ್ನ ಬಳಿ ಇರುತ್ತದೆ. ಅದನ್ನು ನನ್ನ ವಕೀಲರು ಹಾಜರುಪಡಿಸಲು ತಿಳಿಸಿರುವುದಿಲ್ಲ. ನನ್ನ ಬಳಿ ಯಾವುದೇ ಗುರುತಿನ ಚೀಟಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಐದನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ, ಆದರೆ ಬರೆಯಲು ಬರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ 2ನೇ ಪುಟದ ಕೊನೆಯ ಪ್ಯಾರಾದಲ್ಲಿ 1ನೇ ಎದುರುದಾರನು ದಿ.15-02-2019 ರಂದು 3ನೇ ಎದುರುದಾರನ ಕಂಪನಿಯಲ್ಲಿ ತನ್ನ ವಾಹನವನ್ನು ವಿಮೆ ಮಾಡಿಸಿದ್ದಾರೆ ಎಂದು ಮತ್ತು ಅದು ಚಾಲ್ತಿಯಲ್ಲಿದೆ ಎಂದು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ವಾಹನಕ್ಕೆ ಮೇಲೆ ಹೇಳಿದ ದಿನದಂದು ವಿಮೆ ಇತ್ತು ಎಂದು ಅದರ ವಿಮೆ ನಂಬರು ಸಹಿತ ನಮ್ಮ ವಕೀಲರು ನನಗೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನಕ್ಕೆ ಅಪಘಾತದ ದಿನ ಮತ್ತು ಸಮಯದಂದು ಕಾನೂನು ಬದ್ಧವಾದ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಮತ್ತು ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 3ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು

ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರರನ್ನು ಅನಾವಶ್ಯಕವಾಗಿ ಪಕ್ಷಗಾರನನ್ನಾಗಿ ಮಾಡಿದ್ದರಿಂದ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದ.**

ನಾನು 2ನೇ ಎದುರುದಾರನಿಂದ ಯಾವುದೇ ಪರಿಹಾರ ಕೋರಿಲ್ಲ ಎಂದರೆ ಸರಿಯಲ್ಲ. ಆಪಾದಿತ ವಾಹನವು 2ನೇ ಎದುರುದಾರನಿಂದ ಯಾವತ್ತೂ ವಿಮೆ ಪಾಲಿಸಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 04–10–2024

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ಸದರಿ ದಿನ ನಾನು ಸವಾರಿ ಮಾಡುತ್ತಿದ್ದ ವಾಹನವು ನನ್ನ ತಂದೆ ಮುಸ್ತಾಖ್ ಅಹಮ್ಮದ್ ಅವರಿಗೆ ಸೇರಿದ್ದು ಆಗಿರುತ್ತದೆ. ಸದರಿ ದಿನ ನಾವು ನಸ್ತರ್ ಬೀಚಿನಿಂದ ಮನೆಗೆ ಹೋಗುತ್ತಿದ್ದೆವು. ಸದರಿ ದಿನ ನಾವು ಒಂದೇ ವಾಹನದಲ್ಲಿ ನಾನು, ನನ್ನ ಗಂಡ, ಮತ್ತು ನನ್ನ ಗಂಡನ ತಂಗಿ ರಮೀದಾ ಪ್ರಯಾಣಿಸುತ್ತಿದ್ದೆವು. ಸದರಿ ಮೋಟಾರು ಸೈಕಲನ್ನು ನನ್ನ ಗಂಡ ಹಸನ್ ಚಲಾಯಿಸುತ್ತಿದ್ದರು. ನಾನು 12ನೇ ತರಗತಿಯವರೆಗೆ ಓದಿರುತ್ತೇನೆ. ಒಂದೇ ವಾಹನದಲ್ಲಿ ಮೂವರು ಪ್ರಯಾಣಿಸಲು ಕಾನೂನು ಪ್ರಕಾರ ತಪ್ಪಾಗುತ್ತದೆ ಎಂದು ನನಗೆ ಗೊತ್ತಿರುತ್ತದೆ. ದೂರನ್ನು ನನ್ನ ಗಂಡನ ತಂಗಿ ರಮೀದಾ ನೀಡಿರುತ್ತಾರೆ. ಅಪಘಾವಾದ ಸ್ಥಳದಲ್ಲಿ ಸಾಕಷ್ಟು ಜನರು ಸೇರಿದ್ದರು. ಮೊದಲು ನಮ್ಮನ್ನು ಅಂದರೆ ಮೂವರನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಸುಮಾರು ಒಂದು ಗಂಟೆಯ ಕಾಲ ಇದ್ದೆವು. ನಮಗೆ ಸದರಿ ಆಸ್ಪತ್ರೆಯಲ್ಲಿ ಯಾವ ವೈದ್ಯರು ಚಿಕಿತ್ಸೆ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿದ್ದಾಗ ನನಗೆ ಪ್ರಜ್ಞೆ ಇತ್ತು. ಆಸ್ಪತ್ರೆಗೆ ನಮ್ಮ ಧರ್ಮದ ಜನರು ಮತ್ತು ಅಪಘಾತ ಸ್ಥಳದಲ್ಲಿದ್ದ ಜನರು ಬಂದಿದ್ದರು. ಅಪಘಾತ ಹೇಗೆ ಆಯಿತು ಎಂದು ಆಸ್ಪತ್ರೆಗೆ ಬಂದರವರಿಗೆ ತಿಳಿಸಿರುತ್ತೇವೆ. ಆಸ್ಪತ್ರೆಗೆ ಪೊಲೀಸರು ಬಂದಿದ್ದರು, ಆದರೆ ಅವರು ನನಗೆ ಅಪಘಾತ ಹೇಗೆ ಆಯಿತು ಎಂದು ವಿಚಾರಿಸಿರುವುದಿಲ್ಲ. ನನ್ನ ಗಂಡ ಮತ್ತು ಅತ್ತಿಗೆಗೆ ಪೊಲೀಸರು ವಿಚಾರಣೆ ಮಾಡಿದ ಬಗ್ಗೆ ಗೊತ್ತಿಲ್ಲ. ಅಲ್ಲಿಂದ ನನ್ನನ್ನು ಭಟ್ಕಳದ ಲೈಫ್ ಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಲೈಫ್ ಕೇರ್ ಆಸ್ಪತ್ರೆಗೆ ಪೊಲೀಸರು ಬಂದಿರಲಿಲ್ಲ. ನಾನು ಅಪಘಾತವಾದ ಒಂದು ವಾರದ ಒಳಗೆ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ. ಲೈಫ್ ಕೇರ್ ಆಸ್ಪತ್ರೆಯಲ್ಲಿ ನನ್ನೊಂದಿಗೆ ನನ್ನ ಗಂಡ ಇದ್ದರು. ಕಾರು ಬರುವುದನ್ನು ನಾನ ನೋಡಿರುತ್ತೇನೆ. ಕಾರಿನ ಯಾವ ಭಾಗ ನಮ್ಮ ವಾಹನಕ್ಕೆ ಢಿಕ್ಕಿಪಡಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕಾರು ನಮ್ಮ ವಾಹನಕ್ಕೆ ಢಿಕ್ಕಿಪಡಿಸಿರುವುದಿಲ್ಲ

ಎಂದರೆ ಸರಿಯಲ್ಲ. ನಾವು ಒಂದೇ ವಾಹನದಲ್ಲಿ ಮೂವರು ಕುಳಿತುಕೊಂಡು ಪ್ರಯಾಣಿಸುತ್ತಿರುವುದರಿಂದ ನನ್ನ ಗಂಡ ವಾಹನದ ಮೇಲೆ ನಿಯಂತ್ರಣ ಕಳೆದುಕೊಂಡು ನಮಗೆ ನಾವೇ ಅಪಘಾತಪಡಿಸಿಕೊಂಡು ಗಾಯಗೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ ನಮ್ಮ ವಾಹನವನ್ನು ವೇಗವಾಗಿ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಡಿ.ಎಲ್ ಇರಲಿಲ್ಲ, ಮತ್ತು ನಮ್ಮ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದ್ದರಿಂದ ನಾವು ತಕ್ಷಣ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಕಾರಿನ ಚಾಲಕನ ವಿರುದ್ಧ ತಡವಾಗಿ ಸುಳ್ಳು ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಆಪಾದಿತ ಕಾರಿನ ನಂಬರು ನನಗೆ ಗೊತ್ತಿಲ್ಲ. ಆಪಾದಿತ ಕಾರಿನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸಾಕ್ಷಿ ಸದರಿ ಕಾರನ್ನು ಒಬ್ಬ ಮಹಿಳೆ ಕಾರು ಚಲಾಯಿಸುವುದನ್ನು ಕಲಿಯುತ್ತಿದ್ದರು ಎಂದು ನುಡಿಯುತ್ತಾರೆ.

ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ, ನಾನು ಟೈಲಂರಿಂಗ್ ಕೆಲಸದಿಂದ ತಿಂಗಳಿಗೆ ರೂ.18,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ, ಆಸ್ಪತ್ರೆಗೆ, ತಿರುಗಾಟಕ್ಕೆ, ಊಟ ತಿಂಡಿಗೆ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ಮತ್ತು ಯಾವುದೇ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ಪುನಃ ಪುನಃ ಆಸ್ಪತ್ರೆಗೆ ಖರ್ಚು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯು: 1**

**ಪಾಟೀ ಸವಾಲುಃ 1ನೇ ಎದುರುದಾರರ ಪರ ವಕೀಲರಿಂದ.**

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿರುತ್ತಾರೆ

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 01-10-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.714/2023 ಇದರ ನ್ಯಾಯಾಲಯದ ದಿನಚರಿ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಒಂದು ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 27–09–2024**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದಃ–**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–9 ಎಂದು ಗುರುತಿಸಲಾಯಿತು. 12 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–10 ರಿಂದ 21 ಎಂದು ಗುರುತಿಸಲಾಯಿತು. ಐದು ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–22 ಎಂದು ಗುರುತಿಸಲಾಯಿತು. ಒಂದು ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–23 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–24 ಎಂದು ಗುರುತಿಸಲಾಯಿತು. 12 ವೈದ್ಯಕೀಯ ವೆಚ್ಚ ರಶೀಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–25 ರಿಂದ 36 ಎಂದು ಗುರುತಿಸಲಾಯಿತು. ಮೂರು ವೈದ್ಯಕೀಯ ಔಷಧಿ ಚೀಟಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–37 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/–*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 27–09–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.752/2023 ಇದರ ನ್ಯಾಯಾಲಯದ ದಿನಚರಿ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 8 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ–9 ಎಂದು ಗುರುತಿಸಲಾಯಿತು. ಒಟ್ಟು 12 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–10 ರಿಂದ 21 ಎಂದು ಗುರುತಿಸಲಾಯಿತು. ಅದೇ ರೀತಿ ಐದು ಪುಟಗಳ ಒಂದು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–22 ಎಂದು ಗುರುತಿಸಲಾಯಿತು. ಅದೇ ರೀತಿ, ಇಪ್ಪತ್ತು ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–23 ರಿಂದ 42 ಎಂದು ಗುರುತಿಸಲಾಯಿತು. ಒಂದು ಸ್ಕ್ಯಾನಿಂಗ್ ವರದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–43 ಎಂದು ಗುರುತಿಸಲಾಯಿತು. ಮೂರು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ–44 ಎಂದು ಗುರುತಿಸಲಾಯಿತು. ಆಸ್ಪತ್ರೆಯ ಒಂದು ಓ.ಪಿ.ಡಿ. ಫೈಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–45 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಿ.ಡಬ್ಲ್ಯು: 1**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 27-09-2024**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಏನೂ ಇಲ್ಲ ಎಂದು ನುಡಿದಿರುತ್ತಾರೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯುಃ 1

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 27-09-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಲಾಯಿತು. ಶಿರಾಲಿ ಆಸ್ಪತ್ರೆಯ ಒಳರೋಗಿ ಚೀಟಿ, ಒಂದು ಸ್ಕ್ಯಾನಿಂಗ್ ರಶೀದಿ ಮತ್ತು ಅದರ ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ ನಿಪಿ-10 ಎಂದು ಗುರುತಿಸಲಾಯಿತು. ಒಂದು ಸಿ.ಟಿ. ಸ್ಕ್ಯಾನ್ ಮಾಡಿದ ವೆಚ್ಚದ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಎರಡು ಎಕ್ಸರೇ ಮತ್ತು ಎಂ.ಆರ್.ಐ. ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.ಹೆಚ್. ರವರ ಪರವಾಗಿ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ನಾನು ಟೆಂಪೋಗೆ ಮುರ್ಡೇಶ್ವರದಲ್ಲಿ ಹತ್ತಿರುತ್ತೇನೆ. ಸದರಿ ಟೆಂಪೊದಲ್ಲಿ ಅಂದಾಜು 25 ಪ್ರಯಾಣಿಕರು ಇದ್ದರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಟೆಂಪೋ ತುಂಬಿತ್ತು ಎಂದು ನುಡಿಯುತ್ತಾರೆ. ನಾನು ಟೆಂಪೋದ ಹಿಂದುಗಡೆ ಕುಳಿತಿದ್ದೆನು.



ಪಿ.ಡಬ್ಲ್ಯುಃ 1

ಆದ್ದರಿಂದ ಹಿಂದಿನಿಂದ ಬಸ್ ಬಂದಿರುವುದನ್ನು ನಾನು ನೋಡಿರುವುದಿಲ್ಲ. ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ. ಬದಲಾಗಿ ನಾವು ಪ್ರಯಾಣಿಸುತ್ತಿದ್ದ ಟೆಂಪೋ ಚಾಲಕನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಾನು ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ-12 ಪ್ರಮಾಣ ಪತ್ರ ನಾನು ಕೆಲಸ ಮಾಡಲು ಹೋಗುತ್ತಿದ್ದ ಶಿರಾಜ್ ಎನ್ನುವ ಇಂಜಿನಿಯರ್ ರವರು ನೀಡಿರುತ್ತಾರೆ. ನಿ.ಪಿ.12 ಸುಳ್ಳು ಸೃಷ್ಠಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ನಾನುಕೂಲಿ ಕೆಲಸ ಮಾಡುತ್ತಿರಲಿಲ್ಲ, ತಿಂಗಳಿಗೆ ರೂ.15,000/- ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಿಂದ ನಾನು 6 ತಿಂಗಳವರೆಗೆ ವಿಶ್ರಾಂತಿಯಲ್ಲಿದ್ದೆ, ಈಗಲೂ ಸಹ ನನಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯ ಕುಂಟಿತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದಃ-**

ಟೆಂಪೋ ಚಾಲಕ ದಾರಿಯಲ್ಲಿ ನಿಂತ ಪ್ರಯಾಣಿಕರನ್ನು ತನ್ನ ಟೆಂಪೋದಲ್ಲಿ ಹತ್ತಿಸಿಕೊಂಡು ರಸ್ತೆಯಲ್ಲಿ ಟೆಂಪೋವನ್ನು ಓಡಿಸುತ್ತಿದ್ದಾಗ ಹಿಂದಿನಿಂದ ಬಸ್ ಬಂದು ಢಿಕ್ಕಿಪಡಿಸಿರುತ್ತದೆ. ಅಪಘಾತವು ಟೆಂಪೋ ನಿಂತಿದ್ದಾಗ ಆಗಿರುವುದಿಲ್ಲ. ನಾನು ಪ್ರಯಾಣಿಸಿದ ಟೆಂಪೋ ಚಾಲಕ ಹಿಂದುಗಡೆ ಬರುವ ವಾಹನಕ್ಕೆ ಯಾವುದೇ ಸೂಚನೆ ನೀಡದೇ, ಅಚಾನಕ್ಕಾಗಿ ನಿಲ್ಲಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ಟೆಂಪೋ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.



**<u>ಪಾಟೀ ಸವಾಲುಃ</u> 2 ನೇ ಎದುರುದಾರರ ಪರ ಶ್ರೀ ಎಂ.ಜೆ.ಎನ್. ವಕೀಲರಿಂದಃ-**

(ಈ ಹಂತದಲ್ಲಿ 2ನೇ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು,  ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್  ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಆರ್.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 27-09-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 2ನೇ ಎದ್ರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 2ನೇ ಎದುರುದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಸಂಸ್ಥೆಯವರು ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ ಹಾಜರುಪಡಿಸಿದ್ದು, ಒಂದು ವಿಮಾ ಪತ್ರವನ್ನು ಹಾಜರುಪಡಿಸಿದ್ದು, 1ನೇ ಎದುರುದಾರರಿಗೆ ನೀಡಿದ ಎರಡು ನೋಟಿಸಿನ ಪ್ರತಿ ಮತ್ತು ಒಂದು ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಆರ್.-3 ರಿಂದ 7 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು 2ನೇ ಎದ್ರುದಾರರ ವಿರುದ್ಧ ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ- 1ನೇ ಎದುರುದಾರರ ಪರ ಶ್ರೀ ವಿ.ಎಫ್.ಜಿ. ವಕೀಲರಿಂದಃ-**

ಪ್ರಕರಣದಲ್ಲಿ ಹೇಳಿರುವ ಆಟೋ ರಿಕ್ಷಾ ಹೊಸದಾಗಿತ್ತು ಎಂದರೆ ಸರಿ. ಹೊಸದಾಗಿ ಕೊಂಡುಕೊಳ್ಳುವ ಆಟೋ ರಿಕ್ಷಾಗಳಿಗೆ ನೋಂದಣಿಯೊಂದಿಗೆ ಪರ್ಮಿಟ್ ಸಹ ಇರುತ್ತದೆ ಎಂದರೆ ಸರಿಯಲ್ಲ. ಆಟೋ ರಿಕ್ಷಾಗೆ ನೋಂದಣಿ ಮತ್ತು ಪರ್ಮಿಟ್ ಇಲ್ಲ ಎಂದು ಖಾತರಿಪಡಿಸಿಕೊಳ್ಳಲು ನಮ್ಮ ಸಂಸ್ಥೆಯಿಂದ ತನಿಖಾ ತಂಡ ಆರ್.ಟಿ.ಓ. ಹೊನ್ನಾವರ ರವರ ಕಚೇರಿಗೆ ಭೇಟಿ ನೀಡಿರುತ್ತದೆ. ಸಾಕ್ಷಿ ಮುಂದುವರಿದು, ಈ ಪ್ರಕರಣದಲ್ಲಿ ನಾವು ಆರ್.ಟಿ.ಓ. ರವರನ್ನು ಸಾಕ್ಷಿ ಮಾಡುವವರಿದ್ದೇವೆ ಎಂದು ನುಡಿಯುತ್ತಾರೆ. ಆಟೋ

-4 - ಎಂವಿಸಿ 344/2023
**clubbed with MVC** 345/2023

ರಿಕ್ಷಾಗೆ ಕಾನೂನು ಬದ್ಧವಾದ ಎಲ್ಲಾ ದಾಖಲೆಗಳು ಇದರೂ ಸಹ, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾವೇ ಪರಿಹಾರ ಕೊಡಲು ಬಾಧ್ಯಸ್ಥರಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

ಸದರಿ ವಕೀಲರು, 1ನೇ ಎದುರುದಾರರ ಪರ ಶ್ರೀ ವಿ.ಎಫ್.ಜಿ. ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು಼ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 25-09-2024**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ,**

ಈದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ವೈದ್ಯರು ನೀಡಿದ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು, ನಿಪಿ-21 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಯು.ಎನ್.ಎನ್. ವಕೀಲರಿಂದಃ-**

1ನೇ ಎದುರುದಾರರ ಪರ ವಕೀಲರು ಹಾಜರಿದ್ದು, ತಮ್ಮ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ವಕೀಲರಿಂದಃ-**

2ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಸದರಿ ಪ್ರಕರಣದಲ್ಲಿ ಅವರು ತಕರಾರು ಅರ್ಜಿ ಸಲ್ಲಿಸಿರದ ಕಾರಣ, 2ನೇ ಅರ್ಜಿದಾರರ ಪರ ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಅರ್ಜಿಯಲ್ಲಿ ಹೇಳಿದಂತೆ ನಾನು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ ಮತ್ತು ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-7 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಓಮನ್ ನಲ್ಲಿ ಕೆಲಸ ಮಾಡಿ ತಿಂಗಳಿಗೆ ರೂ.40,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್

ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಚಿಕಿತ್ಸೆಗೆ ರೂ.50,000/- , ಊಟೋಪಚಾರಕ್ಕೆ ರೂ.7,000/-, ವಾಹನ ಬಾಡಿಗೆಗೆ ರೂ.3,000/- ಮತ್ತು ಮರುಚಿಕಿತ್ಸೆಗೆ ರೂ.20,000/- ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ತಿಂಗಳಿಗೆ ರೂ.3,000/- ವೆಚ್ಚ ಭರಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಿ ತಿಂಗಳಿಗೆ ರೂ.18,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಆದ್ದರಿಂದ ನನಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ವಾಹನ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಕೇಳಿದಂತೆ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

1ನೇ ಎದ್ರುದಾರ ಎಕ್ಸ್‌ಪಾರ್ಟಿಯಾಗಿದ್ದು, 2ನೇ ಎದ್ರುದಾರರ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

1ನೇ ಎದುರುದಾರರ ಪರ ವಕೀಲರು ಶ್ರೀ ಸಿ.ಡಿ.ಎನ್, ಶ್ರೀ ಎಂ.ಜಿ. ವಕೀಲರ ಪರವಾಗಿ ಹಾಜರಿದ್ದು, 2ನೇ ಎದುರುದಾರರ ಪರವಾಗಿ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 2**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 13-09-2024.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಿ.ಜೆ.ಎನ್. ವಕೀಲರಿಂದಃ-**

ಈ ದಿನ ನನ್ನ ಮುಂದುವರಿದ ಮುಖ್ಯವಿಚಾರಣೆಯಲ್ಲಿ ಒಂದು ವಂಶವೃಕ್ಷ ದೃಢೀಕರಣ ಪತ್ರ, ಒಂದು ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದು, ನಿ.ಪಿ-18 ಮತ್ತು 19 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1 ಮತ್ತು 2 ಮತ್ತು 4 ನೇ ಎದುರುದಾರರ ಪರ ವಕೀಲರಿಂದಃ-**

1 ಮತ್ತು 2 ಮತ್ತು 4 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 31-08-2024.

<u>ಪಾಟೀ ಸವಾಲುಃ</u> 2ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.ಹೆಚ್. ವಕೀಲರಿಂದ.

ಅಪಘಾತವಾಗುವ ಪೂರ್ವದಲ್ಲಿ ನಾನು ಕೆ.ಎಸ್.ಆರ್.ಟಿ.ಸಿ. ಬಸ್ ಬರುವುದನ್ನು ನೋಡಿರುತ್ತೇನೆ. ನಾನು ಸದರಿ ದಿನ ಟೆಂಪೋದಲ್ಲಿ ಮುಂದಿನ ಭಾಗದ ಸ್ಥಳದಲ್ಲಿ ನಿಂತಿದ್ದೆನು. ನಾನು ನಿಂತುಕೊಂಡಾಗ ನನ್ನ ಮುಖ ಭಟ್ಕಳದ ಕಡೆ ಇತ್ತು ಎಂದರೆ ಸಾಕ್ಷಿ ನಾನು ಹಿಂದುಗಡೆ ಮುಖ ಮಾಡಿ ನಿಂತುಕೊಂಡಿದ್ದೆನು ಎಂದು ನುಡಿಯುತ್ತಾರೆ. ನಾವು ಒಟ್ಟು 3-4 ಜನರು ಟೆಂಪೋದಲ್ಲಿ ನಿಂತುಕೊಂಡಿದ್ದೆವು. ಕೆ.ಎಸ್.ಆರ್.ಟಿ.ಸಿ. ಬಸ್ಸಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನಗೆ ಎಚ್ಚರ ತಪ್ಪಿದ್ದು, ಆಸ್ಪತ್ರೆಯಲ್ಲಿ ನನಗೆ ಜ್ಞಾನ ಬಂದಿರುತ್ತದೆ. ಭಟ್ಕಳದ ಸರಕಾರಿ ಆಸ್ಪತ್ರೆಯಿಂದ ಭಟ್ಕಳದ ಲೈಫ್ ಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು ಒಟ್ಟು 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹೇಳಿದಷ್ಟು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ, ಮತ್ತು ಮುಖ್ಯ ವಿಚಾರಣೆಯಲ್ಲಿ ಆಸ್ಪತ್ರೆಯಲ್ಲಿ ಖರ್ಚು ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಪೂರ್ವದಲ್ಲಿ ಟೈಲಂರಿಂಗ್ ಕೆಲಸ ಮಾಡುತ್ತಿದ್ದೆನು. ನಾನು ಟೈಲಂರಿಂಗ್ ಮತ್ತು ಕೂಲಿ ಕೆಲಸದಿಂದ ತಿಂಗಳಿಗೆ ರೂ.25,000/- ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಎಲ್ಲಾ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಆದಾಯದಲ್ಲಿ ನಷ್ಟವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಸಣ್ಣಪುಟ್ಟ ಗಾಯವಾಗಿದ್ದು, ಅವು ಈಗ ಕಡಿಮೆಯಾಗಿ ಹಿಂದಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ, ಕೆ.ಎಸ್.ಆರ್.ಟಿ.ಸಿ. ಬಸ್ಸಿನ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ.**

ಅಪಘಾತಕ್ಕೆ ಸಂಬಂಧಿಸಿದಂತೆ ಯಾರು ದೂರು ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು ಪ್ರಯಾಣಿಸುತ್ತಿದ್ದ ಟೆಂಪೋದ ನಂಬರು ಮತ್ತು ಮಾಲಿಕ ಮತ್ತು ಚಾಲಕನ ವಿವರ ನನಗೆ ಗೊತ್ತಿರುವುದಿಲ್ಲ. ಅಪಘಾತದ ಪೂರ್ವದಲ್ಲಿ ಟೆಂಪೋದ ಚಾಲಕ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ನಿಲ್ಲಿಸಿದ್ದನು. ನಾವು ಪ್ರಯಾಣಿಸುತ್ತಿದ್ದ ಟೆಂಪೋದ ಚಾಲಕ ಅಚಾನಕ್ಕಾಗಿ ಯಾವುದೇ ಸೂಚನೆ ನೀಡದೇ ವಾಹನವನ್ನು ರಸ್ತೆಯ ಮೇಲೆ ತೆಗೆದುಕೊಂಡು ಹೋದಾಗ ಅಪಘಾತವಾಗಿದೆ ಎಂದರೆ ಸರಿ. ಅಪಘಾತಕ್ಕೂ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 31-08-2024.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಂ.ಎಲ್.ಎನ್.ಹೆಚ್. ವಕೀಲರಿಂದ.**

ಅಪಘಾತದ ಸಮಯದಲ್ಲಿ ನಾನು ಮುರ್ಡೇಶ್ವರದಿಂದ ಭಟ್ಕಳಕ್ಕೆ ಪ್ರಯಾಣಿಸುತ್ತಿದ್ದೆನು. ಕೆ.ಎಸ್.ಆರ್.ಟಿ.ಸಿ. ಬಸ್ ನಮ್ಮ ಟೆಂಪೋದ ಹಿಂದುಗಡೆ ಬಂದು ಢಿಕ್ಕಿಪಡಿಸಿರುತ್ತದೆ. ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಢಿಕ್ಕಿಪಡಿಸಿದ ನಂತರ ನಾನು ನೋಡಿರುತ್ತೇನೆ. ಹಿಂದಿನಿಂದ ಢಿಕ್ಕಿಪಡಿಸಿರುವುದರಿಂದ ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ, ಬಸ್ ವೇಗವಾಗಿ ಬಂದು ಢಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಭಾರತ ಸರಕಾರದ ಅಂಚೆ ಇಲಾಖೆಯಲ್ಲಿ ಆರ್.ಡಿ. ಕಮಿಷನ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಅಪಘಾತವು ನಾನು ಕಚೇರಿಗೆ ಹೋಗುವ ಅವಧಿಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಕೆಲಸ ಮಾಡುವ ಅಂಚೆ ಇಲಾಖೆಯಿಂದ ನಾನು ಖರ್ಚು ಮಾಡಿದ ಆಸ್ಪತ್ರೆಯ ವೆಚ್ಚವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ



ಸರಕಾರದ ಯಾವುದೇ ಸವಲತ್ತಿನ ಪ್ರಮಾಣ ಪತ್ರ ಇರುವುದಿಲ್ಲ. ನಾನು ಆಸ್ಪತ್ರೆಗೆ ಖರ್ಚು ಮಾಡಿದ ಎಲ್ಲಾ ವೈದ್ಯಕೀಯ ವೆಚ್ಚವನ್ನು ನಾನು ಕೆಲಸ ಮಾಡುವ ಅಂಚೆ ಇಲಾಖೆಯವರು ಆಸ್ಪತ್ರೆಗೆ ತುಂಬಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವೈದ್ಯಕೀಯ ವೆಚ್ಚಗಳು ಸುಳ್ಳು ಇರುತ್ತವೆ, ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಅವುಗಳನ್ನು ಸುಳ್ಳು ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಏಜೆಂಟ್ ಕೆಲಸದೊಂದಿಗೆ ಕೂಲಿ ಮತ್ತು ಟೈಲರಿಂಗ್ ಕೆಲಸ ಮಾಡುತ್ತೇನೆ. ಏಜೆಂಟ್ ಕೆಲಸ ಅಂದರೆ, ಗ್ರಾಹಕರಿಂದ ಆರ್.ಡಿ. ಹಣ ಪಡೆಯುವುದು ಮಾಡುತ್ತೇನೆ, ಮತ್ತು ಉಳಿದ ಕೆಲಸಗಳನ್ನು ಬಿಡುವು ಸಿಕ್ಕಾಗ ಮಾಡುತ್ತೇನೆ. ಆರ್.ಡಿ. ಕಮಿಷನ್

ಏಜೆಂಟ್ ಕೆಲಸದಿಂದ ನನಗೆ ಎಷ್ಟು ಕಮಿಷನ್ ಬರುತ್ತದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೆ, ಆದರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಣ ಉಳಿತಾಯ ಮಾಡಿ ಯಾವುದೇ ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ. ನಾನು ತಿಂಗಳಿಗೆ ರೂ.30,000/– ಗಳಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ತಿಂಗಳಿಗೆ ರೂ.30,000/– ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಮಾರು ಒಂದು ವಾರ ಐ.ಸಿ.ಯು. ನಲ್ಲಿ ಮತ್ತು ಒಂದು ವಾರ ಜನರಲ್ ವಾರ್ಡಿನಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಅರ್ಜಿಯಲ್ಲಿ ಹೇಳಿದಂತೆ ನಾನು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ, ಈಗ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಕೆಲಸ ಮಾಡಲು ಬರುವುದಿಲ್ಲ, ನನ್ನ ಆದಾಯ ಕುಂಟಿತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟೈಲರಿಂಗ್ ಕೆಲಸ ಮಾಡುವ ಸಂಬಂಧ ಯಾವುದೇ ಪುಸ್ತಕವನ್ನು ನಾನು ಇಟ್ಟಿರುವುದಿಲ್ಲ. ನನಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವು ಈಗ ವಾಸಿಯಾಗಿರುತ್ತದೆ, ಆದ್ದರಿಂದ ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.



**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ.**

ಅರ್ಜಿ ದಾಖಲಿಸಲು ನಾನು ಮಾಹಿತಿ ನೀಡಿರುವುದಿಲ್ಲ, ಮಾಹಿತಿಯನ್ನು ನನ್ನ ಗಂಡ ನೀಡಿರುತ್ತಾರೆ. ಅರ್ಜಿಯಲ್ಲಿ ನಾನು ಏನು ಕೆಲಸ ಮಾಡುತ್ತೇನೆ ಎಂದು ಬರೆಯಲಾಗಿದೆ. ಅರ್ಜಿಯಲ್ಲಿ ಬರೆಸಿದ ಕೆಲಸವನ್ನು ಹೊರತುಪಡಿಸಿ, ಬೇರೆ ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ಕೂಲಿ ಕೆಲಸ ಮಾಡುತ್ತೇನೆ ಎಂದು ಹೇಳಿರುವುದಿಲ್ಲ, ಅದನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ತೆರ್ನಮಕ್ಕಿ ಚರ್ಚಿನ ಹತ್ತಿರದಿಂದ ಟೆಂಪೊದಲ್ಲಿ ಪ್ರಯಾಣಿಸಿರುತ್ತೇನೆ. ನಾನು ಟೆಂಪೋ ನೋಡಿರುತ್ತೇನೆ, ಆದರೆ ಅದರ ನಂಬರು ಹೇಳಲು ಬರುವುದಿಲ್ಲ, ಅದು ಯಾರಿಗೆ ಸೇರಿದ್ದು ಎಂದು ಹೇಳಲು ಬರುವುದಿಲ್ಲ. ಟೆಂಪೋದಲ್ಲಿ ನಾವು 4 ಜನರು ನಿಂತಿದ್ದೆವು, ಉಳಿದವರು ಎಲ್ಲಾ ಪ್ರಯಾಣಿಕರು ಕುಳಿತಿದ್ದರು. ಅಪಘಾತದ

ವಿಚಾರವಾಗಿ ಯಾರು ದೂರು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ ಮತ್ತು ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

ಅಪಘಾತವನ್ನು ನಾನು ನೋಡಿರುವುದಿಲ್ಲ, ಅದು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಟೆಂಪೋದ ಚಾಲಕ ನಡು ರಸ್ತೆಯಲ್ಲಿ ನಿಲ್ಲಿಸಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಬಸ್ಸಿಗೂ ಮತ್ತು ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಆರ್. ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 30-08-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ 1ನೇ ಎದುರುದಾರರ ಪರ ಶ್ರೀ ವಿ.ಎಫ್.ಜಿ. ವಕೀಲರಿಂದಃ-**

ಈ ಪ್ರಕರಣದಲ್ಲಿ ನಾನು 1ನೇ ಎದುರುದಾರನಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸ್ವಯಂ ದೃಢೀಕರಿಸಿದ ಒಂದು ಡಿ.ಎಲ್. ಮತ್ತು ವಿಮಾ ಪಾಲಿಸಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಆರ್-1 ಮತ್ತು 2 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರು ನನ್ನ ವಿರುದ್ಧ ದಾಖಲಿಸಿದ ಅರ್ಜಿಯನ್ನು ವಜಾ ಮಾಡಬೇಕಾಗಿ ವಿನಂತಿ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದಃ-**

ಸದರಿ ದಿನ ಆಪಾದಿತ ಆಟೋ ರಿಕ್ಷಾವನ್ನು ನಾನೇ ಚಲಾಯಿಸುತ್ತಿದ್ದೆನು. ಸದರಿ ನನ್ನ ಆಟೋದಲ್ಲಿ ನಾನು ಮತ್ತು ನನ್ನ ಮಗ ಇಬ್ಬರೇ ಇದ್ದೆವು. ನಾವು ಹೋಗುತ್ತಿದ್ದಾಗ, ಹೊನ್ನಾವರದ ಬ್ರಿಡ್ಜ್ ಹತ್ತಿರ ಇಬ್ಬರು ಕೈ ಸನ್ನೆ ಮಾಡಿದಕ್ಕೆ ನನ್ನ ಆಟೋ ನಿಲ್ಲಿಸಿದೆನು. ಮತ್ತು ನಾನು ಅವರನ್ನು ನನ್ನ ಆಟೋದಲ್ಲಿ ಕರೆದುಕೊಂಡು ಬಂದಿರುತ್ತೇನೆ. ನನ್ನ ಆಟೋ ಅನಂತವಾಡಿಯ ಹತ್ತಿರ ಇರುವಾಗ ರಸ್ತೆಯ ಇಳಿಜಾರು ಪ್ರದೇಶದಲ್ಲಿ ರಸ್ತೆಯ ಮಧ್ಯದಿಂದ ಯಾರೋ ದಾಟಿದಂತೆ ನನಗೆ ಭಾಸವಾಯಿತು. ಆಗ ನಾನು ಬ್ರೇಕ್ ಹಾಕಿದಾಗ ಆಟೋ ಪಲ್ಟಿಯಾಯಿತು.

ಮಂಕಿ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನಾನು ಹೊನ್ನಾವರ ನ್ಯಾಯಾಲಯದಲ್ಲಿ ತಪ್ಪು ಒಪ್ಪಿಕೊಂಡು ದಂಡ ತುಂಬಿದ್ದೇನೆ ಎಂದರೆ ಸರಿ. ನಾನು ವಾಹನವನ್ನು ನಿಶ್ಕಾಳಜಿತನದಿಂದ ಮತ್ತು ವೇಗದಿಂದ ಚಲಾಯಿಸಿದ್ದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ನಿ.ಆರ್‌-1 ನನ್ನ ಡಿ.ಎಲ್. ಇರುತ್ತದೆ. ನಿ.ಆರ್‌-2 ವಿಮಾ ಪತ್ರ ಇರುತ್ತದೆ, ಅವುಗಳ ಮೂಲ ದಾಖಲೆ ನನ್ನ ಬಳಿ ಇರುತ್ತದೆ, ಅವುಗಳನ್ನು ಮೂಲ ಪ್ರತಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು 6ನೇ ತರಗತಿಯವರೆಗೆ ಓದಿರುತ್ತೇನೆ. ಅಪಘಾತದ ದಿನದಿಂದ ಎರಡು ವರ್ಷಗಳ ಪೂರ್ವದಿಂದ ನಾನು ಆಟೋ ಚಲಾಯಿಸುತ್ತಿದ್ದೆನು. ಆಟೋಗೆ ಪರ್ಮಿಟ್ ಇರುವ ಬಗ್ಗೆ ನನಗೆ ಗೊತ್ತಿರುತ್ತದೆ. ಅಪಘಾತದ ಸಮಯದಲ್ಲಿ ನನ್ನ ಮಾಲ್ಕಿಯ ಆಟೋಗೆ ಪರ್ಮಿಟ್ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ಪರ್ಮಿಟ್ ಪರವಾನಿಗೆ ಪತ್ರ ಇಲ್ಲದೇ ಇದ್ದರಿಂದ ಅರ್ಜಿದಾರನಿಗೆ ನಾನು ಒಬ್ಬನೇ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಎಂವಿಸಿಃ 299/2022**

**Clubbed with MVC** 390/2022

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 23-08-2024.**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ ಮತ್ತು ಸಿ.ಸಿ.ನಂ.611/2021 ರ ನ್ಯಾಯಾಲಯದ ದಿನಚರಿ ಆದೇಶದ ಪ್ರತಿಯನ್ನು ಹಜಾರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಸ್ವಯಂ ಅಟೆಸ್ಟೆಡ್ ಮಾಡಿದ ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಎಂವಿಸಿಃ 345/2023

**clubbed with MVC** 344/2023

**ಪಿ.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 23-08-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ಎಂ.ವಿ.ಸಿ. ನಂ.344/2023 ರಲ್ಲಿ ಗುರುತಿಸಿಕೊಂಡ ನಿಪಿ-1, 2 ಮತ್ತು 4 ರಿಂದ 7 ನ್ನು ನನ್ನ ಪ್ರಕರಣಕ್ಕೆ ಅಳವಡಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಗಾಯದ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದನ್ನು ನಿಪಿ-31 ಎಂದು, ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-32 ಎಂದು ಗುರುತಿಸಲಾಯಿತು. 23 ವೈದ್ಯಕೀಯ ಔಷಧಿ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-33 ರಿಂದ 55 ಎಂದು ಗುರುತಿಸಲಾಯಿತು. ಒಂದು ಫೋಟೋ ಮತ್ತು ಸಿ.ಡಿ.ಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-56 ಮತ್ತು 57 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದಃ-**

ನಿಪಿ-34 ರಲ್ಲಿ ತೋರಿಸಿದ ಔಷಧಿ ವೆಚ್ಚ ರಶೀದಿಯಂತೆ, ಸಂಪೂರ್ಣ ಸುರಕ್ಷಾ ಯೋಜನೆಯಡಿಯಲ್ಲಿ ಸಹಾಯ ಪಡೆದು ಅದರ ಹಣ ಕಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ದಿನ ಆಟೋದಲ್ಲಿ ಬಂದಿರುತ್ತೇವೆ. ಸಾಕ್ಷಿ ಮುಂದುವರಿದು, ನಾವು ದಿನಾಲೂ ಟೆಂಪೊದಲ್ಲಿ ಬರುತ್ತೇವೆ, ಆದರೆ ಸದರಿ ದಿನ ಆಟೋ ಚಾಲಕ ನಮ್ಮನ್ನು ಆತನೇ ಕರೆದು ಹತ್ತಿಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ದಿನ ನಾನು ಹೊನ್ನಾವರಕ್ಕೆ ತಂಗಿನ ಎಣ್ಣೆ ಮಾಡಿಸಿಕೊಂಡು ಭಟ್ಕಳಕ್ಕೆ ಬರಲು ನಿಂತಿದ್ದೆನು. ಆಟೋದಲ್ಲಿ ನಾವು ಒಟ್ಟು ಮೂವರು ಹಿಂದುಗಡೆ ಕುಳಿತಿದ್ದೆವು. ಮುಂದೆ ಚಾಲಕ ಆಟೋ ಚಲಾಯಿಸುತ್ತಿದ್ದ. ಅಪಘಾತವಾದ ತಕ್ಷಣ ನಮ್ಮನ್ನು ಆರ್.ಎನ್.ಎಸ್. ಆಸ್ಪತ್ರೆಗೆ

ಕರೆದುಕೊಂಡು ಹೋಗಿರುತ್ತಾರೆ. ಅಪಘಾತದಿಂದ ನನಗೆ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿದಂತೆ ನಾನು ವೈಧ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಕೂಲಿಯಿಂದ ತಿಂಗಳಿಗೆ ಕೆಲಸ ಮಾಡಿ ತಿಂಗಳಿಗೆ ರೂ.15,000/– ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನನಗೆ ಕೆಲಸ ಮಾಡಲು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವುದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಮತ್ತು ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ಶ್ರೀ ವಕೀಲರಿಂದಃ–**

(ಈ ಹಂತದಲ್ಲಿ 1 ನೇ ಎದ್ರುದಾರರ ಪರ ಶ್ರೀ ವಿ.ಎಫ್.ಜಿ ವಕೀಲರ ಪರವಾಗಿ ಶ್ರೀ ಜಿ.ಎಂ.ಎನ್. ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 23–08–2024.**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಗಾಯದ ಪ್ರಮಾಣ ಪತ್ರ, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 7 ಎಂದು, ಅದೇ ರೀತಿ ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–8 ಎಂದು ಗುರುತಿಸಲಾಯಿತು. 20 ವೈದ್ಯಕೀಯ ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–9 ರಿಂದ 28 ಎಂದು ಗುರುತಿಸಲಾಯಿತು. ಮೂರು ಎಕ್ಸರೇಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–29 ಎಂದು, ಎರಡು ಫೋಟೊಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–30 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಿಪಿ–9 ರಿಂದ 11 ರಲ್ಲಿ ಹೇಳಿದ ಔಷಧಿ ರಶೀದಿಗಳಂತೆ ನಾನು ಆಸ್ಪತ್ರೆಯಲ್ಲಿ ಹಣ ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಬಿ.ಪಿ.ಎಲ್. ಮತ್ತು ಸಂಪೂರ್ಣ ಸುರಕ್ಷಾ ಯೋಜನೆಯಡಿಯಲ್ಲಿ ನಿಪಿ–9 ರಿಂದ 11 ರಂತೆ ಬಿಲ್ಲುಗಳು ಮನ್ನಾ ಆಗಿವೆ ಎಂದರೆ ಸರಿಯಲ್ಲ. ನಿಪಿ–15 ರಲ್ಲಿ ಪರಿಹಾರ ಹೆಚ್ಚು ಪಡೆಯುವ ಸಲುವಾಗಿ ಕೈಬರಹದಿಂದ ಔಷಧಿ ವೆಚ್ಚ ಬರೆಯಲಾಗಿದೆ ಎಂದರೆ ಸರಿಯಲ್ಲ.

ಸದರಿ ದಿನ ನಾನು ಹೊನ್ನಾವರದಿಂದ ಆಟೋದಲ್ಲಿ ಹೋಗುತ್ತಿದ್ದೆನು. ಅದರಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು. ಅದು ಪ್ರಯಾಣಿಕರ ಆಟೋ ಆಗಿತ್ತು. ಅದನ್ನು ನಾವು ಬಾಡಿಗೆ ಮಾಡಿಕೊಂಡು ಬಂದಿರಲಿಲ್ಲ. ಸದರಿ ಆಟೋ ಮುರ್ಡೇಶ್ವರದ್ದಾಗಿತ್ತು. ನಾನು ಪ್ರಯಾಣಿಸುತ್ತಿದ್ದ ಆಟೋಗೆ ಪರ್ಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಚಾಲಕನಿಗೆ ಚಾಲನಾ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಆಸ್ಪತ್ರೆಗೆ ಹಣ ಖರ್ಚು ಮಾಡಿಲ್ಲ, ಮತ್ತು ನಾನು ಹೇಳಿದಷ್ಟು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಆದಾಯದಲ್ಲಿ ಕುಂಟಿತವಾಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ಕೂಲಿ ಕೆಲಸದಿಂದ ತಿಂಗಳಿಗೆ ರೂ.15,000/- ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ತಿಂಗಳು ನಾನು ವಿಶ್ರಾಂತಿ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರ ಆಟೋ ಚಾಲಕ ತನ್ನ ಕಾರ್ಯವ್ಯಾಪ್ತಿ ಮೀರಿ, ಹೊನ್ನಾವರದಿಂದ ಭಟ್ಕಳಕ್ಕೆ ಪ್ರಯಾಣಿಸಿರುವುದರಿಂದ 2ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನ ಆಟೋಗೆ ಯಾವುದೇ ಪರ್ಮಿಟ್ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 17–08–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಇವುಗಳನ್ನು ಹಾಜರುಪಡಿಸಿದ್ದು, ಚಾರ್ಜ್ ಶೀಟ್ ಪ್ರತಿ, ಐ.ಎಂ.ವಿ. ವರದಿಯ ಪ್ರತಿ,

ಅವುಗಳನ್ನು ನಿಪಿ–1 ರಿಂದ ನಿಪಿ–4 ಎಂದು ಗುರುತಿಸಲಾಯಿತು. ಅದೇ ರೀತಿ ವಾಹನದ ಎಂ.ವಿ ರಿಪೋರ್ಟ್, ಗಾಯದ ಪ್ರಮಾಣ ಪತ್ರ, ಮತ್ತು ಅಂತಿಮ ವರದಿಯ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–5 ರಿಂದ ನಿಪಿ–7 ಎಂದು ಗುರುತಿಸಲಾಯಿತು. ಸಿ.ಸಿ.ನಂ.222/21 ಇದರ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ–8 ಎಂದು ಗುರುತಿಸಲಾಯಿತು. ನಾನು ಚಿಕಿತ್ಸೆ ಪಡೆದುಕೊಂಡ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ–9 ಎಂದು ಗುರುತಿಸಲಾಯಿತು. ಅದೇ ರೀತಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಒಟ್ಟು 7 ಮೆಡಿಕಲ್ ಹಾಗೂ ಇತರೆ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ–10 ರಿಂದ ನಿಪಿ–16 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ಹೊಂದಿಸಿ ನೋಡಿ, ಸರಿಯಿದ್ದ ಕಾರಣ ನಿಪಿ–7 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ–9 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ವಕೀಲರಿಂದ.**

ಅರ್ಜಿಯಲ್ಲಿ ಹೇಳಿದಂತೆ ನಾನು ವೈದ್ಯಕೀಯ ವೆಚ್ಚ ಮತ್ತು ಇತರ ವೆಚ್ಚ ಭರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ ಮತ್ತು ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-7 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ಓಮನ್ ನಲ್ಲಿ ಕೆಲಸ ಮಾಡಿ ತಿಂಗಳಿಗೆ ರೂ.40,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವದಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಮತ್ತು ವಾಹನಕ್ಕೆ ಫಿಟ್‌ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

ಚಿಕಿತ್ಸೆಗೆ ರೂ.50,000/- , ಊಟೋಪಚಾರಕ್ಕೆ ರೂ.7,000/-, ವಾಹನ ಬಾಡಿಗೆಗೆ ರೂ.3,000/- ಮತ್ತು ಮರುಚಿಕಿತ್ಸೆಗೆ ರೂ.20,000/- ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ತಿಂಗಳಿಗೆ ರೂ.3,000/- ವೆಚ್ಚ ಭರಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡಿ ತಿಂಗಳಿಗೆ ರೂ.18,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಆದ್ದರಿಂದ ನನಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ವಾಹನ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಕೇಳಿದಂತೆ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

1ನೇ ಎದ್ರುದಾರ ಎಕ್ಸ್‌ಪಾರ್ಟೆಯಾಗಿದ್ದು, 2ನೇ ಎದ್ರುದಾರರ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 13–08–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ಮತ್ತು 2 ಎಂದು ಗುರುತಿಸಲಾಯಿತು. ಅದೇ ರೀತಿ, 10 ವೈದ್ಯಕೀಯ ವೆಚ್ಚ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–3 ರಿಂದ 12 ಎಂದು ಗುರುತಿಸಲಾಯಿತು. ಅದೇ ರೀತಿ, ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಮತ್ತು ವೈದ್ಯರು ನೀಡಿದ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–13 ಮತ್ತು 14 ಎಂದು ಗುರುತಿಸಲಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ರಕ್ತ ಪರೀಕ್ಷೆಯ ವರದಿಯ ಪ್ರತಿಯನ್ನು, ಇ.ಸಿ.ಜಿ.ಯ ಪ್ರತಿ ಮತ್ತು ಒಂದು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–15 ರಿಂದ 19 ಎಂದು ಗುರುತಿಸಲಾಯಿತು. ಅದೇ ರೀತಿ ಜೆರಾಕ್ಸ್ ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–20 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 13-08-2024**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಖ್ಯ ವಿಚಾರಣೆಯಲ್ಲಿ ಘಟನಾ ಸ್ಥಳದ ಪಂಚನಾಮೆ, ನಕ್ಷೆ ಮತ್ತು ಪಿರ್ಯಾದಿಯವರ ಮರುಹೇಳಿಕೆಯ ಪ್ರತಿ ಮತ್ತು ಆಸ್ಪತ್ರೆಯವರು ಶವನೀಡಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-6 ರಿಂದ 9 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ರೇಶನ್ ಕಾರ್ಡು, ಚುನಾವಣಾ ಗುರುತಿನ ಚೀಟಿ, ಎರಡು ಆಧಾರ ಪ್ರತಿ ಮತ್ತು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-10 ರಿಂದ 14 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಎಂ.ಜಿ. ವಕೀಲರಿಂದ.**

ಅಪಘಾತ ಹೇಗೆ, ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪಿರ್ಯಾದಿ ನೀಡಿರುವುದಿಲ್ಲ. ದೂರು ಯಾರು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪಿರ್ಯಾದಿಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಮೃತನು ನನ್ನ ಗಂಡ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇವೆ. ಅವುಗಳನ್ನು ಹಾಜರುಪಡಿಸುತ್ತೇನೆ. ಪ್ರಕರಣದ ಸಂಬಂಧ ಎಲ್ಲಾ ದಾಖಲೆಗಳನ್ನು ಪೊಲೀಸ್ ಠಾಣೆಯಿಂದ ನಾನು ಪಡೆದುಕೊಂಡಿರುವುದಿಲ್ಲ. ಅಪಘಾತವು ಮೃತನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಪ್ರಕರಣದ ಸಂಬಂಧ, ಫೌಜುದಾರಿ ಪ್ರಕರಣದಲ್ಲಿ ನಾವು ನೀಡಿದ ದೂರಿನ ಆರೋಪಿ ದೋಷಮುಕ್ತನಾಗಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು 1ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅರ್ಜಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. 1ನೇ ಎದುರುದಾರನ ವಾಹನವು 2ನೇ ಎದುರುದಾರನ ವಿಮಾ ಪಾಲಿಸಿಗೆ ಒಳಪಟ್ಟಿರುವುದರಿಂದ 1ನೇ ಎದ್ರುದಾರನು ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣದ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.



**ಪಿ.ಡಬ್ಲ್ಯುಃ 1**

**<u>ಪಾಟೀ ಸವಾಲುಃ</u> 2ನೇ ಎದುರುದಾರರ ಪರ ಶ್ರೀ ಆರ್.ಐ.ಎನ್. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 21-06-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.**

**ದಿನಾಂಕ: 19–06–2024**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದ.**

ಸದರಿ ಅಪಘಾತದ ದಿನ ನಾನು ಮುರ್ಡೇಶ್ವರದಿಂದ ಭಟ್ಕಳಕ್ಕೆ ಬೈಕಿನಲ್ಲಿ ಬರುತ್ತಿದ್ದೆನು. ಸದರಿ ದಿನ ಬೈಕನ್ನು ನಾನೇ ಓಡಿಸುತ್ತಿದ್ದೆನು. ನನ್ನ ಬೈಕಿನ ಹಿಂಬದಿ ಸವಾರನಾಗಿ ರಾಘವೇಂದ್ರ ಜನಾರ್ಧನ ಮೊಗೇರ ರವರು ಕುಳಿತಿದ್ದರು. ನಾನು ಬರುತ್ತಿದ್ದ ರಸ್ತೆ ಉತ್ತರ–ದಕ್ಷಿಣವಾಗಿರುತ್ತದೆ ಎಂದರೆ ಸರಿ. ಆಪಾದಿತ ಕಾರು ನಮ್ಮ ಹಿಂಬದಿಯಿಂದ ಬರುತ್ತಿತ್ತು. ನಾನು ರಸ್ತೆಯ ಪೂರ್ವ ಬದಿಯಿಂದ ಬರುತ್ತಿದ್ದೆ, ಅದೇ ರೀತಿ ಕಾರು ಸಹ ನನ್ನ ಹಿಂದೆ ಅದೇ ದಿಕ್ಕಿನಲ್ಲಿ ಬರುತ್ತಿತ್ತು ಎಂದರೆ ಸಾಕ್ಷಿ, ನಾವು ಪಶ್ಚಿಮ ದಿಕ್ಕಿನಿಂದ ಬರುತ್ತಿದ್ದೆವು, ಆಗ ಕಾರಿನ ಚಾಲಕ ಪೂರ್ವದಿಂದ ನಮ್ಮ ದಿಕ್ಕಿಗೆ ಓವರ್ ಟೇಕ್ ಮಾಡಿಕೊಂಡು ಬಂದು ಢಿಕ್ಕಿಪಡಿಸಿರುತ್ತಾನೆ ಎನ್ನುತ್ತಾರೆ. ಅಪಘಾತವು ರಸ್ತೆಯ ಪಶ್ಚಿಮ ಬದಿಯಲ್ಲಿ ಆಗಿರುತ್ತದೆ. ಪಶ್ಚಿಮ ಬದಿಯಿಂದ ಪೂರ್ವ ಬದಿಗೆ ಸುಮಾರು 15 ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತವಾಗಿರುವ ಸ್ಥಳದಲ್ಲಿ ಯಕ್ಷಮನೆ ಕ್ರಾಸ್ ಇರುತ್ತದೆ ಎಂದರೆ ಸರಿ. ನಾನು ನನ್ನ ವಾಹನವನ್ನು ಪಶ್ಚಿಮದಿಂದ ಪೂರ್ವ ಬದಿಗೆ ಹಟ್ಟಾತ್ತಾಗಿ ವಾಹನವನ್ನು ಓಡಿಸಿರುವುದರಿಂದ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನನ್ನನ್ನು ಶಿರಾಲಿಯ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ, ಆಗ ನನಗೆ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ಅಪಘಾತದಲ್ಲಿ ಗಾಯಗೊಂಡಿರುವುದಾಗಿ ತಿಳಿಸಿರುತ್ತೇನೆ. ಆಸ್ಪತ್ರೆಯವರು ಅದನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ಕೋಟೇಶ್ವರದ ಎನ್ ಆರ್ ಆಚಾರ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ನಾನು 4–5 ದಿನಗಳ ವರೆಗೆ ಚಿಕಿತ್ಸೆ ಪಡೆದಿರುತ್ತೇನೆ. ಆಗ ನನ್ನೊಂದಿಗೆ ನನ್ನ ತಾಯಿ ಇದ್ದರು. ನನಗೆ ವಾಹನ ಚಲಾಯಿಸಲು ಡಿ.ಎಲ್. ಇರುತ್ತದೆ. ನಾನು ಹೇಳಿದಷ್ಟು ಆಸ್ಪತ್ರೆಗೆ ಮತ್ತು ಊಟ–ತಿಂಡಿಗೆ ಖರ್ಚು ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಹೇಳಿದಷ್ಟು ವಾಹನ ಬಾಡಿಗೆ ಪಡೆದಿಲ್ಲ ಎಂದರೆ ಸರಿಯಲ್ಲ. ಬೈಕಿಗೆ ರೂ.20,000/– ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮಲ್ಪೆಯಲ್ಲಿ ಬೋಟಿನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತೇನೆ. ಮೀನುಗಾರಿಕೆಯಲ್ಲಿ ಇಂತಿಷ್ಟು ಆದಾಯ ಬರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಈಗಲೂ ಸಹ ನಾನು ಬೋಟಿನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರಿದು, ನನಗೆ ಈಗ ಮೊದಲಿನಂತೆ ಕೆಲಸ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಮೊದಲು ನಾನು ಕಲಾಸಿಯಾಗಿ ಕೆಲಸ ಮಾಡುತ್ತಿದ್ದೆನು, ಈಗಲೂ ಸಹ ಕಾಲಸಿಯಾಗಿ ಕೆಲಸ

ಮಾಡುತ್ತಿದ್ದೇನೆ. ಹಿಂದೆ ಕಲಾಸಿ ಕೆಲಸಕ್ಕೆ ಎಷ್ಟು ಹಣ ಬರುತ್ತಿತ್ತು, ಈಗಲೂ ಸಹ ಅಷ್ಟೇ ಹಣ ಬರುತ್ತಿದೆ ಎಂದರೆ ಸರಿ, ನನಗೆ ಆದಾಯದಲ್ಲಿ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ, ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆಸ ರಿಯಲ್ಲ. ವೈಧ್ಯರು ನನಗೆ ಚಿಕಿತ್ಸೆ ನೀಡಿ, ವ್ಯಾಯಾಮ ಮಾಡಲು ಹೇಳಿದ್ದರು ಎಂದರೆ ಸರಿ. ಅದೇ ರೀತಿ ನಾನು ವ್ಯಾಯಾಮ ಮಾಡಿದ್ದೇನೆ ಎಂದರೆ ಸರಿ. ವೈಧ್ಯರು ಹೇಳಿದ ಚಿಕಿತ್ಸೆ ಮತ್ತು ವ್ಯಾಯಾಮ ಮಾಡಿದರೆ ನನಗೆ ಹೇಳಿದ ಗಾಯಗಳು ವಾಸಿಯಾಗುತ್ತದೆ ಎಂದರೆ ಸರಿ. ಆಪಾದಿತ ಕಾರು ಚಾಲಕನಿಗೆ ಡಿ.ಎಲ್. ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ 2ನೇ ಎದುರುದಾರ ಕಂಪನಿಯಿಂದ ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿಗೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ವೈಧ್ಯಕೀಯ ಖರ್ಚು ವೆಚ್ಚಗಳನ್ನು ಸೃಷ್ಠಿಸಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 1ನೇ ಎದ್ರುದಾರರ ಪರ ವಕೀಲರು ಹಾಜರಿದ್ದು, ಅವರ ಪರ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.)

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಆರ್.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 18-06-2024.**

**ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಸದರಿ ದಿನ ನಮ್ಮ ಆಪಾದಿತ ಬಸ್ ಕುಮಟಾದಿಂದ ಬೆಂಗಳೂರಿಗೆ ಹೋಗುತ್ತಿತ್ತು ಎಂದರೆ ಸರಿ. ಅಪಘಾತದ ಸ್ಥಳದ ರಸ್ತೆಯು ತಿರುವಿನಿಂದ ಇತ್ತು ಎಂದರೆ ಸರಿ. ಸದರಿ ತಿರುವು ರಸ್ತೆ ನಾನು ಹೋಗುತ್ತಿದ್ದ ಎಡಬದಿಗೆ ಇತ್ತು ಎಂದರೆ ಸರಿ. ಮೋಟಾರು ಸೈಕಲು ಸಾಗರದಿಂದ ಭಟ್ಕಳದ ಕಡೆಗೆ ಬರುತ್ತಿತ್ತು ಮತ್ತು ಅಪಘಾತ ನಡೆದ ಸ್ಥಳವು ಬಲಬದಿಯ ತಿರುವು ರಸ್ತೆಯಲ್ಲಿತ್ತು ಎಂದರೆ ಸರಿ. ಸದರಿ ದಿನ ಕತ್ತಲಾಗಿದ್ದರಿಂದ ಬಸ್ಸಿನ ಹೆಡ್ ಲೈಟ್ ಹಾಕಿಕೊಂಡು ಬಸ್ ಚಲಾಯಿಸುತ್ತಿದ್ದೆವು ಎಂದರೆ ಸರಿ. ರಸ್ತೆ ತಿರುವು ಇರುವುದರಿಂದ ನಾನು ಮೊದಲು ಬಸ್ಸನ್ನು ಬಲಬದಿಗೆ ತೆಗೆದುಕೊಂಡು ನಂತರ ಎಡಬದಿಗೆ ಬಸ್ಸನ್ನು ಚಲಾಯಿಸಿದ್ದೆನು ಎಂದರೆ ಸರಿ. ಈ ಅಪಘಾತದಲ್ಲಿ ನನಗಾಗಲೀ, ಪ್ರಯಾಣಿಕರಿಗಾಗಲೀ ಮತ್ತು ನಿರ್ವಾಹಕರಿಗಾಗಲೀ ಯಾವುದೇ ಪೆಟ್ಟಾಗಿಲ್ಲ ಎಂದರೆ ಸರಿಯಲ್ಲ. ಮೋಟಾರು ಸೈಕಲು ಸವಾರ ಮತ್ತು ಹಿಂಬದಿ ಸವಾರನಿಗೆ ತೀವ್ರ ಸ್ವರೂಪದ ಗಾಯವಾಗಿ, ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿ. ಅಪಘಾತದಲ್ಲಿ ನನ್ನ ಬಸ್ಸಿನ ಬಲ ಬದಿಯ ಹೆಡ್ ಲೈಟ್ ಮತ್ತು ಬಂಪರ್‌ಗೆ ಹಾನಿಯಾಗಿದೆ ಎಂದರೆ ಸರಿ. ಅಪಘಾತವಾದ ಸಂದರ್ಭದಲ್ಲಿ ನಮ್ಮ ಸಂಸ್ಥೆಯಿಂದ ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ನಮ್ಮ ತಪ್ಪಿನಿಂದ ಅಪಘಾತವಾಗಿದ್ದರೆ ನಮ್ಮ ಸಂಸ್ಥೆಯ ವಿಚಾರಣೆಯಲ್ಲಿ ನಮಗೆ ಹಿಂಭಡ್ತಿ ಮಾಡುವುದು ಮತ್ತು ದಂಡ ಹಾಕುತ್ತಾರೆ ಎಂದರೆ ಸಾಕ್ಷಿ ದಂಡ ಮಾತ್ರ ಹಾಕುತ್ತಾರೆ ಎಂದು ನುಡಿಯುತ್ತಾರೆ. ಮೊದಲು ನಾನು ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಿ, ನಂತರ ನಮ್ಮ ಡಿಪೋಗೆ ಮಾಹಿತಿ ತಿಳಿಸಿ ನಂತರ ಗಾಯಾಳುಗಳನ್ನು ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸಿದ್ದೇವೆ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ನನ್ನ ಉದ್ಯೋಗಕ್ಕೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ, ನಮ್ಮ ಸಂಸ್ಥೆಯು ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಭಟ್ಕಳ**

**ಎಂವಿಸಿ 296/2019**

**ಆರ್.ಡಬ್ಲ್ಯು 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 07-06-2024**

**ಹೆಸರು** : ನಾಗೇಶ ಸಣ್ಣು ಗೊಂಡ

**ತಂದೆಯ ಹೆಸರು** : ಸಣ್ಣು ಗೊಂಡ

**ವಯಸ್ಸು** : 31 ವರ್ಷ

**ಉದ್ಯೋಗ** : ಗಾರೆ ಕೆಲಸ

**ವಾಸ** : ಕೋಟ್‌ಖಂಡ, ಭಟ್ಕಳ

**ಮುಖ್ಯ ವಿಚಾರಣೆಃ 1ನೇ ಎದ್ರುದಾರರ ಪರ ಶ್ರೀ ವಿ.ಎಫ್.ಜಿ ವಕೀಲರಿಂದ,**

ಈ ಪ್ರಕರಣದ ಮೃತ ಗಣಪತಿ ಮಂಜುನಾಥ ಗೊಂಡ ಇವರ ಪರಿಚಯ ನನಗೆ ಇತ್ತು. ಅಪಘಾತವಾದ ದಿನ ನಾನು, ಮೃತ ಗಣಪತಿ ಮತ್ತು ನಾಗಪ್ಪ ನಾಯ್ಕ ಎನ್ನುವವರು ಮೂವರು ಆಟೋದಲ್ಲಿ ಭಟ್ಕಳದಿಂದ ಮಾರುಕೇರಿಗೆ ಹೋಗುತ್ತಿದ್ದೆವು. ಸದರಿ ದಿನ ಆಟೋವನ್ನು ನಾಗೇಶ ಮೊಗೇರ ಎನ್ನುವವರು ಚಲಾಯಿಸುತ್ತಿದ್ದರು. ನಮ್ಮ ಆಟೋ ಭಟ್ಕಳದಿಂದ ಮಾರುಕೇರಿಗೆ ಹೋಗುತ್ತಿತ್ತು. ಟ್ರ್ಯಾಕ್ಟರ್ ಕಡಸಲ್‌ಗದ್ದೆ ತಿರುವು ರಸ್ತೆಯ ರಾ.ಹೆ.ಯ ಕಡೆಯಿಂದ ಬರುತ್ತಿತ್ತು. ಅಪಘಾತವಾದ ರಸ್ತೆಯು ತಿರುವು ಮತ್ತು ಇಳಿಜಾರು ಪ್ರದೇಶವಾಗಿತ್ತು. ಟ್ರ್ಯಾಕ್ಟರ್ ಬರುವ ರಸ್ತೆಯು ಎತ್ತರ ರಸ್ತೆಯಾಗಿತ್ತು. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ. ಅಪಘಾತವು ನಿಖರವಾಗಿ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಏಕೆಂದರೆ, ಅಪಘಾತವಾದ ತಕ್ಷಣ ನಾನು ಗಾಯಗೊಂಡು ಪ್ರಜ್ಞೆ ತಪ್ಪಿದ್ದೆನು.

**(ಈ ಹಂತದಲ್ಲಿ 1ನೇ ಎದ್ರುದಾರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ಪರಿಶೀಲನೆ ಮಾಡಿ, ಸದರಿ ವಕೀಲರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀಸವಾಲುಃ</u>– 1ನೇ ಎದ್ರುದಾರರ ಪರ ಶ್ರೀ ವಿ.ಎಫ್.ಜಿ ವಕೀಲರಿಂದ,**

ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸಾಕ್ಷಿ, ಇಬ್ಬರೂ ಚಾಲಕರ ತಪ್ಪಿನಿಂದ ಅಪಘಾತವಾಗಿರಬಹುದು ಎಂದು ನುಡಿಯುತ್ತಾರೆ. ಅಪಘಾತವು ಆಟೋ ಚಾಲಕನ ತಪ್ಪಿನಿಂದ ಆಗಿದ್ದರೂ ಸಹ, ಇಬ್ಬರೂ ಚಾಲಕರ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ</u>– ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಏನೂ ಇಲ್ಲ ಎಂದು ನುಡಿದಿರುತ್ತಾರೆ.

**<u>ಪಾಟೀಸವಾಲುಃ</u>– 3ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ,**

ನಾನು ಇದೇ ಪ್ರಕರಣದ ಸಂಬಂಧ ಕ್ರಿಮಿನಲ್ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಾಗ ಟ್ರ್ಯಾಕ್ಟರ್ ಡ್ರೈವರ್ ನ್ಯಾಯಾಲಯದಲ್ಲಿ ಹಾಜರಿರಲಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಯಾರ ಮೇಲೆ ಪ್ರಕರಣ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ಆಟೋ ನಿಧಾನವಾಗಿ ಹೋಗುತ್ತಿತ್ತು. ಟ್ರ್ಯಾಕ್ಟರ್ ಚಾಲಕ ವೇಗವಾಗಿ ಬಂದು ಢಿಕ್ಕಿಪಡಿಸಿದ್ದಾನೆ ಎಂದು ಹೇಳಿದ್ದೇನೆ, ಅದರಂತೆ, ಪೊಲೀಸರು ತನಿಖೆ ಮಾಡಿ ಟ್ರ್ಯಾಕ್ಟರ್ ಚಾಲಕನ ಮೇಲೆ ದೊಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರನಿಗೆ ಸಹಾಯ ಮಾಡಲು ಆಟೋ ಚಾಲಕ ಮತ್ತು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ</u>– 2ನೇ ಎದುರುದಾರರ ಪರ ಶ್ರೀ ಎ.ಆರ್.ಎನ್. ವಕೀಲರಿಂದ,**

3ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಎಂವಿಸಿಃ 259/2021**

**ಆರ್.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 06–06–2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ1ನೇ ಎದ್ರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ನಾನು 1ನೇ ಎದುರುದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು 1ನೇ ಎದ್ರುದಾರರ ವಿರುದ್ಧ ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ– ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಅರ್ಜಿದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗಾಗಿ ಪ್ರಕರಣದ ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಪಿ.ಡಬ್ಲ್ಯು: 2

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 26–04–2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಿ ಜೆ ಎನ್ . ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಿರುತ್ತೇನೆ. ಸದ್ರಿ ಎಂ ವಿ ಸಿ ನಂಬರ 387/2022 ಪ್ರಕರಣ ನನ್ನ ಪ್ರಕರಣದೊಂದಿಗೆ ಕ್ಲಬ್ ಆಗಿರುತ್ತದೆ. ಆದ್ದರಿಂದ ಎಂ ವಿ ಸಿ ನಂಬರ 387/2022 ರಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನನ್ನ ಪ್ರಕರಣದಲ್ಲಿ ಅಳವಡಿಸಿಕೊಳ್ಳಬೇಕಾಗಿ ವಿನಂತಿ. ಮುಂದುವರೆದು ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ಮತ್ತು 2 ಮತ್ತು 3 ನೇ ಅರ್ಜಿದಾರರ ಅಟೆಸ್ಟೆಡ್ ಮಾಡಿದ ಜೆರಾಕ್ಸ ಆಧಾರ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಸದ್ರಿ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಹೊಂದಿಸಿ ನೋಡಿ ಸರಿ ಇರುತ್ತವೆ. ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂತಿರುಗಿಸಲಾಗಿದೆ. ಸದ್ರಿ ದಾಖಲೆಗಳನ್ನು ನಿಪಿ–14 ರಿಂದ ನಿಪಿ–16ಎಂದು ಗುರುತಿಸಲಾಯಿತು. ಅದೇ ರೀತಿ 3ನೇ ಅರ್ಜಿದಾರ ಅಂಗವಿಕಲನಿದ್ದು ಅದನ್ನು ತೋರಿಸಲು ಅಟೆಸ್ಟೆಡ್ ಮಾಡಿದ ಗುರುತಿನ ಚೀಟಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಹೊಂದಿಸಿ ನೋಡಿ ಸರಿ ಇರುತ್ತದೆ. ಮೂಲ ಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಗಿದೆ. ಅದನ್ನು ನಿಪಿ–17 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

– 4 – ಎಂವಿಸಿಃ 158/2023

ಪಿ.ಡಬ್ಲ್ಯು: 2

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ದಿನಾಂಕಃ 30-03-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ. ಸದರಿ ನನ್ನ ಪ್ರಕರಣವು ಎಂ.ವಿ.ಸಿ. ನಂ.157/2023 ರಲ್ಲಿ ಕ್ಲಬ್ ಆಗಿದ್ದು, ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ ನಿಪಿ-1 ರಿಂದ 4 ಮತ್ತು 8 ನ್ನು ನನ್ನ ಈ ಪ್ರಕರಣಕ್ಕೆ ಅಳವಡಿಸಿಕೊಳ್ಳಬೇಕಾಗಿ ವಿನಂತಿ. ಅದೇ ರೀತಿ, ಒಂದು ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು. ಅದನ್ನು ನಿಪಿ-36 ಎಂದು ಗುರುತಿಸಲಾಯಿತು. ಅದೇ ರೀತಿ, ಸರಕಾರಿ ಆಸ್ಪತ್ರೆಯ ಹೊರರೋಗಿಯ ಪುಸ್ತಕವನ್ನು ಮತ್ತು ಲೈಫ್ ಕೇರ್ ಓ.ಪಿ.ಡಿ. ಕಾರ್ಡ್, ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು, ಅದನ್ನು 37 ಮತ್ತು 38 ಎಂದು ಗುರುತಿಸಲಾಯಿತು. ಒಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-39 ಎಂದು ಗುರುತಿಸಲಾಯಿತು. 16 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ಕ್ರಮವಾಗಿ ನಿಪಿ-40 ರಿಂದ 55 ಎಂದು ಗುರುತಿಸಲಾಯಿತು. ಎರಡು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-56 ಮತ್ತು 57 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**





**ಪಿ.ಡಬ್ಲ್ಯೂಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 30-03-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ನಕ್ಷೆ, ಐ.ಎಂ.ವಿ. ವರದಿಯ ಪ್ರತಿ, ಎರಡು ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು. ಅದೇ ರೀತಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೀಡಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಆಸ್ಪತ್ರೆಯ ಎರಡು ಬಿಲ್ ಪ್ರತಿಯನ್ನು ಹಾಜರುಪಡಿಸಿದ್ದೇನೆ. **ಸಾಕ್ಷಿ ಮುಂದುವರಿದು, ಒಟ್ಟು ವೈದ್ಯಕೀಯ ವೆಚ್ಚ ರೂ.19,069 ಆಗಿದ್ದು, ಅದರಲ್ಲಿ ರೂ.17,303/- ವಿಮಾ ಕಂಪನಿಯಿಂದ ಕ್ಲೈಮ್ ಮಾಡಿಕೊಂಡಿರುತ್ತೇನೆ. ನಾನು ಒಟ್ಟು ರೂ.1,766/- ಮಾತ್ರ ಹಣ ಖರ್ಚು ಮಾಡಿರುತ್ತೇನೆ. ಅದೇ ರೀತಿ ದಿ.10-10-2022 ರಂದು ಚಿಕಿತ್ಸೆ ಪಡೆದ ಒಟ್ಟು ರೂ.93,604/- ರಲ್ಲಿ ರೂ.81,584/- ವಿಮಾ ಕಂಪನಿಯಿಂದ ಕ್ಲೈಮ್ ಮಾಡಿಕೊಂಡಿರುತ್ತೇನೆ. ಒಟ್ಟು ರೂ.12,020/- ಹಣ ಖರ್ಚು ಮಾಡಿರುತ್ತೇನೆ.** ಸದರಿ ದಾಖಲೆಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಆಸ್ಪತ್ರೆಯ 22 ವೈದ್ಯಕೀಯ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-12 ರಿಂದ 33 ಎಂದು ಗುರುತಿಸಲಾಯಿತು. ಒಂದು ವಾಹನ ಬಾಡಿಗೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-34 ಎಂದು ಗುರುತಿಸಲಾಯಿತು. 5 ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅದನ್ನು ಒಟ್ಟಾಗಿ ನಿಪಿ-35 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಎಂವಿಸಿಃ 150/2023

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 15-03-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರಳಿರುತ್ತೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಐ.ಎಂ.ವಿ. ವರದಿಯ ಪ್ರತಿ, ಶವ ಪಂಚನಾಮೆ ಪ್ರತಿ, ಪಿ.ಎಂ ವರದಿ, ಚಾರ್ಜ್‌ಶೀಟ್ ಪ್ರತಿ, ಮರಣ ಪ್ರಮಾಣ ಪತ್ರ, ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಅಟೆಸ್ಟೆಡ್ ಮಾಡಿದ ಆಧಾರ ಪ್ರತಿ ಮತ್ತು ಪಡಿತರ ಚೀಟಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು 9ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ** 20-01-2024

**ಮುಂದುವರಿದ ಮುಖ್ಯ ವಿಚಾರಣೆಃ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಈ ಕೇಸಿಗೆ ಸಂಬಂಧಿಸಿದಂತೆ ಇನ್ನೊಂದು ಅಂಗನ್ಯೂನ್ಯತೆ ಪ್ರಮಾಣ ಪತ್ರ ಮತ್ತು ಚಿಕಿತ್ಸೆಯ ಪ್ರಮಾಣ ಪತ್ರ ಹಾಜರುಪಡಿಸಿದ್ದು, 1ನೇ ಎದುರುದಾರರ ಪರ ವಕೀಲರು ಹಾಜರಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-25 ಮತ್ತು 26 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ.**

ನನಗೆ ಚಿಕಿತ್ಸೆ ನೀಡಿದ ವೈದ್ಯರು ಈಗ ವಿದೇಶಕ್ಕೆ ಹೋಗಿರುತ್ತಾರೆ. ಅವರು ಈಗ ಬರಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ನಿಪಿ-25 ಮತ್ತು 26 ನ್ನು ನೀಡಿದ ವೈದ್ಯರು ಈಗ ನನಗೆ ಚಿಕಿತ್ಸೆ ಕೊಡುತ್ತಿದ್ದಾರೆ. ನನಗೆ ಮೊದಲು ಚಿಕಿತ್ಸೆ ನೀಡಿದ ವೈದ್ಯರು ಈಗ ವಿದೇಶಕ್ಕೆ ಹೋಗಿರುತ್ತಾರೆ. ಈ ಮೊದಲು ನನಗೆ ನಿಪಿ-25 ನ್ನು ನೀಡಿದ ವೈದ್ಯರು ಮತ್ತು ವಿದೇಶಕ್ಕೆ ಹೋದ ವೈದ್ಯರು ಇಬ್ಬರೂ ಸಹ ಚಿಕಿತ್ಸೆ ನೀಡಿರುತ್ತಾರೆ. ನಿಪಿ-25 ಮತ್ತು 26ನ್ನು ನೀಡಿದ ವೈದ್ಯರು ನನಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-25ರಲ್ಲಿ ಹೇಳಿದಂತೆ ನನಗೆ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಎದುರುದಾರರ ಪರ ವಕೀಲರಿಂದ.**

2ನೇ ಮತ್ತು 3ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲನ್ನು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 20-01-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅಪ್ರಾಪ್ತ ಅರ್ಜಿದಾರನ ತಾಯಿಯಿದ್ದು, ಸದರಿ ಸಾಕ್ಷಿಯನ್ನು ಅರ್ಜಿದಾರರ ಪರವಾಗಿ ನುಡಿಯುತ್ತಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಅವುಗಳನ್ನು ಹಾಜರುಪಡಿಸಿದ್ದು, ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಒಟ್ಟು 33 ಮೆಡಿಕಲ್ ಔಷಧಿ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ ನಿಪಿ-41 ಎಂದು ಗುರುತಿಸಲಾಯಿತು. ಎರಡು ಔಷಧಿ ರಶೀದಿ, ಮತ್ತು ಎರಡು ಎಂ.ಆರ್.ಐ. ಸ್ಕ್ಯಾನ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-42 ಎಂದು ಗುರುತಿಸಲಾಯಿತು. 6 ಫೋಟೊಗಳನ್ನು ಮತ್ತು ಸಿಡಿಯನ್ನು ಹಾಜರುಪಡಿಸಿದ್ದು, ಫೋಟೊಗಳನ್ನು ನಿಪಿ-43 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-44 ಎಂದು ಗುರುತಿಸಲಾಯಿತು. ಒಂದು ಎಕ್ಸರೇ ಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-45 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 17-01-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ. ಸದರಿ ನನ್ನ ಪ್ರಕರಣವು ಎಂ.ವಿ.ಸಿ.ನಂ. 156/2023 ರಲ್ಲಿ ಕ್ಲಬ್ ಆಗಿದ್ದು, ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ ನಿಪಿ-1 ರಿಂದ 5, 7 ಮತ್ತು 8 ದಾಖಲೆಗಳನ್ನು ನನ್ನ ಅರ್ಜಿಯಲ್ಲಿ ಪರಿಗಣಿಸಬೇಕಾಗಿ ವಿನಂತಿ. ಮುಂದುವರಿದು ಪ್ರಕರಣಕ್ಕೆ ಸಂಬಂಧಿಸಿದಂತೆ ಭಟ್ಕಳ ಸರಕಾರಿ ಆಸ್ಪತ್ರೆಯ ಹೊರರೋಗಿಯಾಗಿ ಆಸ್ಪತ್ರೆಯ ಓಪಿಡಿ ಕಾರ್ಡನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-30 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿ ಮತ್ತು ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-31 ಮತ್ತು 32 ಎಂದು ಗುರುತಿಸಲಾಯಿತು. ಒಂದು ಟ್ಯಾಕ್ಸಿ ಬಾಡಿಗೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-33ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯುಃ 1**

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಆರ್.ಐ .ಎನ್. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಕು.ಸಿ.ಪಿ.ಪಿ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 17-01-2024**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಗಾಯದ ಪ್ರಮಾಣ ಪತ್ರ, ಚಾರ್ಜ್ ಶೀಟ್ ಪ್ರತಿ, ಸಿ.ಸಿ.ನಂ.2141/2022 ಇದರ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 8 ಎಂದು ಗುರುತಿಸಲಾಯಿತು. ಜೆರಾಕ್ಸ್ ಎಂ.ಎಲ್.ಸಿ. ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಮೂಲ ಪ್ರತಿಯನ್ನು ಆಸ್ಪತ್ರೆಯಲ್ಲಿ ಮುಂದಿನ ಚಿಕಿತ್ಸೆ ಪಡೆಯುತ್ತಿದ್ದಾಗ ಆಸ್ಪತ್ರಯವರಿಗೆ ನೀಡುತ್ತಿದ್ದೇನೆ. ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-9 ಎಂದು ಗುರುತಿಸಲಾಯಿತು. ಒಂದು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿಪಿ-10 ಎಂದು ಗುರುತಿಸಲಾಯಿತು. ಅಂಗನ್ಯೂನತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-11 ಎಂದು ಗುರುತಿಸಲಾಯಿತು. ಸಿಟಿ ಸ್ಕ್ಯಾನ್ ಮತ್ತು ಎಂ.ಆರ್.ಐ ಮಾಡಿದ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ಒಟ್ಟು 14 ಔಷಧಿ ವೆಚ್ಚ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-14 ರಿಂದ 27ಎಂದು ಗುರುತಿಸಲಾಯಿತು. ಆರು ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-28 ಎಂದು ಗುರುತಿಸಲಾಯಿತು. ಒಂದು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-29 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**<u>ಪಾಟೀ ಸವಾಲುಃ</u> 1ನೇ ಎದುರುದಾರರ ಪರ ಶ್ರೀ ಆರ್.ಐ .ಎನ್. ವಕೀಲರಿಂದ.**

(ಈ ಹಂತದಲ್ಲಿ ಎದ್ರುದಾರರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಕು.ಸಿ.ಪಿ.ಪಿ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

ಎಂವಿಸಿಃ 204/2021

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 10-01-2024

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ. ಸದರಿ ಸಾಕ್ಷಿಯನ್ನು ನನ್ನ ಮತ್ತು 2ನೇ ಅರ್ಜಿದಾರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಐ.ಎಂ.ವಿ. ವರದಿ, ಪಿಎಂ ವರದಿ, ಮತ್ತು ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಅವುಗಳನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*ಸಹಿ ಇದೆ.*

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 22-12-2023**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ. ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ಎಂ.ವಿ.ಸಿ. ನಂ.394/2022 ರಲ್ಲಿ ನಿಪಿ-1 ರಿಂದ 8 ದಾಖಲೆಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಕೋರುತ್ತೇನೆ. ಆದ್ದರಿಂದ ಎದುರುದಾರರ ಪರ ವಕೀಲರ ಸಮ್ಮತಿಯ ಮೇರೆಗೆ ಸದರಿ ಪ್ರಕರಣದ ದಾಖಲೆಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಲಾಗಿದೆ. ಮುಂದುವರಿದು, ಒಟ್ಟು 5 ಔಷಧಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 5 ಎಂದು ಗುರುತಿಸಲಾಯಿತು. ನಾಲ್ಕು ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-6 ಎಂದು ಗುರುತಿಸಲಾಯಿತು. ನಾಲ್ಕು ಎಕ್ಸರೇ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-7 ಎಂದು ಗುರುತಿಸಲಾಯಿತು. ಒಂದು ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 22-12-2023**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢೀಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ಐ.ಎಂ.ವಿ. ವರದಿಯ ಪ್ರತಿ, ಪಿ.ಎಂ. ವರದಿ, ಚಾರ್ಜ್ ಶೀಟ್ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ 6 ಎಂದು ಗುರುತಿಸಲಾಯಿತು. ಅಟೆಸ್ಟಡ್ ಮಾಡಿದ ಒಂದು ಪಡಿತರ ಚೀಟಿ ಮತ್ತು ನಾಲ್ಕು ಆಧಾರ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-7 ರಿಂದ 11 ಎಂದು ಗುರುತಿಸಲಾಯಿತು. ವಾಯುಮಾಲಿನ್ಯ ಪ್ರಮಾಣ ಪತ್ರ ಮತ್ತು ಮೃತನ ಡಿ.ಎಲ್. ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ.**

1ನೇ ಎದ್ರುದಾರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಶ್ರೀ ಎಸ್.ಎಂ.ಬಿ. ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ ಡಬ್ಲು 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 22-08-2023**

**ಮಧ್ಯಂತರ ಆದೇಶ ದಿ. 08-09-2023 ರಂತೆ ಮುಂದುವರಿದ ಮುಖ್ಯ ವಿಚಾರಣೆಃ**
**ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ 2ನೇ ಎದುರುದಾರ ಪರ ವಕೀಲರು ಸದರಿ ದಾಖಲೆಯನ್ನು ಗುರುತಿಸಲು ತಕರಾರು ಮಾಡಿರುವುದರಿಂದ ಅದನ್ನು ಸಾಬೀತುಪಡಿಸುವ ಶರತ್ತಿನೊಂದಿಗೆ ನಿಪಿ-41ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-41 ರಂತೆ ಸುಳ್ಳು ಅಗಂನ್ಯೂನ್ಯತೆ ಪ್ರಮಾಣ ಪತ್ರ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 21-07-2023**

**ಮಧ್ಯಂತರ ಅರ್ಜಿ ನಂ.3 ರ ಆದೇಶದಂತೆ ಮುಂದುವರಿದ ಮುಖ್ಯ ವಿಚಾರಣೆಃ**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಜಿ.ಎನ್ ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಒಂದು ಡಿಸ್ಚಾರ್ಜ್ ಸಮ್ಮರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-25 ಎಂದು ಗುರುತಿಸಲಾಯಿತು. ಅದೇ ರೀತಿ ಒಟ್ಟು 32 ಔಷಧಿ ವೆಚ್ಚದ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-26 ರಿಂದ 57 ಎಂದು ಗುರುತಿಸಲಾಯಿತು. ಅದೇ ರೀತಿ ಒಟ್ಟು 13 ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-58ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಾನು ಮಣಿಪಾಲ ಆಸ್ಪತ್ರೆಯಲ್ಲಿ ಡಾ.ಶರತ್ ರಾವ್ ಅವರ ಬಳಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ವೈದ್ಯರು ಈಗಲೂ ಸಹ ಕೆಎಂಸಿ ಮಣಿಪಾಲದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಚಿಕಿತ್ಸೆ ಪಡೆದ ಕೆಎಂಸಿ ಆಸ್ಪತ್ರೆಗೆ ಹೋಗಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದಿರುವುದಿಲ್ಲ, ಅದನ್ನು ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಹೇಳಿದಂತೆ ನನಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಅದಕ್ಕಾಗಿ ಕೆಎಂಸಿಯವರು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮುಂದಿನ ಚಿಕಿತ್ಸೆಗಾಗಿ ರೂ.80,000/- ವೆಚ್ಚ ಬರುತ್ತದೆ ಎಂದು ಬರೆದ ಬಗ್ಗೆ ಕೆಎಂಸಿ ಆಸ್ಪತ್ರೆಯಿಂದ ಪ್ರಮಾಣ ಪತ್ರ ಬರೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಏಕೆಂದರೆ ಅವರು ನನಗೆ ಪ್ರಮಾಣ ಪತ್ರ ನೀಡಿಲ್ಲ ಎಂದು ನುಡಿಯುತ್ತಾರೆ. ನನಗೆ ಮುಂದುವರಿದ ಚಿಕಿತ್ಸೆ ಅವಶ್ಯಕತೆ ಇಲ್ಲವಾದ್ದರಿಂದ ನನಗೆ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಈ ದಿನ ಹಾಜರುಪಡಿಸಿದ ನಿಪಿ-25 ರಿಂದ 58 ರ ಆಸ್ಪತ್ರೆಯ ವೆಚ್ಚ ಈ ಪ್ರಕರಣದ ಅಪಘಾತಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ: 21-07-2023**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಸ್.ಜಿ.ಎನ್ ವಕೀಲರಿಂದ,**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಎಕ್ಸರೇ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-23 ಎಂದು ಗುರುತಿಸಲಾಯಿತು. ಈ ಪ್ರಕರಣದ ಅರ್ಜಿದಾರ ಗಾಯಾಳುವಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದು, ಅದನ್ನು ನೋಡುತ್ತಿದ್ದು, ಈಗಾಗಲೇ ನಿಪಿ-21 ಎಂದು ಗುರುತಿಸಾಲಗಿದೆ. ಸಾಕ್ಷಿಯ ಸಹಿಯನ್ನು ನಿಪಿ-21(ಎ) ಮತ್ತು ನಿಪಿ-21(ಬಿ) ಎಂದು ಗುರುತಿಸಲಾಯಿತು. ಸದರಿ ನಿಪಿ-21 ರನೊಂದಿಗೆ ಅಸೆಸ್ ಮೆಂಟ್ ವರದಿಯನ್ನು ನೀಡಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.

**ಪಾಟೀಸವಾಲು:- 3ನೇ ಎದುರುದಾರರ ಪರ ಶ್ರೀ ಎಸ್.ಎಮ್.ಬಿ. ವಕೀಲರಿಂದ,**

ಈ ಪ್ರಕಣದ ಅರ್ಜಿದಾರ ಸಂಪೂರ್ಣವಾಗಿ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿ. ಅರ್ಜಿದಾರನನ್ನು ನಾನು ದಿ.11-03-2022 ರಂದು ಒಂದೇ ಬಾರಿ ನೋಡಿರುತ್ತೇನೆ ಎಂದರೆ ಸರಿ. ಅರ್ಜಿದಾರನಿಗೆ ನಾನು ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ನಾನು ಜಿಲ್ಲಾ ಮೆಡಿಕಲ್ ಬೋರ್ಡ್ ನ ಸದಸ್ಯತ್ವ ತೋರಿಸುವ ಯಾವುದೇ ದಾಖಲೆ ತರುವುದಿಲ್ಲ. ನಾನು ಮೆಡಿಕಲ್ ಬೋರ್ಡಿನ ಸದಸ್ಯನಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳಾಗಿ ಬರೆದಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-23 ಎಕ್ಸರೇಗೆ ರೇಡಿಯಾಲಜಿಯವರಿಂದ ವರದಿ ಪಡೆದಿರುವುದಿಲ್ಲ. ಅರ್ಜಿದಾರನಿಗೆ ನಿಪಿ-21 ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುವ ಮೊದಲು ನಾನು ಕೆಎಂಸಿ ಆಸ್ಪತ್ರೆಯ ದಾಖಲೆಗಳನ್ನು ನೋಡಿ ನೀಡಿರುತ್ತೇನೆ. ನಿಪಿ-24 ರಲ್ಲಿ ನಮೂದಿಸಿದ ನ್ಯೂನ್ಯತೆಗಳು ಕೆಎಂಸಿ ಆಸ್ಪತ್ರೆಯ ದಾಖಲೆಗಳಲ್ಲಿ ಕಂಡುಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ರೋಗಿಯನ್ನು ನಾವು ಮೊದಲು ಪರೀಕ್ಷೆಗೆ ಒಳಪಡಿಸಿ ಎಕ್ಸರೇ ತೆಗೆದು ಆ ನಂತರ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡುತ್ತೇವೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ರೋಗಿ ಆಸ್ಪತ್ರೆಗೆ ಬಂದರೆ ರೋಗದ ಎಲ್ಲಾ ಗುಣಲಕ್ಷಣಗಳನ್ನು ನಮ್ಮ ಆಸ್ಪತ್ರೆಯ ದಾಖಲೆಯಲ್ಲಿ ಬರೆಯುತ್ತೇವೆ ಎಂದರೆ ಸರಿ. ಭಾರತ ಸರಕಾರ-2018 ರಲ್ಲಿ ಹೊರಡಿಸಿರುವ ಮಾರ್ಗಸೂಚಿ ಬಗ್ಗೆ ನನಗೆ ಜ್ಞಾನ ಇದೆ. ನಿಪಿ-21 ರಲ್ಲಿ ತೋರಿಸಿದ ಕರ್ನಾಟಕ ಮಾರ್ಗಸೂಚಿಯಲ್ಲಿ ದಿನಾಂಕ 19/11/2005 ರ ನಿಯಮದಡಿಯಲ್ಲಿ ಸರಕಾರದ ಉಚಿತ ಸೌಲಭ್ಯ ಸಿಗಬಹುದಾಗಿದೆ ಎಂದರೆ ಸರಿ. ಅರ್ಜಿದಾರನಿಗೆ ಮುಂದಿನ ಚಿಕಿತ್ಸೆಗಾಗಿ ರೂ.80,000/- ಖರ್ಚು ಬರುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಮಾತ್ರ ಹೇಳಿದ್ದೇನೆ ಮತ್ತು ಅದನ್ನು ನಿಪಿ-21ರಲ್ಲಿ ಹೇಳಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ಭವಿಷ್ಯದಲ್ಲಿ ಮುಂದುವರಿದ ಚಿಕಿತ್ಸೆಗಾಗಿ ರೂ.80,000/- ಬರುತ್ತದೆ ಎಂದು ಕೆಎಂಸಿಯ ಯಾವುದೇ ದಾಖಲೆಗಳಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ನಾನು ಹೇಳಿದಂತೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ, ಆತನಿಗೆ ಸಹಾಯ ಮಾಡಲು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಚಿಕಿತ್ಸೆ ಕೊಟ್ಟ ವೈದ್ಯರು ಮಾತ್ರ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಲು ಬರುತ್ತದೆ, ಮತ್ತು ನನಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದರೆ ಸರಿಯಲ್ಲ.

**(1ನೇ ಎದುರುದಾರರ ಪರ ವಕೀಲರು ನಿವೃತ್ತಿಯಾಗಿದ್ದು 2ನೇ ಎದುರುದಾರ ಎಕ್ಸಪಾರ್ಟೆಯಾಗಿರುತ್ತಾರೆ. ಆದ್ದರಿಂದ 1ನೇ ಮತ್ತು 2ನೇ ಎದುರುದಾರರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

**ಮರುವಿಚಾರಣೆ ಇಲ್ಲ.**
**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ**
**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**

**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 20-07-2023**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,

ಈ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

